

ಗ್ರಂಥಾಲಯ ಹಾಗೂ ಸೆಮಿನಾರ್ ಹಾಲ್




ವಿಶ್ವ ಪರಿಸರ ದಿನಾಚರಣೆ



ಎನ್.ಎಸ್.ಎಸ್. ಸ್ವಯಂ ಸೇವಕರಿಂದ ಸ್ವಚ್ಛತಾ ಅಭಿಯಾನ



ಆಡಳಿತ ಮಂಡಳಿಯ ಸಭೆ



ಶ್ರೀ ಆರ್. ರಾಮನಗೌಡ್ರು, ಅಧ್ಯಕ್ಷರು, ವೀ.ವಿ.ಸಂಘ, ಬಳ್ಳಾರಿ ಇವರಿಗೆ ಗೌರವ ಸನ್ಮಾನ



ಒಳಾಂಗಣ ಕ್ರೀಡೆಯಲ್ಲಿ ವಿದ್ಯಾರ್ಥಿಗಳು



# ಅಂಬ್ಲಿ ನುಡಿ

ವಾರ್ಷಿಕ ವಿಶೇಷ ಸಂಚಿಕೆ 2022–23

# Ambli Nudi

## College Annual Magazine

**ಅಂಬ್ಲಿ ದೊಡ್ಡ ಭರಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯ**

ನ್ಯಾಕ್ 'ಬಿ' ಗ್ರೇಡ್ ಮಾನ್ಯತೆ

ಹರಪನಹಳ್ಳಿ - 583131, ವಿಜಯನಗರ ಜಿಲ್ಲೆ



ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿಗಳು



ಬಿ.ಎಸ್ಸಿ. ಅಂತಿಮ ವರ್ಷದ ವಿದ್ಯಾರ್ಥಿಗಳು




ಬಾಗಳಿಯಲ್ಲಿ ರಾ.ಸೇ.ಯೋಜನೆ ಕಾರ್ಯಕ್ರಮ ಉದ್ಘಾಟನೆ



ಐ.ಕ್ಯೂ.ಎ.ಸಿ. ಕೋಆರ್ಡಿನೇಟರ್



ಬಿ.ಕಾಂ. ಅಂತಿಮ ವರ್ಷದ ವಿದ್ಯಾರ್ಥಿಗಳು



ಸುವರ್ಣ ಸಂಭ್ರಮ ಜಿ.ಬಿ.ಆರ್. ಕಾಲೇಜು ಹಡಗಲಿಯಲ್ಲಿ
ನಮ್ಮ ವಿದ್ಯಾರ್ಥಿಗಳ ಜಾನಪದ ನೃತ್ಯಕ್ಕೆ ಪ್ರಥಮ ಸ್ಥಾನ



ರಾ.ಸೇ.ಯೋಜನೆಯ ಸ್ವಯಂ ಸೇವಕರಿಂದ ಸ್ವಚ್ಛತಾ ಶ್ರಮದಾನ




ಬಾಗಳಿಯಲ್ಲಿ ರಾ.ಸೇ.ಯೋಜನೆ ಕಾರ್ಯಕ್ರಮದಲ್ಲಿ
ಪಂಡಿತ ಡಾ॥ ಹೊಸೂರಪ್ಪನವರಿಗೆ ಸನ್ಮಾನ



ಬಾಗಲಕೋಟೆಯಲ್ಲಿ ನಡೆದ ತಾಲ್ ಸೈನಿಕ ಕ್ಯಾಂಪಿನಲ್ಲಿ
ಭಾಗವಹಿಸಿದ ವಿದ್ಯಾರ್ಥಿಗಳು



ಕು॥ ವಿಂದು ಕೆ. ಇವರು
2021-22ನೇ ಸಾಲಿನ ಬಿ.ಎಸ್ಸಿ. 7ನೇ ರ್‍ಯಾಂಕ್



ಸಸ್ಯಶಾಸ್ತ್ರ ವಿಭಾಗದ ಅಧ್ಯಯನ ನಿರತ ವಿದ್ಯಾರ್ಥಿಗಳು




ಯಕ್ಷಗಾನ ತರಬೇತಿ ಪಡೆದ ನಮ್ಮ ವಿದ್ಯಾರ್ಥಿಗಳು

# ಅಂಬ್ಲಿ ನುಡಿ

ಕಾಲೇಜು ವಾರ್ಷಿಕ ವಿಶೇಷ ಸಂಚಿಕೆ 2022-23

# AMBLI NUDI

## College Annual Magazine 2022-23

ಸಂಪಾದಕ ಮಂಡಳಿ

**ಡಾ. ಎಸ್.ಎಂ. ಸಿದ್ಧಲಿಂಗಮೂರ್ತಿ**
ಪ್ರಧಾನ ಸಂಪಾದಕರು

**ಪ್ರೊ. ಜಿ.ಬಿ. ನಾಗನಗೌಡ**
**ಡಾ. ಎ.ಎಂ. ರಾಜಶೇಖರಯ್ಯ**
ಸಂಪಾದಕರು

ಸದಸ್ಯರು

ಶ್ರೀಮತಿ ಹೆಚ್. ಆಶಾ
ಡಾ. ಡಿ. ತಿಪ್ಪೇಸ್ವಾಮಿ
ಪ್ರೊ. ಎಸ್. ಆನಂದ
ಶ್ರೀ ಬಸಲಿಂಗಪ್ಪ
ಶ್ರೀ ಸಿ. ನವಾಜ್‌ಬಾಷ
ಶ್ರೀ ಗೋವರ್ಧನ ಜಿ.
ಡಾ. ಆರ್. ಅಣ್ಣೇಶಿ
ಡಾ. ಮಧುಕುಮಾರ ಡಿ.ಜೆ.

ಅಂಬ್ಲಿ ದೊಡ್ಡಭರಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯ
ಹರಪನಹಳ್ಳಿ – 583131, ವಿಜಯನಗರ ಜಿಲ್ಲೆ

**Ambli Nudi,** College Annual Magazine 2022-23 ADB First Grade College, Harapanahalli
Published by : Sri Kori Virupakshappa, Chairman, College Governing Body, Harapanahalli
Phone : 08398-280244

**ಅಂಬ್ಲಿ ನುಡಿ,** ಕಾಲೇಜು ವಾರ್ಷಿಕ ಸಂಚಿಕೆ–2022–23, ಅಂಬ್ಲಿ ದೊಡ್ಡಭರಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯ, ಹರಪನಹಳ್ಳಿ, ಪ್ರಕಾಶಕರು : **ಶ್ರೀ ಕೋರಿ ವಿರುಪಾಕ್ಷಪ್ಪ,** ಅಧ್ಯಕ್ಷರು, ಕಾಲೇಜು ಆಡಳಿತ ಮಂಡಳಿ, ಹರಪನಹಳ್ಳಿ ದೂರವಾಣಿ : 08398 280244

ಪುಟ ಸಂಖ್ಯೆ : iv+12+60

ಪ್ರತಿಗಳು : 1000

ಪ್ರಕಟಣಾ ವರ್ಷ : 2022–23

ಡಿ.ಟಿ.ಪಿ. ಸಂಯೋಜನೆ
ಮತ್ತು ಮುಖ ಪುಟ ವಿನ್ಯಾಸ : ಎ.ಪಿ. ಸುಪ್ರೀತ್

ಮುದ್ರಣ : **ಬಸವೇಶ್ವರ ಮುದ್ರಣ**
ಶಿವಯೋಗಿ ಮಂದಿರ ಕಾಂಪ್ಲೆಕ್ಸ್
ಹದಡಿ ರಸ್ತೆ, **ದಾವಣಗೆರೆ – 577 002.**
ದೂರವಾಣಿ : 08192 231053

# ಬೋಧಕ ಸಿಬ್ಬಂದಿ

**ಡಾ. ಎಸ್.ಎಂ. ಸಿದ್ಧಲಿಂಗಮೂರ್ತಿ,** ಪ್ರಾಚಾರ್ಯರು

**ಕನ್ನಡ ವಿಭಾಗ :**
**ಡಾ. ಡಿ. ತಿಪ್ಪೇಸ್ವಾಮಿ,** ಮುಖ್ಯಸ್ಥರು
**ಡಾ. ಎ.ಎಂ. ರಾಜಶೇಖರಯ್ಯ,** ಸಹಾಯಕ ಪ್ರಾಧ್ಯಾಪಕರು
**ಶ್ರೀಮತಿ ಸ್ವರ್ಣ ಎಂ.ಸಿ.,** ಉಪನ್ಯಾಸಕರು

**ಇಂಗ್ಲೀಷ್ ವಿಭಾಗ :**
**ಪ್ರೊ. ಜಿ.ಬಿ. ನಾಗನಗೌಡ,** ಮುಖ್ಯಸ್ಥರು
**ಕು॥ ಯು. ಸಮ್ರೀನ್,** ಉಪನ್ಯಾಸಕರು
**ಶ್ರೀ ಡಿ. ಭರತ್,** ಉಪನ್ಯಾಸಕರು

**ಇತಿಹಾಸ ವಿಭಾಗ :**
**ಶ್ರೀ ಹೆಚ್.ವಿ. ಪ್ರಭುದೇವ,** ಮುಖ್ಯಸ್ಥರು
**ಡಾ. ರಮೇಶ್ ಹಾದಿಮನಿ,** ಉಪನ್ಯಾಸಕರು

**ಅರ್ಥಶಾಸ್ತ್ರ ವಿಭಾಗ :**
**ಡಾ. ಅಣ್ಣೇಶಿ ಆರ್.,** ಮುಖ್ಯಸ್ಥರು
**ಶ್ರೀ ವೀರೇಶ ಗಡ್ಡಿ,** ಉಪನ್ಯಾಸಕರು

**ರಾಜ್ಯಶಾಸ್ತ್ರ ವಿಭಾಗ :**
**ಶ್ರೀ ಟಿ. ಷಫೀಉಲ್ಲಾ,** ಮುಖ್ಯಸ್ಥರು

**ಶಿಕ್ಷಣಶಾಸ್ತ್ರ ವಿಭಾಗ :**
**ಡಾ. ಆರುಂಡಿ ಸುವರ್ಣ,** ಮುಖ್ಯಸ್ಥರು

**ಭೌತಶಾಸ್ತ್ರ ವಿಭಾಗ :**
**ಶ್ರೀಮತಿ ಹೆಚ್. ಆಶಾ,** ಮುಖ್ಯಸ್ಥರು
**ಕು॥ ಕೆ. ಅಕ್ಷತ,** ಉಪನ್ಯಾಸಕರು

**ರಾಸಾಯನಶಾಸ್ತ್ರ ವಿಭಾಗ :**
**ಪ್ರೊ. ಎಸ್. ಆನಂದ,** ಮುಖ್ಯಸ್ಥರು
**ಡಾ. ಡಿ.ಜೆ. ಮಧುಕುಮಾರ್,** ಸಹಾಯಕ ಪ್ರಾಧ್ಯಾಪಕರು
**ಕು॥ ಎಂ. ತೇಜಸ್ವಿನಿ,** ಉಪನ್ಯಾಸಕರು

**ಸಸ್ಯಶಾಸ್ತ್ರ ವಿಭಾಗ :**
**ಡಾ. ಎಸ್.ಎಂ. ಸಿದ್ಧಲಿಂಗಮೂರ್ತಿ,** ಮುಖ್ಯಸ್ಥರು
**ಶ್ರೀ ಜಿ. ಗೋವರ್ಧನ,** ಸಹಾಯಕ ಪ್ರಾಧ್ಯಾಪಕರು
**ಕು॥ ವಿಜಯಲಕ್ಷ್ಮಿ ಟಿ.,** ಉಪನ್ಯಾಸಕರು

**ಗಣಿತಶಾಸ್ತ್ರ ವಿಭಾಗ :**
**ಶ್ರೀಮತಿ ಯು.ಎಂ. ಕಾವ್ಯ,** ಮುಖ್ಯಸ್ಥರು
**ಕು॥ ಕಾವ್ಯ ಸಕ್ರಗೌಡ್ರು,** ಉಪನ್ಯಾಸಕರು

**ಪ್ರಾಣಿಶಾಸ್ತ್ರ ವಿಭಾಗ :**
**ಶ್ರೀಮತಿ ಟಿ.ಹೆಚ್.ಎಂ. ಸೌಮ್ಯ,** ಉಪನ್ಯಾಸಕರು
**ಶ್ರೀಮತಿ ಸೌಮ್ಯ ಚಿತ್ತವಾಡಗಿ,** ಉಪನ್ಯಾಸಕರು

**ವಾಣಿಜ್ಯಶಾಸ್ತ್ರ ವಿಭಾಗ :**
**ಶ್ರೀ ಹೆಚ್.ಎಸ್. ವೆಂಕಟೇಶ್,** ಮುಖ್ಯಸ್ಥರು
**ಶ್ರೀ ಆನಂದ ಕುರುವಿನ,** ಉಪನ್ಯಾಸಕರು
**ಶ್ರೀ ಕೆ. ಕೊಟ್ರಗೌಡ,** ಉಪನ್ಯಾಸಕರು
**ಕು॥ ಎಸ್. ಪೂರ್ಣಿಮ,** ಉಪನ್ಯಾಸಕರು


**ದೈಹಿಕ ಶಿಕ್ಷಣ ವಿಭಾಗ :**
**ಶ್ರೀ ಸಿ. ನವಾಜ್ ಭಾಷಾ,** ದೈಹಿಕ ಶಿಕ್ಷಣ ನಿರ್ದೇಶಕರು
**ಶ್ರೀ ಎಸ್.ಎಂ. ವೀರಯ್ಯ,** ಸಹಾಯಕ

**ಗ್ರಂಥಾಲಯ ವಿಭಾಗ :**
**ಶ್ರೀ ಬಸಲಿಂಗಪ್ಪ,** ಗ್ರಂಥಪಾಲಕರು
**ಶ್ರೀ ಕೆ. ಮಂಜುನಾಥ,** ಗ್ರಂಥಾಲಯ ಸಹಾಯಕರು

## ಬೋಧಕೇತರ ಸಿಬ್ಬಂದಿ

**ಕು॥ ಎನ್. ಕಲ್ಪನಾ**
**ಶ್ರೀ ಎಸ್. ರವೀಂದ್ರ**
**ಶ್ರೀ ಕೊಟ್ರಗೌಡ ಎನ್.ಜಿ.**
**ಶ್ರೀ ಶಿವಕುಮಾರ್ ಟಿ.**
**ಶ್ರೀ ಕೆ. ಚೆನ್ನಪ್ಪ**
**ಶ್ರೀ ಡಿ. ನಾಗರಾಜ**

# ಸಂಪಾದಕರ ಮಾತು



ಸೃಜನ ಕಲೆಯನ್ನು ಉತ್ತೇಜಿಸುವ ಗುರಿಯೊಂದಿಗೆ ಶೈಕ್ಷಣಿಕ ವರ್ಷದ ಚಟುವಟಿಕೆಗಳನ್ನು ಬಿಂಬಿಸುವ ಕಾಲೇಜು ವಾರ್ಷಿಕ ಸಂಚಿಕೆ 'ಅಂಬ್ಲಿ ನುಡಿ 2022–23' ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತಪ್ರತಿಭೆ, ಸೃಜನಶೀಲತೆ, ಸಾಮಾಜಿಕ ಕಳಕಳಿ, ವೈಚಾರಿಕತೆ, ಚುಟುಕು, ಕಥೆ, ಜೀವನ ಚಿತ್ರಣ ಮುಂತಾದ ಬರಹಗಳನ್ನು ಅನಾವರಣಗೊಳಿಸುವ ಒಂದು ಸಣ್ಣ ಪ್ರಯತ್ನ. ಇದರೊಂದಿಗೆ ಅನುಭವಿ ಪ್ರಾಧ್ಯಾಪಕರು ತಮ್ಮ ಸಾಹಿತ್ಯಿಕ ಚಿಂತನಾ ಬರವಣಿಗೆಗಳನ್ನು ನೀಡಿ ಸಂಚಿಕೆಗೆ ವಿಶೇಷ ಮೆರಗನ್ನು ನೀಡಿದ್ದಾರೆ.

ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶವಾದ ಹರಪನಹಳ್ಳಿಗೆ ಉನ್ನತ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಶಿಕ್ಷಣ ಪ್ರೇಮಿಯಾದ ಲಿಂಗೈಕ್ಯ ಶ್ರೀ ಅಂಬ್ಲಿ ಮಲ್ಲಪ್ಪನವರು ಮತ್ತು ಸ್ಥಳ ದಾನಿಗಳಾದ ಜಿನೈಕ್ಯ ಶ್ರೀ ಷಾ. ಶೇಷಾಜಿ ಹಸ್ತಿಮಲ್ ಜೈನ್, ಜೊತೆಗೆ ಲಿಂಗೈಕ್ಯ ಶ್ರೀ ಕೆ. ದಿವಾಕರ ವಕೀಲರ ಶಿಕ್ಷಣದ ಕಾಳಜಿಯೊಂದಿಗೆ, ಶೈಕ್ಷಣಿಕ ಕಾರ್ಯ ತತ್ಪರತೆಯನ್ನು ಮೈಗೂಡಿಸಿಕೊಂಡಿದ್ದ ಲಿಂಗೈಕ್ಯ ಶ್ರೀ ಟಿ.ಎಂ. ಗಂಗಾಧರಯ್ಯ ಹಾಗೂ ದಿವಂಗತ ಶ್ರೀ ಕಟ್ಟೆ ಸೇತೂರಾಮಾಚಾರಿ ಇವರುಗಳ ಒತ್ತಾಸೆಯಿಂದ ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ 1972ರಲ್ಲಿ ಪ್ರಾರಂಭವಾದ 'ಅಂಬ್ಲಿ ದೊಡ್ಡ ಭರಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯ' ಇಂದು ಪ್ರತಿಷ್ಠಿತ ಕಾಲೇಜಾಗಿ ಹೊರಹೊಮ್ಮಿದೆ.

ಅಂಬ್ಲಿ ನುಡಿ–2022 ಸ್ಮರಣ ಸಂಚಿಕೆಯ ಅಭಿದಾನದ 'ಅಂಬ್ಲಿ' ಹೊಟ್ಟೆಹಸಿವನ್ನು ತಣಿಸುವ ದೇಹ ಪೋಷಿಸುವ ಬಡವರ ಪಾಲಿನ ಅಮೃತ ಅಂಬಲಿ. ಜಾನಪದ ನುಡಿಯಲ್ಲಿ ಅಂಬ್ಲಿ ಎಂದೆನಿಸುವ ಈ ಹೆಸರು ಮಹಾವಿದ್ಯಾಲಯದ ರೂವಾರಿಗಳಾದ ಶ್ರೀ ಮಲ್ಲಪ್ಪನವರ ಮನೆತನದ ಹೆಸರು. ಹಸಿದವರ ಒಡಲಿಗೆ ಆಹಾರವನ್ನು ನೀಡುವ ಔದಾರ್ಯದ ಕುಟುಂಬವೇ ಅಂಬ್ಲಿ ಕುಟುಂಬ. 'ಹೊಟ್ಟೆಗೆ ಅನ್ನ ನೆತ್ತಿಗೆ ಜ್ಞಾನ' ಎನ್ನುವ ಧೋರಣೆಯನ್ನು ಮೈಗೂಡಿಸಿಕೊಂಡಿರುವ ಈ ಕುಟುಂಬ ಬಡವಿದ್ಯಾರ್ಥಿಗಳ ವಿದ್ಯಾ ಜೋಳಿಗೆಗೆ ಜ್ಞಾನದ ಅಂಬಲಿಯನ್ನು ಉಣಬಡಿಸಿ ಅವರ ಜೀವನಕ್ಕೆ ದಾರಿ ದೀಪವಾಗಿರುವುದು ಅಜರಾಮರ. ಈ 'ಅಂಬ್ಲಿ ನುಡಿ' ವಾರ್ಷಿಕ ವಿಶೇಷ ಸಂಚಿಕೆಯನ್ನು ಪ್ರಕಟಿಸಲು ಪ್ರೋತ್ಸಾಹಿಸಿದ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ಕೋರಿ ವಿರುಪಾಕ್ಷಪ್ಪ ಹಾಗೂ ಸದಸ್ಯರಾದ ಶ್ರೀ ಕೆ.ಎಂ. ಬಸವರಾಜಯ್ಯ, ಶ್ರೀಮತಿ ಅಮೃತ ಮಂಜುನಾಥ, ಶ್ರೀಮತಿ ಶೈಲಜಾ ಎಂ. ಅಂಬ್ಲಿ, ಶ್ರೀ ಪಿ.ಜಿ. ದೊಡ್ಡಬಸಪ್ಪ ಮತ್ತು ಕಾಲೇಜಿನ ಪ್ರಾಚಾರ್ಯರಾದ ಡಾ|| ಎಸ್.ಎಂ. ಸಿದ್ಧಲಿಂಗಮೂರ್ತಿಯವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ನನ್ನೊಂದಿಗೆ ಶ್ರಮಿಸುತ್ತಿರುವ ಸಂಪಾದಕ ಮಂಡಳಿ ಸದಸ್ಯರು, ಸಹೋದ್ಯೋಗಿ ಪ್ರಾಧ್ಯಾಪಕರಿಗೆ ಹಾಗೂ ಮುತುವರ್ಜಿಯಿಂದ ಅಕ್ಷರ ರೂಪದಲ್ಲಿ ಲೇಖನ ಬರೆದುಕೊಟ್ಟ ನನ್ನ ನೆಚ್ಚಿನ ವಿದ್ಯಾರ್ಥಿಬಳಗಕ್ಕೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅಂಬ್ಲಿ ನುಡಿ–22 ಅಂದವಾಗಿ ಮುದ್ರಿಸಿದ ದಾವಣಗೆರೆಯ ಬಸವೇಶ್ವರ ಮುದ್ರಣದ ಸುಪ್ರೀತ್ ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು.

**– ಪ್ರೊ. ಜಿ.ಬಿ. ನಾಗನಗೌಡ**
**ಡಾ. ಎ.ಎಂ. ರಾಜಶೇಖರಯ್ಯ**
ಸಂಪಾದಕರು

# ಜ್ಞಾನದ ಕಣಜ ಎ.ಡಿ.ಬಿ. ಮಹಾವಿದ್ಯಾಲಯ

– ಡಾ॥ ಡಿ. ತಿಪ್ಪೇಸ್ವಾಮಿ
ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ವಾಸ್ತುಶಿಲ್ಪದ ಶ್ರೀಮಂತಿಕೆಯನ್ನು ಬಾಗಳಿ, ನೀಲಗುಂದದಲ್ಲಿ, ಸಾಹಿತ್ಯಿಕವಾಗಿ ಬೀಚಿ, ಭೀಮವ್ವ ಹಾಗೂ ರಾಜಕೀಯವಾಗಿ ಮಾಜಿ ಮುಖ್ಯಮಂತ್ರಿ ಮಾನ್ಯ ಎಸ್. ನಿಜಲಿಂಗಪ್ಪನವರಿಗೆ ಜನ್ಮಕೊಟ್ಟ ತಾಲ್ಲೂಕು ಹರಪನಹಳ್ಳಿಯಾಗಿದೆ. ಒಂದು ಕಾಲದಲ್ಲಿ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಕಂಡ ಇಲ್ಲಿ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಗಗನ ಕುಸುಮ ಮರೀಚಿಕೆಯಾಗಿದ್ದ ಕಾಲದಲ್ಲಿ 1972ರ ಸುಮಾರಿಗೆ ಹರಪನಹಳ್ಳಿಯ ದಿ॥ ಶ್ರೀ ಕಟ್ಟೆ ಸೇತೂರಾಮಾಚಾರಿ, ದಿ॥ ಶ್ರೀ ಟಿ.ಎಂ. ಗಂಗಾಧರಯ್ಯ, ದಿ॥ ಶ್ರೀ ಕೆ. ದಿವಾಕರ ವಕೀಲರು, ಅಂಬ್ಲಿ, ಲಿಂಗದಹಳ್ಳಿ ಜಿಟ್ಟಿನಕಟ್ಟೆ, ಗೊಂಗಡಿ, ತೆಗ್ಗಿನಮಠ ಮತ್ತು ಪಾಟೀಲ ಮನೆತನದ ಮುಖಂಡರುಗಳೊಂದಿಗೆ ಸಮಾಲೋಚಿಸಿ, ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ನೇತೃತ್ವದಲ್ಲಿ ಎ.ಡಿ.ಬಿ. ಪ್ರಥಮ ದರ್ಜೆ ಕಾಲೇಜನ್ನು ಸ್ಥಾಪಿಸಲು ಮುಂದಾದರು. ಹರಪನಹಳ್ಳಿಯ ಪ್ರಸಿದ್ಧ ವರ್ತಕರೂ, ಉದಾರಿಗಳೂ ಆದ ದಿ॥ ಶ್ರೀ ಅಂಬ್ಲಿ ಮಲ್ಲಪ್ಪನವರು ಅವರ ತಂದೆಯವರಾದ ಶ್ರೀ ಅಂಬ್ಲಿ ದೊಡ್ಡ ಭರಮಪ್ಪನವರ ಸ್ಮರಣಾರ್ಥ ಕಾಲೇಜಿನ ಕಟ್ಟಡಕ್ಕಾಗಿ 50,001 ರೂಪಾಯಿಗಳನ್ನು ದಾನ ನೀಡಿದರು. ವರ್ತಕರೂ ಉದಾರಿಗಳೂ ಆದ ದಿ॥ ಶ್ರೀ ಷಾ. ಶೇಷಾಜಿ ಹಸ್ತಿಮಲ್ ಜೈನ್ ಇವರು ಕಾಲೇಜಿಗೆ 6 ಎಕರೆ 92 ಸೆಂಟ್ಸ್ ಭೂಮಿಯನ್ನು ದಾನಮಾಡಿದರು. ದಿ॥ ಶ್ರೀ ಅಂಬ್ಲಿ ಮಲ್ಲಪ್ಪನವರು ತಮ್ಮ ತಂದೆ ಶ್ರೀ ಅಂಬ್ಲಿ ಭರಮಪ್ಪನವರ ಹೆಸರನ್ನು ಈ ದಾನದ ಮೂಲಕ ಚಿರಸ್ಥಾಯಿ ಯಾಗಿಸಿದರು. ತನ್ಮೂಲಕ ಅಪಾರ ಹಿಂದುಳಿದ, ಬಡಮಕ್ಕಳ ಓದಿಗೆ ಕಾರಣಕರ್ತರಾದರು.

1972ರ ಜುಲೈನಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ ಇವರಿಂದ ಉದ್ಘಾಟನೆಯಾದ ಈ ಕಾಲೇಜು ಈಗ 50ವರ್ಷ ಪೂರೈಸುತ್ತಾ ಸುವರ್ಣ ಮಹೋತ್ಸವ ಸಂಭ್ರಮದಲ್ಲಿದೆಯೆಂಬುದು ಹೆಮ್ಮೆಯ ಸಂಗತಿಯಾಗಿದೆ. ಆರಂಭದಲ್ಲಿ ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾಗಿ ದಿ॥ ಶ್ರೀ ಅಂಬ್ಲಿ ಮಲ್ಲಪ್ಪನವರು, ಉಪಾಧ್ಯಕ್ಷರಾಗಿ ದಿ॥ ಶ್ರೀ ಷಾ. ಶೇಷಾಜಿ ಹಸ್ತಿಮಲ್ ಜೈನ್‌ರವರು, ಕಾರ್ಯದರ್ಶಿಗಳಾಗಿ, ಟಿ.ಎಂ. ಗಂಗಾಧರಯ್ಯ ಮತ್ತು ದಿ॥ ಶ್ರೀ ಕೆ. ದಿವಾಕರ ವಕೀಲರು ಕಾರ್ಯನಿರ್ವಹಿಸಿದ್ದಾರೆ. ಕಾಲೇಜು ಎರಡು ಕೊಠಡಿ ಗಳಿಂದ ಆರಂಭವಾದ ಸಂದರ್ಭದಲ್ಲಿ ಕಾಲೇಜಿನ ಕಛೇರಿಗಾಗಿ ಕೆ. ದಿವಾಕರ ವಕೀಲರು ತಮ್ಮ ಮನೆಯ ಒಂದು ಭಾಗವನ್ನೇ ತಾತ್ಕಾಲಿಕವಾಗಿ ಬಿಟ್ಟುಕೊಟ್ಟದ್ದನ್ನು ಇಲ್ಲಿ ನೆನೆಯಬಹುದು ಅಷ್ಟೆ ಅಲ್ಲದೆ. ದಿ॥ ಶ್ರೀ ಅಂಬ್ಲಿ ಮಲ್ಲಪ್ಪನವರು ಆರಂಭದ ಕೆಲವು ತಿಂಗಳುಗಳ ಕಾಲ ಉಪನ್ಯಾಸಕರಿಗೆ ಕಟ್ಟಡ ಕೂಲಿ ಕಾರ್ಮಿಕರಿಗೆ ವೇತನ ವನ್ನು ನೀಡಿ ಔದಾರ್ಯವನ್ನು ತೋರಿಸಿದ್ದು ಇತಿಹಾಸ ವಾಗಿದೆ.

ಆರಂಭದಲ್ಲಿ ಕೇವಲ ಎರಡು ಕೊಠಡಿಗಳು ನಾಲ್ವರು ಉಪನ್ಯಾಸಕರು, ಇಬ್ಬರು ಬೋಧಕೇತರ ಸಿಬ್ಬಂದಿಗಳಿಂದ ಕೂಡಿದ, 50 ವಿದ್ಯಾರ್ಥಿಗಳೊಂದಿಗೆ ಆರಂಭವಾದ ಕಾಲೇಜು ಈಗ 28 ವಿಶಾಲ ತರಗತಿ ಕೊಠಡಿ, 35 ಮಂದಿ ಉಪನ್ಯಾಸಕರು, 15 ಬೋಧಕೇತರ ಸಿಬ್ಬಂದಿಯಿಂದ ನೂರಾರು ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅವಕಾಶವಾಗಿದೆ. ಆರಂಭದಿಂದ ಈಗಿನ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ಕೋರಿ ವಿರುಪಾಕ್ಷಪ್ಪ ಇವರನ್ನೊಳಗೊಂಡಂತೆ 13 ಮಹನೀಯರು ಅಧ್ಯಕ್ಷರಾಗಿ, ಕಾಲೇಜಿನ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದಾರೆ. ಮಾನ್ಯ ಪಿ.ವೈ. ರೆಡ್ಡಿಯವರನ್ನೊಳಗೊಂಡಂತೆ ಈಗಿನ ಡಾ. ಎಸ್.ಎಂ. ಸಿದ್ದಲಿಂಗಮೂರ್ತಿಯವರನ್ನೊಳಗೊಂಡು 23 ಜನ ಪ್ರಾಚಾರ್ಯರು ಕಾರ್ಯನಿರ್ವಹಿಸಿದ್ದಾರೆ.

### ಇದುವರೆಗಿನ ರ್‍ಯಾಂಕ್ ವಿಜೇತರ ವಿವರ :

| | | | |
|---|---|---|---|
| 1. | ಕು. ಭಾಸ್ಕರ್ ಬಾಬು, ಬಿ.ಎಸ್ಸಿ., | 8ನೇ ರ್‍ಯಾಂಕ್ | 1978–79 |
| 2. | ಕು. ಎಂ.ಸಿ. ಮೀನಾಕ್ಷಮ್ಮ, ಬಿ.ಎಸ್ಸಿ., | 3ನೇ ರ್‍ಯಾಂಕ್ | 1987–88 |
| 3. | ಕು. ಎಂ. ಗೋದಾವರಿ, ಬಿ.ಎಸ್ಸಿ., | 10ನೇ ರ್‍ಯಾಂಕ್ | 1988–89 |
| 4. | ಕು. ಅಂಬ್ಲಿ ಸುನೀತಾ, ಬಿ.ಎಸ್ಸಿ., | 9ನೇ ರ್‍ಯಾಂಕ್ | 1990–91 |
| 5. | ಕು. ಅಂಬ್ಲಿ ಸಂಗೀತಾ, ಬಿ.ಎಸ್ಸಿ., | 3ನೇ ರ್‍ಯಾಂಕ್ | 1994–95 |
| 6. | ಕು. ಪಿ. ಗೀತಾ, ಬಿ.ಎಸ್ಸಿ., | 8ನೇ ರ್‍ಯಾಂಕ್ | 1995–96 |
| 7. | ಕು. ಆರ್. ಮಂಜುಳಾ, ಬಿ.ಎಸ್ಸಿ., | 7ನೇ ರ್‍ಯಾಂಕ್ | 1996–97 |
| 8. | ಕು. ಕೆ. ನಾಗರೂಪ, ಬಿ.ಎಸ್ಸಿ., | 1ನೇ ರ್‍ಯಾಂಕ್ | 2000–01 |
| 9. | ಕು. ಬಿ. ಸುಧಾ, ಬಿ.ಎಸ್ಸಿ., | 9ನೇ ರ್‍ಯಾಂಕ್ | 2000–01 |
| 10. | ಕು. ಕೆ. ಚರಣ್ ಕುಮಾರ್, ಬಿ.ಎಸ್ಸಿ., | 8ನೇ ರ್‍ಯಾಂಕ್ | 2008–09 |
| 11. | ಕು. ಕೆ. ಶೋಭಾ, ಬಿ.ಎಸ್ಸಿ., | 3ನೇ ರ್‍ಯಾಂಕ್ | 2009–10 |
| 12. | ಕು. ರಮ್ಯಾ ಮಾಳಗಿ, ಬಿ.ಎಸ್ಸಿ., | 10ನೇ ರ್‍ಯಾಂಕ್ | 2012–13 |
| 13. | ಕು. ಪಿ.ಎಂ. ಸಹನಾ, ಬಿ.ಎಸ್ಸಿ., | 10ನೇ ರ್‍ಯಾಂಕ್ | 2013–14 |
| 14. | ಕು. ಜಿ. ಉಷಾರಾಣಿ, ಬಿ.ಎಸ್ಸಿ., | 9ನೇ ರ್‍ಯಾಂಕ್ | 2014–15 |
| 15. | ಕು. ಹೆಚ್.ಎಂ. ಜ್ಯೋತ್ಸ್ನಾ, ಬಿ.ಎಸ್ಸಿ., | 7ನೇ ರ್‍ಯಾಂಕ್ | 2015–16 |
| 16. | ಕು. ಉದಯಕುಮಾರ ವಿ. ಬಿ.ಕಾಂ., | 7ನೇ ರ್‍ಯಾಂಕ್ | 2016–17 |
| 17. | ಕು. ಕಾವ್ಯ ಸಕ್ರಗೌಡ್ರು, ಬಿ.ಎಸ್ಸಿ., | 5ನೇ ರ್‍ಯಾಂಕ್ | 2019–20 |
| 18. | ಕು. ಪೂಜಾ ಬಿ. ಬಿ.ಎಸ್ಸಿ., | 6ನೇ ರ್‍ಯಾಂಕ್ | 2019–20 |
| 19. | ಕು. ವಿಂದು ಕೆ., ಬಿ.ಎಸ್ಸಿ., | 7ನೇ ರ್‍ಯಾಂಕ್ | 2021–22 |

ಈ ಮೇಲಿನ ವಿದ್ಯಾರ್ಥಿಗಳು ಬಿ.ಎಸ್ಸಿ.,/ಬಿ.ಕಾಂ., ತರಗತಿಗಳಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ವಿವಿಧ ರ್‍ಯಾಂಕ್ ಪಡೆದು ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.

ದೈಹಿಕ ಶಿಕ್ಷಣ ವಿಭಾಗದಲ್ಲಿ ಸಾಕಷ್ಟು ವಿದ್ಯಾರ್ಥಿಗಳು ವಿಶ್ವವಿದ್ಯಾಲಯ, ಅಂತರ ವಿಶ್ವವಿದ್ಯಾಲಯ, ರಾಷ್ಟ್ರ ಅಂತರರಾಷ್ಟ್ರ ಮಟ್ಟದಲ್ಲಿ ವಿವಿಧ ಕ್ರೀಡೆಗಳಲ್ಲಿ ಸಾಧನೆ ಮಾಡಿದ್ದಾರೆ. ನಮ್ಮ ಕಾಲೇಜಿನ ವಿದ್ಯಾರ್ಥಿಯಾದ ಕೋಟೆಪ್ಪ ಪಾರಿಯವರು ದೇಶ ವಿದೇಶಗಳಲ್ಲಿ ರಸಾಯನಶಾಸ್ತ್ರ ವಿಷಯದಲ್ಲಿ ಉನ್ನತ ಸಂಶೋಧನೆಯನ್ನು ಕೈಗೊಂಡು ವಿಜ್ಞಾನಿಯಾಗಿ ಹೆಸರು ಮಾಡಿದ್ದಾರೆ. ಶ್ರೀ ಸುರೇಶ್ ಯಡಿಹಳ್ಳಿ ಇವರು ಹರಪನಹಳ್ಳಿ ರಾಮಕೃಷ್ಣಾಶ್ರಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಡಿ॥ ಡಾ. ಉತ್ತಂಗಿ ಮಂಜುನಾಥ ಇವರು ಜಿಲ್ಲಾ ಪಂಚಾಯತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀ ಆರುಂಡಿ ನಾಗರಾಜ, ಶ್ರೀ ಹೆಚ್.ಕೆ. ಹಾಲೇಶ್ ಇವರು ರಾಜಕೀಯ ಕ್ಷೇತ್ರದಲ್ಲಿ ತೊಡಗಿಕೊಂಡು ಸಮಾಜ ಸೇವೆ ಮಾಡುತ್ತಿದ್ದಾರೆ.

ಎನ್.ಎಸ್.ಎಸ್. ವಿದ್ಯಾರ್ಥಿನಿಯಾದ ಕು. ಕೆ.ಎಂ. ಶ್ವೇತನಾಗ್, ಕು. ಎಂ. ಸಂಗೀತ ಗಣರಾಜ್ಯೋತ್ಸವದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಪಥಸಂಚಲನದಲ್ಲಿ ಭಾಗವಹಿಸಿದ್ದಾರೆ. ಎನ್.ಸಿ.ಸಿ. ವಿಭಾಗದಲ್ಲಿ ಕು. ಇಟ್ಟಿಗುಡಿ ಚನ್ನಬಸಪ್ಪ, ಕು. ಸತೀಶ್ ಎ.ಪಿ., ಕು. ನಾಗವಿಂದ್ಯ ಪಿ.ಕೆ., ಕು. ಸ್ವಾತಿ ರೋಖಡೆ ಮತ್ತು ಕು. ಎಲ್. ತ್ಯಾಕ್ರಾನಾಯ್ಕ ಇವರು ದೆಹಲಿಯ ಗಣರಾಜ್ಯೋತ್ಸವದ ಪರೇಡಿನಲ್ಲಿ ಇಲ್ಲಿಯವರೆಗೆ ಭಾಗವಹಿಸಿದ ವಿದ್ಯಾರ್ಥಿಗಳಾಗಿರುತ್ತಾರೆ.

ಕಾಲೇಜಿನ ಸುಸಜ್ಜಿತ ಪ್ರಯೋಗಾಲಯ, ಸ್ಮಾರ್ಟ್ ತರಗತಿ ಕೊಠಡಿಗಳು ಗ್ರಂಥಾಲಯ, ಕ್ರೀಡಾ ಎನ್.ಎಸ್.ಎಸ್. ಎನ್.ಸಿ.ಸಿ., ಭಾಷಾ ಪ್ರಯೋಗಾಲಯ ವಿನೂತನ ಸೆಮಿನಾರ್ ಹಾಲ್ ಇವು ವಿದ್ಯಾರ್ಥಿಗಳ ಜ್ಞಾನಾರ್ಜನೆಗೆ, ವ್ಯಕ್ತಿತ್ವ ವಿಕಸನಕ್ಕೆ ಆಧುನಿಕ ಜಗತ್ತಿನ ಸ್ಪರ್ಧಾ ಸವಾಲುಗಳನ್ನು ಎದುರಿಸಲು ಸಹಕಾರಿಯಾಗಿದೆ.

# "ಶಾಂತ ಸ್ವಭಾವ", "ಆತ್ಮಸ್ಥೈರ್ಯ"
# "ಸುಖಿ ಜೀವನದ ಅಂಶಗಳು"

– ರೇಣುಕಪ್ರಸಾದ ಕಲ್ಮಠ
ಬಿ.ಎ. ನಾಲ್ಕನೇ ಸೆಮಿಸ್ಟರ್

ಸಂಗತಿಗಳಲ್ಲಿ ಕೆಲವು ಸಂಗತಿಗಳು, ಅತಿಯಾದ ನೋವನ್ನು ನೀಡುತ್ತವೆ, ಅಂತಹ ಪರಿಸ್ಥಿತಿ ಎದುರಾದಾಗ ನಮ್ಮಲ್ಲಿರುವ ಆತ್ಮಸ್ಥೈರ್ಯ, ಹೋರಾಟದ ಮನಸ್ಸು, ಕೆಲವರ ಪ್ರಾಂಜಲ ಗುಣಗಳು, ನಮ್ಮನ್ನು ಪುನಃ ಪುಟಿದೇಳುವಂತೆ ಮಾಡಿ 'ಸಾಧನೆಯ ಶಿಖರವನ್ನು' ತಲುಪುವಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ.

ಇದಕ್ಕೆ ನಾವು ಒಂದು ಸಣ್ಣ ಉದಾಹರಣೆಯನ್ನು ಇಲ್ಲಿ ಗಮನಿಸೋಣ.

ಒಂದು ದಿನ ಭಾರತ ರಾಷ್ಟ್ರದ ಖ್ಯಾತ ಶೈಕ್ಷಣಿಕ ಸುಧಾರಕರು, ಶ್ರೇಷ್ಠ ತತ್ವಜ್ಞಾನಿಗಳೂ, ಕಲ್ಕತ್ತಾ ವಿಶ್ವವಿದ್ಯಾಲಯದ ಸ್ಥಾಪನೆಯ ಹರಿಕಾರರಾದ, "ಈಶ್ವರಚಂದ್ರ ವಿದ್ಯಾಸಾಗರ" ಅವರು ಕೋಲ್ಕತ್ತಾ ವಿಶ್ವವಿದ್ಯಾಲಯ ಸ್ಥಾಪಿಸುವ ಸಲುವಾಗಿ "ಅಯೋಧ್ಯೆಯ ನವಾಬ" ರಿಂದ ದೇಣಿಗೆ ಪಡೆಯಲು ಅವರನ್ನು ಭೇಟಿಯಾದರು. ವಿಶ್ವವಿದ್ಯಾಲಯದ ಸ್ಥಾಪನೆ ಕಾರ್ಯಸೂಚಿಗಳನ್ನು ಅವರಿಗೆ ವಿವರಿಸಿ ದೇಣಿಗೆ ಕೇಳಿದರು. ವಿದ್ಯಾಭ್ಯಾಸ, ವಿಶ್ವವಿದ್ಯಾಲಯಗಳ 'ಅರಿವು ಇರದ' ದಿವಾನರು ಅವರನ್ನು ತಿರಸ್ಕಾರ ಭಾವದಿಂದ ಕಂಡು ತನ್ನ ದಿವಾನ್‌ಖಾನೆಯ ಮೂಲೆಯತ್ತ ಬೆರಳು ತೋರಿ ನಿಮಗೆ ಅಲ್ಲಿ ಏನು ಕಾಣುತ್ತಿದೆ? ಎಂದು ಕೇಳಿದರು. ಆಗ ವಿದ್ಯಾಸಾಗರರು ಅತ್ಯಂತ ವಿನಯದಿಂದ ನಿಮ್ಮ ಪಾದರಕ್ಷೆಗಳ ಜೋಡಿ ಕಾಣಿಸುತ್ತಿದೆ ಎಂದರು. ನೀವು ಸ್ಥಾಪಿಸಲು ಬಯಸಿರುವ ವಿಶ್ವವಿದ್ಯಾಲಯಕ್ಕೆ ಅದನ್ನೇ ನನ್ನ ಕಾಣಿಕೆಯಾಗಿ ಕೊಡುತ್ತಿರುವೆ, ಸ್ವೀಕರಿಸಿ ಎಂದು ನವಾಬರು ಹೇಳಿದರು. ಆಗ ಕೋಪಗೊಳ್ಳದೆ ವಿದ್ಯಾಸಾಗರರು ಅತ್ಯಂತ ಶಾಂತಚಿತ್ತರಾಗಿ, ಮುಗುಳ್ನಗೆ ಬೀರುತ್ತಾ, ನವಾಬರತ್ತ ನೋಡಿ, ತಮ್ಮ ಹೃದಯ ವೈಶಾಲ್ಯತೆ ಹಾಗೂ ಉದಾರ ದೇಣಿಗೆಗೆ ನಾನು ಅತ್ಯಂತ ಋಣಿಯಾಗಿದ್ದೇನೆ ಎಂದು ಹೇಳಿ 'ನವಾಬರ ಪಾದರಕ್ಷೆಗಳನ್ನು ತಮ್ಮ ಕೈ ಚೀಲದಲ್ಲಿ ಹಾಕಿಕೊಂಡು' ಅಲ್ಲಿಂದ ಹೊರಟುಬಿಟ್ಟರು.

ನವಾಬರು ಮತ್ತು ಅಲ್ಲಿಯ ಜನ ವಿದ್ಯಾಸಾಗರರನ್ನು ಆಶ್ಚರ್ಯಚಕಿತರಾಗಿ ನೋಡುತ್ತ ನಿಂತರು. ಕೆಲವು ದಿನಗಳ ನಂತರ ಪತ್ರಿಕೆಗಳಲ್ಲಿ ಇಂದು "ಅಯೋಧ್ಯೆಯ ನವಾಬರ ಅತ್ಯಮೂಲ್ಯವಾದ ಪಾದರಕ್ಷೆಗಳನ್ನು ಹರಾಜು ಹಾಕಲಾಗುವುದು", ಆಸಕ್ತರು ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ಜಾಹೀರಾತನ್ನು ವಿದ್ಯಾಸಾಗರರು ನೀಡಿದರು. ಇದನ್ನು ಗಮನಿಸಿದ ನವಾಬರು ತಮ್ಮ ಪಾದರಕ್ಷೆಗೆ ಹರಾಜಿನಲ್ಲಿ ಒಳ್ಳೆಯ ಬೆಲೆ ಬಾರದಿದ್ದರೆ ಅದು ತಮಗೆ ಅತ್ಯಂತ ಅಪಮಾನದ ಸಂಗತಿ ಎಂದು ಭಾವಿಸಿದರು. ತಮ್ಮ ಅಧಿಕಾರಿಗಳನ್ನು ಮಾರುವೇಷದಲ್ಲಿ ಹರಾಜಿನಲ್ಲಿ ಭಾಗವಹಿಸಲು ಸೂಚಿಸಿ ಅವುಗಳನ್ನು ಒಳ್ಳೆಯ ಬೆಲೆಗೆ ಖರೀದಿಸಲು ನಿರ್ದೇಶನ ನೀಡಿದರು. ಹರಾಜು ಪ್ರಕ್ರಿಯೆ ಪ್ರಾರಂಭವಾಯಿತು. ಹರಾಜಿನಲ್ಲಿ ಬೆಲೆ ಹೆಚ್ಚಿಸುವಂತೆ ನೋಡಿಕೊಳ್ಳಲಾಯಿತು. ಕೊನೆಗೆ ನವಾಬರ ಅಧಿಕಾರಿಗಳೇ 'ಹತ್ತು ಸಾವಿರ ರೂಪಾಯಿಗಳಿಗೆ' ಖರೀದಿ ಮಾಡಿದರು. ವಿದ್ಯಾಸಾಗರರು ಹತ್ತು ಸಾವಿರ ರೂಪಾಯಿಗಳನ್ನು ಸ್ವೀಕರಿಸಿ ತಮ್ಮ ದೇಣಿಗೆ ಪುಸ್ತಕದಲ್ಲಿ ನಮೂದಿಸಿಕೊಂಡರು....

ಇಷ್ಟೆಲ್ಲ ಸಂಗತಿಗಳು ನಡೆದರು ಶಾಂತಮನಸನ್ನು ಹೊಂದಿದ್ದ ವಿದ್ಯಾಸಾಗರರು ಮತ್ತೊಂದು "ದಿನ ನವಾಬರ" ಬಳಿ ಹೋಗಿ ಅತ್ಯಂತ ವಿನಯದಿಂದ ನವಾಬರೇ, ಬಹುದೊಡ್ಡ ಮೌಲ್ಯದ ಹತ್ತು ಸಾವಿರ ರೂ. ಗಳನ್ನು ವಿಶ್ವವಿದ್ಯಾಲಯ ಸ್ಥಾಪನೆಗೆ ನೀಡಿದ್ದೀರಿ. ತಮ್ಮ ಉದಾರ ದೇಣಿಗೆಗೆ ನಾನು ಋಣಿಯಾಗಿದ್ದೇನೆ, ತಮಗೆ ನಾನು ಮತ್ತೊಮ್ಮೆ ಅತ್ಯಂತ ಹೃದಯಪೂರ್ವಕವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು. ನವಾಬರಿಗೆ ತಮ್ಮ ತಪ್ಪಿನ ಅರಿವಾಗಿತ್ತು. ನಾಚಿಕೆಯಿಂದ ಅವರು ವಿದ್ಯಾಸಾಗರರ ಮುಂದೆ ತಲೆ ತಗ್ಗಿಸಿದರು.

ಈ ಸಣ್ಣ ಘಟನೆಯಿಂದ ತಿಳಿಯುವುದು ಇಷ್ಟೇ, ಯಾವುದೇ ಸನ್ನಿವೇಶವನ್ನು, ಅಪಮಾನವನ್ನು, ಸೋಲೆಂದು ಪರಿಭಾವಿಸಿ ಕುಗ್ಗಿ ಧೃತಿಗೆಡುವ ಬದಲಾಗಿ,

ಅದನ್ನು ನಮ್ಮ ಮುಂದಿನ ಹಾದಿಯ ಗೆಲುವಿನ ಮೆಟ್ಟಿಲನ್ನಾಗಿ ಪರಿವರ್ತಿಸಿಕೊಳ್ಳುವ ವಿವೇಚನೆ ಬೆಳೆಸಿಕೊಳ್ಳಬೇಕು. ನಾವು ಯಾವುದೇ ಹಿನ್ನಡೆಯನ್ನು ಸಮಸ್ಯೆ ಎಂದು ತಿಳಿಯದೆ ಅದನ್ನು ಇನ್ನೂ ಹೆಚ್ಚಿನದನ್ನು ಸಾಧಿಸುವ ಅವಕಾಶವೆಂದು ತಿಳಿಯಬೇಕು. ನಾವು ಸಂಕಷ್ಟ ಸನ್ನಿವೇಶವನ್ನು ಸ್ವೀಕರಿಸುವ ಮತ್ತು ಅದಕ್ಕೆ ಪ್ರತಿಕ್ರಿಯಿಸುವ ರೀತಿ ನಿಜಕ್ಕೂ ನಮ್ಮ ಜೀವನವನ್ನು ಪ್ರಭಾವಿಸುತ್ತದೆ. ಅದನ್ನು ಅತ್ಯಂತ ವಿವೇಕದಿಂದ ನಿಭಾಯಿಸುವುದು ನಮ್ಮ ನಿತ್ಯದ ನಡೆಯಾಗಬೇಕು....

"ಧೈರ್ಯಂ ಸರ್ವತ್ರ ಸಾಧನಂ"

# ಅಬಲೆ

ಅಪ್ಪನ ದೊಡ್ಡ ಪ್ರಪಂಚದಲ್ಲಿ ರಾಣಿಯಾಗಿ ಮೆರೆದವಳು ನೀ
ತಾಯಿಗೆ ಅವಳ ಮಾತೃ ಹೃದಯಕೆ, ಆಪ್ತ ಸ್ನೇಹಿತೆ ನೀ
ಕರುಣೆಯೆಂಬ ಪದಕ್ಕೆ ವ್ಯಾಖ್ಯಾನ ನೀಡಿದವಳು ನೀ
ಪ್ರೀತಿಯನ್ನು ಸಹೃದಯದಿ ಹಂಚಿ, ಪ್ರೀತಿಸುವುದು ಕಲಿಸಿದವಳು ನೀ
ಸಂಸಾರದ ಜಂಜಾಟದಲ್ಲೂ, ಖುಷಿಯನ್ನು ಹಂಚಿದವಳು ನೀ
ಪುನಃ ಪುನಃ ಕೇಳುವೆನು, ಹೇಳು ನೀನು ಅಬಲೆಯೇ?

ಮಗಳಾಗಿ ಅಕ್ಕರೆ, ಸಹೋದರಿಯಾಗಿ ಸಹನೆಯೂ ನೀ
ಪತ್ನಿಯಾಗಿ ಪ್ರೇರಣೆ, ಮಾತೆಯಾಗಿ, ಮನೋಧೈರ್ಯವೂ ನೀ
ಗುರುವಾಗಿ ಸದ್ಗುಣಗಳನ್ನು ತುಂಬಿದವಳು ನೀ
ತಂದೆ-ತಾಯಿಯಂತೆ ನಿಸ್ವಾರ್ಥದಿ ನನ್ನ ಯಶಸ್ಸನ್ನು ಬಯಸಿದವಳು ನೀ
ಸುಂದರ, ನಿಷ್ಕಲ್ಮಶ ಮನಸ್ಥಿತಿ, ಪ್ರಕೃತಿಯೂ ನೀ
ಪುನಃ ಪುನಃ ಕೇಳುವೆನು, ಹೇಳು ನೀನು ಅಬಲೆಯೇ?

ವೈದ್ಯೆಯ ರೂಪದಲ್ಲಿ, ಜೀವ ರಕ್ಷಕ ನೀ
ತೊಟ್ಟಿಲ ತೂಗೋ ಕರಗಳಿಂದ ಜಗತ್ತನ್ನು
ಸ್ವಚ್ಛ ಮಾಡಲು ಪಣ ತೊಟ್ಟವಳು ನೀ
ವಿಜ್ಞಾನಿ ನೀ, ಗಗನಯಾತ್ರಿ ನೀ, ಕ್ರೀಡಾ ವಿಭಾಗದಲ್ಲಿ ಛಾಪು ಮೂಡಿಸಿದವಳು
ನೀ ಪುನಃ ಪುನಃ ಕೇಳುವೆನು, ಹೇಳು ನೀನು ಅಬಲೆಯೇ?

ಅಂತಹ ಯಾವ ಕ್ಷೇತ್ರವಿದೆ, ಅಲ್ಲಿ ನಿನ್ನ ಹೆಜ್ಜೆ ಗುರುತು ಇಲ್ಲವೆಂದು ಹೇಳಲು?
ಅಂತಹ ಯಾವ ಕಷ್ಟಗಳಿವೆ? ನಿನ್ನ ಸಕರಾತ್ಮಕ ಮನಸ್ಥಿತಿಯನ್ನು
ಮೀರಿ ನಿನ್ನ ಕುಗ್ಗಿಸುವಂತಹದ್ದು?
ದುರ್ಗೆ ನೀ, ಕಾಳಿ ನೀ, ಶಾಂತ ಸ್ವರೂಪ ಪಾರ್ವತಿಯು ನೀ
ಪುನಃ ಪುನಃ ಕೇಳುವೆನು, ಹೇಳು ನೀನು ಅಬಲೆಯೇ?

– ಸಿ.ಬಿ. ಸುಚಿತ್ರ
ದ್ವಿತೀಯ ಬಿ.ಎಸ್ಸಿ.

# ಭಾರತದ ಪ್ರಜಾಪ್ರಭುತ್ವದ ದೇಗುಲ ವಿನೂತನ ಸಂಸತ್ ಭವನ

– ರೇಣುಕಪ್ರಸಾದ ಕಲ್ಕಿತ
ಬಿ.ಎ. ನಾಲ್ಕನೇ ಸೆಮಿಸ್ಟರ್

"ಸಂಸತ್ ಭವನ" ಎನ್ನುವುದು, ಕೇವಲ ಒಂದು ಕಟ್ಟಡವಲ್ಲ, ಅದು ನಮ್ಮ ದೇಶದ ಆತ್ಮ ಪ್ರಜಾತಂತ್ರ ವ್ಯವಸ್ಥೆಯ ದಿವ್ಯ ದೇಗುಲವೆಂದರೆ ತಪ್ಪಾಗಲಾರದು. ನಮ್ಮ ಭಾರತ ದೇಶದ ನೂತನ ಸಂಸತ್ ಭವನದ ವಿನ್ಯಾಸದ ಹಿಂದೆ ಒಂದು "ಸನಾತನ ಚಿಂತನೆ" ಇದೆ.

ಅಖಂಡ ಭಾರತದ ಸಾಕ್ಷಿ ಪ್ರಜ್ಞೆ ಇದೆ, ಭವಿಷ್ಯ ಭಾರತದ ಅದ್ಭುತ ಪರಿಕಲ್ಪನೆ ಇದೆ, ಪ್ರಾಚೀನ ವೇದಕಾಲದಿಂದಲೂ ಹಿಡಿದು, ಇಂದಿನವರೆಗಿನ ಅನೇಕ ಸನ್ನಿವೇಶಗಳನ್ನು ನೂತನ ಸಂಸತ್ ಭವನದಲ್ಲಿ ಚಿತ್ರಿಸಿರುವುದು, ಭಾರತದ ಉತ್ಕೃಷ್ಟ ಸಂಸ್ಕೃತಿಯನ್ನು ಕಲೆಯನ್ನು ಇತಿಹಾಸವನ್ನು ಎತ್ತಿ ಹಿಡಿದಿದೆ.

ಇಂತಹ ಅದ್ಭುತ ಸಂಸತ್ ಭವನವನ್ನು ನಿರ್ಮಿಸುವಲ್ಲಿ ರಾಷ್ಟ್ರದ ಪ್ರಧಾನ ಮಂತ್ರಿಗಳಾದಂತಹ ಸನ್ಮಾನ್ಯಶ್ರೀ "ನರೇಂದ್ರ ಮೋದಿಜಿ" ಅವರ ಅವಿರತ ಪರಿಶ್ರಮ ಖಂಡಿತ ಮೆಚ್ಚುವಂತದ್ದು.

ನೂತನ ಸಂಸತ್ ಭವನದ ನಿರ್ಮಾಣವು "2020 ಡಿಸೆಂಬರ್ 10 ರಂದು ಶಂಕುಸ್ಥಾಪನೆಯಾಗಿ ಮೇ 28 2023 ರಂದು" ವೈದಿಕವಿಧಿಯುಕ್ತವಾಗಿ ಸಾಂಪ್ರದಾಯಿಕ ಪದ್ಧತಿಯ ಮೂಲಕ ಉದ್ಘಾಟನೆಂಯಾಗಿದ್ದು ಅವಿಸ್ಮರಣೀಯ.

ಸಂಸತ್ ಭವನ ಎನ್ನುವಂತದ್ದು, ಕೆಲವು ಕಡೆ, ಕೆಲವರಲ್ಲಿ, ಕೇವಲ ಜನಪ್ರತಿನಿಧಿಗಳು ಸಭೆ ಸೇರುವಂತಹ ಸ್ಥಳ ಎಂದು ಭಾವಿಸಿರಲಾಗಿರುತ್ತದೆ. ಆದರೆ ನೂತನ ಸಂಸತ್‌ಭವನವು ಅಧಿವೇಶನಗಳು ಜನಪ್ರತಿನಿಧಿಗಳು ಸೇರುವ ಕಟ್ಟಡವಾಗದೆ "ಪ್ರಾಚೀನ ಚಿಂತನೆಗಳು, ಇತಿಹಾಸದ ಸಾಧನೆಗಳು, ಭವಿಷ್ಯದ ಮಹತ್ವಾಕಾಂಕ್ಷೆಗಳು" ಹೊಂದಿರುವ "ಆಡಳಿತದ ಶಕ್ತಿ ಸೌಧವಾಗಿ" ರೂಪುಗೊಂಡಿದೆ.

ಇದಕ್ಕೆ ಸಾಕ್ಷಿ ಎಂಬಂತೆ ನೂತನ ಸಂಸತ್ ಭವನವು ಸುಮಾರು "5000 ಸಾವಿರ ಕಲಾಮೆರಗುಗಳನ್ನ" ಹೊಂದಿದೆ. "ಕಲಾಕೃತಿಗಳು, ವರ್ಣಾಕೃತಿಗಳು, ಪ್ರಸಿದ್ಧಚಿತ್ರಗಳು, ಗೋಡೆ ಚಿತ್ರಗಳು, ಶಿಲ್ಪಾಕೃತಿಗಳನ್ನು" ಹೊಂದಿದೆ. ಒಂದು ರೀತಿಯಾಗಿ "ವೈದಿಕ ಶ್ರೀಚಕ್ರ ಯಂತ್ರದ ಆಕಾರದಿಂದ" ಪ್ರೇರಿತವಾಗಿದೆ. ಸಂಸತ್ ಭವನವು ಮೂರು ವಿಧ್ಯುಕ್ತ ಸಭಾಂಗಣಗಳನ್ನು ಹೊಂದಿದೆ.

ಜೊತೆ ಜೊತೆಗೆ, "ಈಶಾನ್ಯದಲ್ಲಿ ಹಂಸದ್ವಾರ" "ಪೂರ್ವದಲ್ಲಿ ಗರುಡದ್ವಾರ", "ಉತ್ತರದಲ್ಲಿ ಗಜದ್ವಾರ" "ದಕ್ಷಿಣದಲ್ಲಿ ಅಶ್ವದ್ವಾರ", ಹಾಗೆ ಇನ್ನೆರಡು ದಿಕ್ಕಿನಲ್ಲಿ "ಮಕರ (ಮೊಸಳೆ) ಮತ್ತು ಶಾರ್ದೂಲ ದ್ವಾರಗಳಿವೆ". ಇವುಗಳೆಲ್ಲವೂ "ಸನಾತನ ಪರಂಪರೆ ಹಾಗು ವಾಸ್ತುಶಾಸ್ತ್ರದ" ಮಹತ್ವವನ್ನು ತಿಳಿಸುತ್ತವೆ.

ಒಳಾಂಗಣದಲ್ಲಿ ಮೂರು ಕಲಾಮಂದಿರಗಳಿದ್ದು, ದೇಶದ ನೃತ್ಯ ಹಾಗೂ ಸಂಗೀತ ಪರಂಪರೆಯನ್ನು ಬಿಂಬಿಸುವಂತಹ 'ಸಂಗೀತ ಗ್ಯಾಲರಿ' ಹಾಗೂ ಶಿಲ್ಪಕಲಾ ಶ್ರೀಮಂತಿಕೆಯನ್ನು ಪ್ರತಿನಿಧಿಸುವಂತಹ 'ಸ್ಥಪತ್ಯ ಗ್ಯಾಲರಿ' ಹಾಗೆಯೇ ವಿವಿಧ ರಾಜ್ಯಗಳ ಕರಕುಶಲ ಸಿರಿವಂತಿಕೆ ಯನ್ನು ಅನಾವರಣಗೊಳಿಸುವ "ಶಿಲ್ಪಾ ಗ್ಯಾಲರಿಗಳು" ಕಣ್ಸೆಳೆಯುತ್ತವೆ. ತ್ರಿಕೋನಾಕಾರದ ನಾಲ್ಕು ಮಹಡಿಯ ಈ ಭವನವು "ಒಟ್ಟು 64,500 ಚದುರ ಮೀಟರ್" ಪ್ರದೇಶದಲ್ಲಿ ನಿರ್ಮಾಣಗೊಂಡಿದ್ದು ಒಟ್ಟು 1280 ಆಸನದ ವ್ಯವಸ್ಥೆಯನ್ನು ಹೊಂದಿದೆ. ಮುಖ್ಯವಾಗಿ "ಜ್ಞಾನದ್ವಾರ, ಶಕ್ತಿದ್ವಾರ ಹಾಗೂ ಕರ್ಮದ್ವಾರ" ಎಂಬ 3 ಪ್ರಮುಖವಾದ ದ್ವಾರಗಳನ್ನು ನಿರ್ಮಿಸಲಾಗಿದೆ...

"ಸಂಸದರು, ವಿಐಪಿ, ಸಂದರ್ಶಕರು ಹಾಗೂ ಅಧಿಕಾರಿಗಳಿಗಾಗಿ" ಪ್ರತ್ಯೇಕ ದ್ವಾರಗಳು ಇರುವುದು ವಿಶೇಷವೆನಿಸಿದೆ...

ನಮ್ಮ ಸಂಸ್ಕೃತಿಯಲ್ಲಿ ದೇವಾಲಯಗಳು ಯಾವ ರೀತಿ "ಗೋಪುರ-ಕಳಶಗಳನ್ನು" ಹೊಂದಿರುತ್ತವೆಯೋ ಅದೇ ಸಂಸ್ಕೃತಿಯಂತೆ ನಮ್ಮ ನೂತನ ಸಂಸತ್ ಭವನವು ಭವನದ ಮೇಲೆ "ನಮ್ಮ ರಾಷ್ಟ್ರ ಲಾಂಛನದ ಕಂಚಿನ ಪ್ರತಿರೂಪವನ್ನು" ಹೊಂದಿದೆ.. ಇದರ ತೂಕ ಅಂದಾಜು

"9500 ಕೆಜಿ ಹಾಗೂ 65 ಮೀಟರ್" ಎತ್ತರವಿದ್ದು, ಸಂಸತ್ ಭವನದ "ಕಳಸವಾಗಿ ಕಂಗೊಳಿಸುತ್ತಿದೆ".

ಇಷ್ಟೆಲ್ಲಾ ವಿಶೇಷತೆಯನ್ನ ಒಳಗೊಂಡಿರುವಂತಹ ಸುಂದರ ಸಂಸತ್ ಭವನದ ನಿರ್ಮಾಣವನ್ನು ಅಂದಾಜು ಸಾವಿರದ "1200" ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇದರ ನಿರ್ಮಾಣದ ಹೊಣೆಯನ್ನು 2020 ರಲ್ಲಿ ನಮ್ಮ ಹೆಮ್ಮೆಯ "ಟಾಟಾ ಪ್ರಾಜೆಕ್ಟ್‌ಗೆ" ವಹಿಸಲಾಗಿತ್ತು.

ಹಾಗೆಯೇ ಈ ಭವನದ ನಿರ್ಮಾಣವನ್ನು ಕೇಂದ್ರದ 'ಸೆಂಟ್ರಲ್ ವಿಸ್ಟಾ ಪುನರಾಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ಮಾಣ ಮಾಡಲಾಗಿದೆ'.

ಪ್ರಧಾನ ಮಂತ್ರಿ ಭವನ, ಉಪರಾಷ್ಟ್ರಪತಿ ಭವನ, ಕೇಂದ್ರ ಸಚಿವಾಲಯ ಮುಂತಾದವು ಈ ಯೋಜನೆಯಲ್ಲಿ ನಿರ್ಮಾಣಗೊಂಡಿದೆ. ಇವೆಲ್ಲವೂ ನಮ್ಮ ನೂತನ ಸಂಸತ್ ಭವನದ ವಿಶೇಷತೆಗಳಾಗಿವೆ.

## ಸಂಗಾತಿ

ನನ್ನ ಬಾಳ ಸಂಗಾತಿ
ನಿನ್ನಲ್ಲಿ ನನ್ನ ವಿನಂತಿ
ಈ ಬಾಳ ಸಮುದ್ರದಲ್ಲಿ ನಾ ಬಾಣತಿ
ನಿನ್ನ ಮಕ್ಕಳಿಗೆ ನಾ ಆರತಿ
ಕೈ ಬಿಡದಿರು ಬಾಳ ಸಂಗಾತಿ

**– ಕು॥ ಹೆಚ್.ಎಂ. ಸುಮ**

## ಗುರು

ಗುರು ನೀ ನೀಡಿರುವ ಶಿಕ್ಷಣ
ಗುರುವಿಗೆ ನಾ ನೀಡುವ ಗೌರವನಾ
ನೀ ತೋರಿರುವ ಜೀವನದ ದಾರಿನಾ
ನಿನ್ನ ಮರೆತರೆ ಅದು ಜೀವನನಾ

**– ಕು॥ ಹೆಚ್.ಎಂ. ಸುಮ**

## ಯೂಕ್ಲಿಡ್

ಯೂಕ್ಲಿಡ್‌ನನ್ನು 'ರೇಖಾಗಣಿತದ ಜನಕ' ಎಂದೇ ಕರೆಯಲಾಗುತ್ತದೆ. ಈತ ತನ್ನ ಗ್ರಂಥ 'ಎಲಿಮೆಂಟ್ಸ್' ನಲ್ಲಿ ರೇಖಾಗಣಿತದ ಮೂಲ ಸಿದ್ಧಾಂತಗಳನ್ನು ವಿವರಿಸಿದ್ದಾನೆ. 'ರೇಖಾಗಣಿತ ಕೆಲವು ಹೇಳಿಕೆಗಳಿಗೆ ಯಾವುದೇ ಸಾಧನೆಗಳ ಅವಶ್ಯಕತೆ ಬೇಕಿಲ್ಲ ಅವುಗಳನ್ನು ಹಾಗೆಯೇ ನಂಬಬೇಕಾಗುತ್ತದೆ'. ಇವುಗಳನ್ನೇ ಆತ 'ಸ್ವಯಂ ಸಿದ್ಧ' ಗಳೆಂದು ಕರೆದ. ಈತ ಬರೆದ ಎಲಿಮೆಂಟ್ಸ್ ಗ್ರಂಥ ಸುಮಾರು 2300 ವರ್ಷಗಳಾದರೂ, ಅದು ತನ್ನ ಮೂಲ ರೂಪವನ್ನು ಇಂದಿಗೂ ಕಳೆದುಕೊಂಡಿಲ್ಲ.

ಯೂಕ್ಲಿಡ್ ಸುಮಾರು ಕ್ರಿ.ಪೂ. 330 ರಿಂದ 275 ರವರೆಗೆ ಜೀವಿಸಿದ್ದನೆಂದು ತಿಳಿದು ಬರುತ್ತದೆ. ಈತನ ದೇಶ ಅಲೆಕ್ಸಾಂಡ್ರಿಯಾ. ಯೂಕ್ಲಿಡ್‌ಗೆ ಅಲೆಕ್ಸಾಂಡ್ರಿಯಾದ ಪುಸ್ತಕ ಭಂಡಾರದಲ್ಲಿ ಹುದ್ದೆಯೊಂದು ದೊರಕಿತ್ತು. ಅಲ್ಲೇ ಈತ ಒಂದು ಸಂಸ್ಥೆಯನ್ನು ಸ್ಥಾಪಿಸಿ ರೇಖಾಗಣಿತದ ತತ್ವಗಳನ್ನು ಹೇಳಿಕೊಡಲಾರಂಭಿಸಿದ. ಈತ ರಚಿಸಿದ 'ಎಲಿಮೆಂಟ್ಸ್' ನಷ್ಟು ಯಶಸ್ವಿಯಾದ ಪಠ್ಯಪುಸ್ತಕ ಬೇರೆ ಯಾವುದೇ ಸಾಹಿತ್ಯದಲ್ಲಿಲ್ಲ ಎನ್ನಲಾಗಿದೆ. ಬಿಂದುರೇಖೆ, ಸಮತಲ ಇವುಗಳ ಬಗ್ಗೆ ಸಮರ್ಪಕ ಉತ್ತರ ನೀಡಿದವನೇ ಯೂಕ್ಲಿಡ್. ಸ್ವಯಂ ಸಿದ್ಧ ಹಾಗೂ ಪ್ರತಿಸಾಧನೆಗಳನ್ನು ಪ್ರಾರಂಭಿಕ ವಿಷಯಗಳಾಗಿ ಇಟ್ಟುಕೊಂಡು ರೇಖೆ, ತ್ರಿಕೋನ ಮುಂತಾದ ರೇಖಾಕೃತಿಗಳ ಅನೇಕ ವಿಷಯಗಳನ್ನು ಈತ ಸಾಧಿಸಿದ್ದಾನೆ.

**– ಸಂಗ್ರಹ**

# ಅಂಬಿಗರ ಚೌಡಯ್ಯ

– ಹ್ಯಾರಡ ಕಾವೇರಿ
ಬಿ.ಎ. ಪ್ರಥಮ ವರ್ಷ, ಕನ್ನಡ ವಿಭಾಗ

ಅಂಬಿಗರ ಚೌಡಯ್ಯ 12ನೇ ಶತಮಾನದಲ್ಲಿ ಜೀವಿಸಿದ್ದ ಶಿವಶರಣರು ಹಾಗೂ ವಚನಕಾರರು. ಉಳಿದೆಲ್ಲ ವಚನಕಾರರಿಗಿಂತ ಭಿನ್ನ ಹಾಗೂ ವಿಶೇಷ ವ್ಯಕ್ತಿತ್ವ ಇವರದು. ವೃತ್ತಿಯಿಂದ ಅಂಬಿಗ, ಪ್ರವೃತ್ತಿಯಲ್ಲಿ ಅನುಭಾವಿ. ನೇರ ನಿರ್ಭೀತ ನುಡಿಗಳಿಂದ ವಚನಗಳನ್ನು ಬರೆದಿರುವುದು ಗೋಚರಿಸುತ್ತದೆ.

ಬಸವಣ್ಣನವರ ಅನುಭವ ಮಂಟಪದ ಸಮಾನ ಭೂಮಿಕೆಯ ಸಮ್ಮೇಳನದಲ್ಲಿ ಸೇರಿಕೊಂಡವ. ತನ್ನ ಕಾಯಕ ಅಥವಾ ವ್ಯಕ್ತಿ ನಾಮವಾದ ಅಂಬಿಗರ ಚೌಡಯ್ಯ ಎಂಬುದೇ ಈತನ ವಚನಗಳ ಅಂಕಿತವಾಗಿದೆ.

ಸ್ಥಳ: 120 (12ನೇ ಶತಮಾನ) ಚೌಡದಾನಪುರ, ರಾಣೆಬೆನ್ನೂರು ತಾಲ್ಲೂಕು, ಹಾವೇರಿ ಜಿಲ್ಲೆ, ಕರ್ನಾಟಕ.

ಹೆಸರು : ಚೌಡೇಶ (ಮೂಲ ಹೆಸರು)

ತಾಯಿ : ಪಂಪಾದೇವಿ

ತಂದೆ : ವಿರೂಪಾಕ್ಷ

ಅಂಕಿತನಾಮ : ಅಂಬಿಗರ ಚೌಡಯ್ಯ.

ವೃತ್ತಿ : ಅಂಬಿಗ

ತಾನು ಕೇವಲ ತುಂಬಿದ ಹೊಳೆಯಲ್ಲಿ ದೋಣಿಗೆ ಹುಟ್ಟು ಹಾಕುವ ಅಂಬಿಗ ಮಾತ್ರವಲ್ಲ. ಭವಸಾಗರದಲ್ಲೂ ಹುಟ್ಟು ಹಾಕುವ ಕೌಶಲ್ಯವುಳ್ಳವ ಎಂದು ಹೇಳಿಕೊಳ್ಳುವುದರಲ್ಲಿ ತನ್ನ ಅನುಭಾವದೃಷ್ಟಿಯನ್ನು ಪ್ರಕಟಿಸಿದ್ದಾನೆ.

ಜೀವನ : ಅಂಬಿಗ ಎಂಬ ಪದವು ನೀರಿನಲ್ಲಿ ಸಂಚರಿಸುವ ನಿರಂತರವಾಗಿ ಬದಲಾಗುವ ಅಲೆಗಳ ಮಧ್ಯೆ ದೋಣಿಯನ್ನು ಓಡಿಸುವ ವೃತ್ತಿಯನ್ನು ಸೂಚಿಸುತ್ತದೆ. ಈ ಚೈತನ್ಯವನ್ನು ಸಾಕಾರಗೊಳಿಸಿದ ಅಂಬಿಗರ ಚೌಡಯ್ಯ, ತನ್ನ ಕಿರಿದಾದ ಕಾಯಕವನ್ನು ತೆಗೆದುಕೊಂಡು ತನ್ನ ನಿಷ್ಠಾವಂತ ಪ್ರಯಾಣಿಕರಿಗೆ ಜೀವನ ಕಡೆಗೆ ಪ್ರಯಾಣ ಬೆಳೆಸಿದರು.

ದೃಢ ಸಂಕಲ್ಪದೊಂದಿಗೆ ಅವನು ತನ್ನ ದೋಣಿಯನ್ನು ಮುಂದಕ್ಕೆ ಓಡಿಸಿದನು. ಅವರ ಹೃದಯವು ಅಲೆಗಳ ಲಯದೊಂದಿಗೆ ಸಮಯಕ್ಕೆ ಬಡಿಯಿತು. ವಿಶ್ವಾಸ ಘಾತುಕ ಸಂಸಾರ ಸಾಗರವನ್ನು ದಾಟಲು ಬಯಸಿದ ಎಲ್ಲರಿಗೂ ಅವನು ಮೋಕ್ಷ ಸಾಗರಕ್ಕಾಗಿ ತನ್ನ ಅನ್ವೇಷಣೆಯಲ್ಲಿ ತನ್ನೊಂದಿಗೆ ಸೇರಲು ಅವಕಾಶವನ್ನು ನೀಡುತ್ತಾನೆ.

**ವಚನಗಳು**

1. ನೀರೊಳಗಿರದ ಕೋಲಿನಂತೆ
   ಭೇದವನ್ನೊಳಕೊಂಡ ವಾದ್ಯದಂತೆ
   ನಾದದಲಿ ಸೋಕಿದ ಶೂನ್ಯದಂತೆ
   ಭೇದಾದಿಭೇದಂಗಳಲ್ಲಿ ಅಭೇದ್ಯದ
   ಭೇದಿಸಬಲ್ಲೆಡೆ, ನಾದ ಬಿಂದು ಕಳೆಗೆ
   ಅತೀತವೆಂದನಂಬಿಗರ ಚೌಡಯ್ಯ

2. ಬ್ರಹ್ಮ ಮೊದಲನರಿಯ ವಿಷ್ಣು
   ತುದಿಯನರಿಯ ಎಡೆಯಣ
   ಮಾನವರೆತ್ತ ಬಲ್ಲರೂ ಮೃಡನಂತುವ?
   ಇತ್ತಣ ಮನವದರಿತ್ತಿತ್ತ ಕೇಳಿ ಅತ್ತಣ
   ಸುದ್ದಿ ನಿಮಗೇತಕ್ಕೆ?
   ನಿಸ್ಸಂಗಿ ನಿರೂಪದ ಮಹಾತ್ಮರೇ
   ಬಲ್ಲಿರೆಂದನಂಬಿಗರ ಚೌಡಯ್ಯ.

**ವಚನಗಳ ದೃಷ್ಟಿ**

ಉಳಿದ ವಚನಕಾರರ ವಚನಗಳಲ್ಲಿರುವಂತೆ ಇವರಲ್ಲಿಯೂ ಶಿವಾನುಭವ ಪರವಾದ ವಚನಗಳಿದ್ದರೂ, ಅವುಗಳಲ್ಲಿ ಕಂಡುಬರುವ ಸಮಕಾಲೀನ ಸಮಾಜ ವಿಡಂಬನೆಯ ವ್ಯಗ್ರ ದೃಷ್ಟಿ ಬೇರೆಯವರಲ್ಲಿ ವಿರಳವೆಂದೇ ಹೇಳಬೇಕು. ಅವನ ವಚನಗಳ ವಸ್ತು, ಭಾಷೆ, ಶೈಲಿ ಗಮನಿಸಿದರೆ ಅವನೊಬ್ಬ ಕೆಚ್ಚದೆಯ ನಿಷ್ಠುರ ಪ್ರಕೃತಿಯ ಗ್ರಾಮ್ಯ ಮನೋಧರ್ಮದ ಒರಟು ವಚನಕಾರ ಎಂಬುದು ಸ್ಪಷ್ಟವಾಗುತ್ತದೆ.

ಮಾತಿನ ಬಹು ಭಾಗ ಹರಿತವಾದದ್ದು, ಸಂಸ್ಕಾರ ದೂರವಾದದ್ದು. 'ಕೇಳಿರಯ್ಯ ಮಾನವರೇ' ಶೀಲದಲ್ಲಿ ಸಂಪನ್ನರಾದವರು ನೀವು ಕೇಳಿರೋ, ನನಗೊಬ್ಬ ರೆಂಜಲು ಸೇರದೆಂದು ಶುಚಿತನದಲ್ಲಿ ಬದುಕುವ ಬರಿಯೇ ಮಾತಿನ ಭುಂಜಕರು ನೀವು ಕೇಳಿರೋ'... ಪರಪುರುಷಾರ್ಥವನರಿಯದೇ ಕೆಟ್ಟವರ ಕುರಿಗಳು ನೀವು ಕೇಳಿರೋ' ಎಂದು ಆರಂಭವಾಗಿ ಮೆಟ್ಟಿದ್ದ ದೊಡ್ಡ ಪಾದರಕ್ಷೆಯ ತಕ್ಕೊಂಡು ಲಟಲಟನೆ ಹೊಡೆಯೆಂದ. ಪಡಿಹಾರ ಉತ್ತಣ್ಣನ ಎಡ ಪಾದರಕ್ಷೆಯಿಂದ ಪಟಪಟನೆ ಹೊಡೆಯೆಂದ'. ಮಗ ಕೊಯ್ದು ಇಟ್ಟಂಗಿಯ ಕಲ್ಲಿಲೆ ಸಾಸಿವೆ ತಿಕ್ಕಿ ಹಿಟ್ಟಿನ ತುಳಿದು ಮೇಲೆ ನಿಂಬೆಯ ಹುಳಿಯನೆ ಹಿಂಡಿ ಪೆಡುಪಲಗಳಿಗೆ ಹಿಡಿ – ಹೀಗೆ ಮುಕ್ತಾಯ ವಾಗುತ್ತದೆ ಇವನ ವಚನ ಶೈಲಿ.

ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ದಿವ್ಯತನ ವ್ಯಗ್ರತೆ ಕಂಡು ಬರುವುದು ಬಹುಶಃ ಇಬ್ಬರಲ್ಲೇ ಎಂದು ತೋರುತ್ತದೆ. ಒಬ್ಬ ಸಿಡಿಲು ನುಡಿಯ "ಸರ್ವಜ್ಞ", ಇನ್ನೊಬ್ಬ ಕೆಚ್ಚೆದೆಯ ವಚನಕಾರ ಎಂದರೆ, ಅದು "ಅಂಬಿಗರ ಚೌಡಯ್ಯ" ನವರು ಆಗಿದ್ದಾರೆ ಎಂದು ತಿಳಿಯುತ್ತದೆ.

# ಜಗಜ್ಯೋತಿ ಬಸವೇಶ್ವರರು

– ಕೀರ್ತಿ ಅಣ್ಣೀಗೇರಿ
ಬಿ.ಎ. 6ನೇ ಸೆಮಿಸ್ಟರ್

ಬಸವಣ್ಣನವರು ಮೇ 2 ರಂದು 1134ರಲ್ಲಿ ಈಗಿನ ಬಿಜಾಪುರ ಜಿಲ್ಲೆಯಲ್ಲಿರುವ ಬಸವನ ಬಾಗೇವಾಡಿ ಗ್ರಾಮದಲ್ಲಿ ಜನಿಸಿದರು. ತಾಯಿಯ ತವರುಮನೆಯಾದ ಇಂಗಳೇಶ್ವರ ಗ್ರಾಮದಲ್ಲಿ ಜನಿಸಿದರು. ತಂದೆ ಮಾದರಸ, ತಾಯಿ ಮಾದಲಾಂಬಿಕೆ.

ಬಸವಣ್ಣ ಚಿಕ್ಕಂದಿನಿಂದಲೂ ವೈದಿಕ ಸಂಸ್ಕೃತಿಯ ಕರ್ಮಾಚರಣೆಗಳ ವಿರೋಧಿಯಾಗಿದ್ದರು. ಬಸವೇಶ್ವರರು ತಮ್ಮ ಉಪನಯನದ ನಂತರ ಯಜ್ಞೋಪವೀತವನ್ನು ಕಿತ್ತೆಸೆದು ಕೂಡಲ ಸಂಗಮಕ್ಕೆ ನಡೆದರು. ಅಲ್ಲಿ ಶೈವಗುರುಗಳ ಸಾನಿಧ್ಯದಲ್ಲಿ ಲಿಂಗದೀಕ್ಷೆಯನ್ನು ಪಡೆದರು.

ಬಸವಣ್ಣ ಸಾಮಾಜಿಕ ಸುಧಾರಕರಾಗಿದ್ದರು. ಇವರು ಶಿವ ಕೇಂದ್ರಿಕೃತ ಭಕ್ತಿ ಚಳುವಳಿಯಲ್ಲಿ ಕನ್ನಡ ಕವಿಯಾಗಿದ್ದರು. ಭಾರತದಲ್ಲಿ ನಡೆಯುತ್ತಿದ್ದ ಜಾತೀಯತೆಯನ್ನು ಖಂಡಿಸಿದರು.

ಇವರು ಸಮಾಜದಲ್ಲಿ ಸಾಮಾಜಿಕ ಅರಿವನ್ನು ಹರಡಿದರು. ಮೂಢನಂಬಿಕೆಗಳನ್ನು ಬಹಳ ವಿರೋಧಿಸಿದರು.

ಅವರು ಕಾಯಕವೇ ಕೈಲಾಸ ಎಂದರು. ಈ ಮಾತಿನ ಅರ್ಥ ನಿಷ್ಠೆಯಿಂದ ಅಥವಾ ಶ್ರದ್ಧೆಯಿಂದ ಕೆಲಸವನ್ನು ಮಾಡುವುದರಿಂದ ಅದು ಕೈಲಾಸಕ್ಕೆ ಸಮಾನವಾಗುತ್ತದೆ ಎಂದು ಹೇಳಿದರು.

ಸಮಾಜದಲ್ಲಿ ಮೂಢನಂಬಿಕೆಗಳಿಂದ ಮಹಿಳೆಯರಿಗೆ ಆಗುವ ತೊಂದರೆಯನ್ನು ಖಂಡಿಸಿದರು. ಇದರಿಂದಾಗಿ ಅವರು ಇದನ್ನು ನೋಡಿ ಸಮಾಜದಲ್ಲಿ ಆಗುವ ತೊಡಕುಗಳನ್ನು ವಿರೋಧಿಸಿದರು.

ಅಂದಿನ ಸಮಾಜದಲ್ಲಿ ಬೇರೂರಿದ್ದ ಅನೇಕ ಅಂಕುಡೊಂಕುಗಳನ್ನು, ಲೋಪದೋಷಗಳನ್ನು ಎತ್ತಿ ತೋರಿಸಿದ ಬಸವಣ್ಣ ಅದರ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸಿದರು.

ಒಟ್ಟಾರೆ, ಸಮಾನತೆಯ ಆಶಯವನ್ನು ಸಿದ್ಧಾಂತ ವಾಗಿರಿಸಿಕೊಂಡಿದ್ದ ಬಸವೇಶ್ವರರು ಮತ್ತು ವಚನಕರರು ಸಮಾಜ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.

# ಕವಿತಾಗುಣಾರ್ಣವ ಆದಿಕವಿ ಪಂಪ

ಎಚ್. ಸುದೀಪ್
ಬಿ.ಎ. ದ್ವಿತೀಯ ಸೆಮಿಸ್ಟರ್

ಕನ್ನಡ ಕಾವ್ಯ ಸಾಮ್ರಾಜ್ಯದ ಅನಭಿಷಕ್ತ ದೊರೆ ಆದಿಕವಿ ಪಂಪ. ಪಂಪ ಕನ್ನಡ ಸಾಹಿತ್ಯದ ಅಗ್ರಗಣ್ಯ ಕವಿ. ಕನ್ನಡ ಸಾಹಿತ್ಯ ಲೋಕದ ಧ್ರುವತಾರೆ, ನೂತನಯುಗ ಪ್ರವರ್ತಕ ಎಂದು ಪ್ರಖ್ಯಾತಗೊಂಡಿದ್ದಾರೆ.

ಗಣಿತ, ವ್ಯಾಕರಣ, ಅಲಂಕಾರ, ಸಂಗೀತ, ನಾಟ್ಯ, ಶಿಲ್ಪ, ವೈದ, ವೇದಶಾಸ್ತ್ರವನ್ನು ಗುರುತಿಸಿ ಅಭ್ಯಾಸ ಮಾಡಿದ್ದ ಪಂಪ ಕವಿ. ವೆಂಗಿ ಚಾಲಿಕ್ಯ ವಂಶದ ಎರಡನೇ ಅರಿಕೇಸರಿಯ ಆಸ್ಥಾನ ಪಂಡಿತನಾಗಿದ್ದನು.

**ಕನ್ನಡಕೋರ್ವನೆ ಸತ್‌ಕವಿ ಪಂಪನಾವಾಗಂ :**

ವಿಸ್ತಾರವಾದ ಕನ್ನಡಕ್ಕೆಲ್ಲ ಎಂದೆಂದಿಗೂ ಒಬ್ಬನೇ ಸತ್‌ಕವಿ ಪಂಪ ಎಂದು ಹೊಗಳಿದ್ದಾರೆ ನಾಗರಾಜ ಕವಿ. ಕರ್ಣ ಭೂಮಂಡಲಕ್ಕೆ ಚಕ್ರವರ್ತಿಯಂತೆ, ಸ್ವರ್ಗಕ್ಕೆ ದೇವೇಂದ್ರ ನಂತೆ, ಪಾತಾಳಕ್ಕೆ ಆದಿಶೇಷನಂತೆ, ಆಕಾಶಕ್ಕೆ ಸೂರ್ಯನಂತೆ, ಸಾಹಿತ್ಯದ ಲಯಕ್ಕೆ ಪಂಪನೇ ಅಧಿಪತಿ ಎಂದು ಹೇಳಿದ್ದಾರೆ.

ಪಂಪನ ಪೂರ್ವಿಕರು ಪಂಡಿತ ಮನೆತನದವರು. ಬ್ರಾಹ್ಮಣ ಕಾಲದ ವಿದ್ವತ್, ಸದಾಚಾರಿ ದಾನಧರ್ಮಾದಿ ಗಳಲ್ಲಿ ಖ್ಯಾತಿ ಪಡೆದವರು ವೆಂಗಿ ಮಂಡಲದ ವೆಂಗಿ ಪುಳದವರು.

ಪಂಪನು ಕೂಡ ತಮ್ಮ ತಂದೆಯಂತೆ ಜೈನ ಮತದ ಅನುಯಾಯಿಗಳಾಗಿದ್ದರು. ತಂದೆ ಭೀಮಪ್ಪಯ್ಯ ಕನ್ನಡ ನಾಡಿಗೆ ವಲಸೆ ಬಂದ ನಂತರ ಪಂಪನು ಜನಿಸಿದನಂತೆ. ಅದರಲ್ಲೂ ವಿಶೇಷವಾಗಿ ಬನವಾಸಿ ನಾಡೆಂದರೆ ಪಂಪನಿಗೆ ಎಲ್ಲಿಲ್ಲದ ಅಚ್ಚುಮೆಚ್ಚು.

ಪಂಪನು ತನ್ನ ಉಪ ಜೀವನಕ್ಕಾಗಿ ಹೈದರಾಬಾದಿನ ಮೇಮನವಾಡದಲ್ಲಿ ಚಾಲುಕ್ಯರಾಜ ಅರಿಕೇಸರಿಯ ಆಸ್ಥಾನ ಕವಿಯಾಗಿ, ಸಂಬಂಧಿಯಾಗಿ, ಆಪ್ತನಾಗಿ, ಗೆಳೆಯನಾಗಿ ಆತನ ಅಚ್ಚುಮೆಚ್ಚಿನವನಾಗಿದ್ದ.

ಇತಿಹಾಸದಲ್ಲಿ ಬಾಣ ಶ್ರೀ ಹರ್ಷನಂತೆ, ಪುರಾಣದಲ್ಲಿ ಕರ್ಣ ದುರ್ಯೋಧನನಂತೆ, ಇಲ್ಲಿ ಪಂಪ ಅರಿಕೇಸರಿಯವರ ಸ್ನೇಹದ ಋಣವನ್ನು ತೀರಿಸಲು ಅರಿಕೇಸರಿಯನ್ನು ಹೊಗಳಿ ಅರ್ಜುನನಿಗೆ ಹೋಲಿಸಿ ವಿಕ್ರಮಾರ್ಜುನ ವಿಜಯ ಎಂಬ ಕಾವ್ಯವನ್ನು ಆತನಿಗೆ ಸಲ್ಲಿಸಿದ್ದಾನೆ.

ಆದಿಕವಿ, ಅಗ್ರಕವಿ, ನಾಡೋಜ ಪಂಪ, ಕವಿತಾಗುಣಾರ್ಣ, ಸಂಸಾರ ಸಾರೋಧಯ, ಸಂಸ್ಕೃತಿ ಮಣಿಹಾರ ಎಂಬ ಬಿರುದುಗಳು ಆವನಿಗೆ ಸಂದಿವೆ.

ಕರ್ನಾಟಕ ಸರ್ಕಾರ ಪ್ರತಿ ವರ್ಷ ಸೃಜನಶೀಲ ಕೃತಿಕಾರನಿಗೆ ಪಂಪ ಪ್ರಶಸ್ತಿ ನೀಡುತ್ತದೆ. ಒಟ್ಟಾರೆಯಾಗಿ ಕನ್ನಡ ನಾಡಿಗೆ ಮತ್ತು ಕನ್ನಡ ಸಾಹಿತ್ಯಕ್ಕೆ ಅಮೋಘವಾದ ಕೊಡುಗೆ ನೀಡಿದ ಮಹಾನ್ ಚೇತನ ಪಂಪ.

## ಅಪ್ಪ

ಅಪ್ಪ ಅಂದರೆ ಆಕಾಶ
ಜೀವನದ ಸಾರಾಂಶ
ಅವನಿಲ್ಲದ ಬದುಕು ನಶ್ವರಂಶ
ನೀ ತೊರೆದರೆ ಬಾಳೆ ಶೂನ್ಯಾಂಶ

– ಕವಿತ ಚೌಡಪ್ಪ
ಬಿ.ಎ. ದ್ವಿತೀಯ ವರ್ಷ

# ಭಕ್ತ ಕವಿ ಕುಮಾರವ್ಯಾಸ

– ಸಿ. ಸಿಂಧು.
ಬಿ.ಎ. 2ನೇ ಸೆಮಿಸ್ಟರ್

ಸಾಧಾರಣವಾಗಿ ಲೋಕದಲ್ಲಿ ಭಯ–ಭಕ್ತಿ ಈ ಎರಡೂ ಶಬ್ದಗಳೂ ಜೊತೆಜೊತೆಯಾಗಿ ಚಲಾವಣೆಯಲ್ಲಿರುವುದನ್ನು ನಾವು ಕಾಣುತ್ತೇವೆ. ಭಯದಿಂದಲೇ ಭಕ್ತಿ ಹುಟ್ಟುವುದು ಎಂಬ ಅಭಿಪ್ರಾಯವನ್ನು ಈ ಪ್ರಯೋಗ ಮೂಡಿಸುತ್ತದೆ.

ಭಯವನ್ನು ಭಕ್ತಿಯ ಜೊತೆಗೆ ತಳುಕು ಹಾಕಿರುವುದು ಬಹುಶಃ ವ್ಯಕ್ತಿಯಲ್ಲಿ ಆದರ, ನಡವಳಿಕೆ, ವ್ಯವಹಾರಗಳು ಶುದ್ಧವಾಗಿರಲಿ, ಸಮಾಜಕ್ಕೆ ಒಳಿತಾಗಲಿ ಎಂಬ ಮುಂದಾಲೋಚನಾ ದೃಷ್ಟಿಯಿಂದ ಇರಬೇಕು.

ಸರ್ವರಿಗೆ ಭಯವನ್ನು ಕೊಡುವ ಭಗವದ್ಭಕ್ತಿಯಲ್ಲಿ ಭಯಕ್ಕೆ ಸ್ಥಾನವಿಲ್ಲ. ಬದಲಿಗೆ ಭಕ್ತಿ ತುಂಬಾ ಸಿಹಿಯಾದ, ಸುಲಭವಾದ ಅಪ್ಯಾಯಮಾನವಾದ ಹೃದಯದ ಭಾವ. ಭಗವಂತನನ್ನು ಅರಿಯಲು, ಹೊಂದಲು ಇರುವ ಅತೀ ಸುಲಭವಾದ ಮಾರ್ಗ ಈ ಭಕ್ತಿ ಎನ್ನುವುದು. ಇದನ್ನೇ ತಿಮ್ಮಗುರು ಕಗ್ಗದಲ್ಲಿ "ಭಕ್ತಿ ನಂಬುಗೆ ಸುಲಭ, ಭಜನೆ ವಂದನೆ ಸುಲಭ" ಎಂದದ್ದು, ಜ್ಞಾನಕ್ಕೆ ಹೆಚ್ಚು ಒತ್ತು ಕೊಡುವ ಭಗವದ್ಗೀತೆಯಲ್ಲಿ ಕೃಷ್ಣ ಪರಮಾತ್ಮ ಭಕ್ತಿ ಮಾರ್ಗ ಶ್ರೇಷ್ಠತೆಯನ್ನು ಎತ್ತಿ ಹಿಡಿದಿದ್ದಾರೆ.

ಭಗವಂತನನ್ನು ಅರಸುವ ಸುಲಭವಾದ ಅಭಿಪ್ರಾಯವೆಂದರೆ ಭಕ್ತಿಯೇ. ಭಗವಂತನ ಗುಣಗಾನವನ್ನು ಮಾಡುವ ಭಾಗವತವಂತೂ ಭಕ್ತಿಯ ರಸಪಾಕ. ಭಾಗವತವನ್ನು ರಾಮಕೃಷ್ಣ ಪರಮಹಂಸರು "ಜ್ಞಾನ ಎಂಬ ತುಪ್ಪದಲ್ಲಿ ಕರಿದು ಭಕ್ತಿ ಎಂಬ ಸಕ್ಕರೆಯ ಪಾಕದಲ್ಲಿ ಅದ್ದಿದ ಸಿಹಿ ತಿನಿಸು" ಎಂದಿದ್ದಾರೆ.

ಇಂತಹ ಭಕ್ತಿಯ ಹುಟ್ಟು ಭಾರತದ ದಕ್ಷಿಣ ದೇಶದಲ್ಲಿ ಅಂದರೆ ದ್ರಾವಿಡ ದೇಶದಲ್ಲಿ ಆದದ್ದು ಎಂದೂ ಶ್ರೀಮದ್ಭಾಗವತದ ದಶಮ ಸ್ಕಂದದಲ್ಲಿ ಹೇಳಿದೆ. ಭಕ್ತಿ ಈ ಶಬ್ದಕ್ಕೆ ಸಂಸ್ಕೃತ ಕೋಶಗಳು ವಿಭಾಗ, ಸೇವಾ, ಅನುರಾಗ ವಿಶೇಷ, ಭಗವಂತನಲ್ಲಿ ಪರಾನುರಕ್ತಿ, ಉಪಾಸನೆ ಹೀಗೆ ಅನೇಕ ಅರ್ಥಗಳನ್ನು ಕೊಟ್ಟಿವೆ.

ವಿಷ್ಣು ಪುರಾಣದ ರೀತ್ಯಾ ಭಕ್ತಿ ಎಂದರೆ ಪ್ರೀತಿಗೆ ಅಧೀನವಾದ ಬುದ್ಧಿಪೂರ್ವಕವಾದ ಒಂದು ಚಿತ್ತವೃತ್ತಿಯಾಗಿದೆ. ಅಂದರೆ ಭಕ್ತಿ ಎಂಬುದು ಭಗವಂತನನ್ನು ಪ್ರೀತಿಯಿಂದ ಉಪಾಸನೆ ಮಾಡುವ ಒಂದು ಚಿತ್ತವೃತ್ತಿ ಎಂದಾಗುತ್ತದೆ.

ಪುಷ್ಟಿಮಾರ್ಗದ ಪ್ರವರ್ತಕರಾದ ಶ್ರೀ ವಲ್ಲಭಾಚಾರ್ಯರು ಜೀವರುಗಳು ಭಕ್ತಿಯ ಮೂಲಕ ವೈದಿಕ ಕರ್ಮ, ಅನುಷ್ಠಾನಗಳ ಸಹಾಯವಿಲ್ಲದೆಯೇ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬಹುದೆಂದೂ, ಭಾವ, ಪ್ರೇಮ, ಪ್ರಣಯ, ಸ್ನೇಹ, ರಾಗ, ಅನುರಾಗ ಮತ್ತು ವ್ಯಸನ ಎಂಬ ಏಳು ಹಂತಗಳಲ್ಲಿ ಕೃಷ್ಣ ಭಕ್ತಿಯನ್ನು ಸಾಧಿಸಬಹುದು ಎಂದು ಹೇಳಿದ್ದಾರೆ. ಕೃಷ್ಣ ಎಂದರೆ ಭಗವಂತ. ಭಗವಂತ ಎಂದರೆ ಭಾಗವುಳ್ಳವನು ಎಂದರ್ಥ.

ಕನ್ನಡದ ಮಹಾಕವಿ ಕುಮಾರವ್ಯಾಸನ "ಕರ್ಣಾಟಕ ಭಾರತ ಕಥಾ ಮಂಜರಿ" ಅಥವಾ "ಗದುಗಿನ ಭಾರತ"ವು ತನ್ನ ಕಾವ್ಯ ಗುಣಗಳಿಂದ, ಸಾಹಿತ್ಯ ಮೀಮಾಂಸೆಯ ಒರೆಗಲ್ಲಲ್ಲಿ ಅಪ್ಪಟ 24 ಕ್ಯಾರೆಟ್ ಚಿನ್ನವಾಗಿ ಹೊಳೆಯುತ್ತದೆ ಆದರೂ, ಅದು ಕವಿಯ ಮಾತಿನಂತೆ "ಕೃಷ್ಣ ಕಥೆ" ಅದು ಭಕ್ತಿ ಕಾವ್ಯವೂ ಹೌದು.

ದಾಸ ಸಾಹಿತ್ಯದಂತೆಯೋ ಅಥವಾ ವೀರಶೈವ ಯುಗದ ಸಾಹಿತ್ಯದಂತೆಯೋ ಕಾವ್ಯದ ಆದ್ಯಂತವೂ ಭಕ್ತಿಯ ಉಕ್ಕಂದವನ್ನು ಇದರಲ್ಲಿ ಕಾಣಲಾಗುವುದಿಲ್ಲ. ಆದರೆ, ಅನೇಕ ಸಂದರ್ಭಗಳಲ್ಲಿ ಕಾವ್ಯದಲ್ಲಿ ಬರುವ ಅನೇಕ ಪಾತ್ರಗಳ ಕೃಷ್ಣ ಭಕ್ತಿಯು ಸ್ಪಷ್ಟವಾಗಿ ನಿಲ್ಲುತ್ತಾರೆ. ಅದರಲ್ಲೂ ವಿಧುರನ ಕೃಷ್ಣ ಭಕ್ತಿಯನ್ನು ಕವಿ ಕಂಡರಿಸಿರುವ ಬಗೆ ಅನನ್ಯವಾಗಿದೆ. ಭಗವಂತನ ಸಾಕ್ಷಾತ್ಕಾರವಾದಾಗ ಭಕ್ತನೊಬ್ಬನ ನಡವಳಿಕೆ, ಮನೋಭಾವ ಹೇಗಿರುತ್ತದೆ ಎಂಬುದನ್ನು ವಿಧುರನ ಪಾತ್ರದ ಮೂಲಕ ಕವಿ ತುಂಬಾ ಗಾಢವಾಗಿ ಚಿತ್ರಿಸಿದ್ದಾನೆ.

ನೋಡಿದನು ಮನದಣಿಯೆ. ಮಿಗೆ.
ಕೊಂಡಾಡಿದನು. ಬೀದಿಯಲಿ ಹರಿದೆಡೆ
ಯಾಡಿದನು, ಭ್ರಮೆಯಾಯ್ತು
ವಿದುರಂಗೆಂಬ ಗಾವಳಿಯ/ಕೀಡೆ
ಕುಣಿದನು. ಮನೆಯ ಮುರಿದೀಡಾಡಿದನು
ಮೈಮರೆದ ಹರುಷದ
ಗಾಡಿಕೆಯಲಪ್ರತಿಮನೆಸೆದನು ಬಕುತಿ
ಕೇಳಿಯಲಿ ॥

ಭಕ್ತಿಭಾವದ ಪರಾಕಾಷ್ಠೆಯ ಚಿತ್ರಣವನ್ನು ಕವಿ ಇಲ್ಲಿ ತುಂಬಾ ಅಡಕವಾಗಿ, ಮನಮುಟ್ಟುವಂತೆ ಚಿತ್ರಿಸಿದ್ದಾನೆ. ಯಾರೇ ಅತಿಥಿಗಳು ಬಂದರೂ ತತ್‌ಕ್ಷಣದಲ್ಲಿ ಮಾಡಬೇಕಾದ ಗೃಹಸ್ಥನ ಕರ್ತವ್ಯ ಬಂದ ಅತಿಥಿಯನ್ನು ಯಥಾಶಕ್ತಿ ಸತ್ಕರಿಸುವುದು. ಈಗಲಾದರೋ ವಿಧುರನ ಮನೆಗೆ ಜಗವೇ ಬಯಸುವ ಪರಮಾತ್ಮನೇ ಅತಿಥಿಯಾಗಿ ಬಂದಿದ್ದಾನೆ.

## ಸಾವಿಲ್ಲದ ಮಹಾನ್ ಜೀವ!

ಗ್ರೀಕ್ ದೇಶದ ತತ್ತ್ವಜ್ಞಾನಿ ಸಾಕ್ರಟೀಸ್‌ನಿಗೆ ವಿಷಕೊಟ್ಟು ಸಾಹಿಸಬೇಕೆಂದು ಶಿಕ್ಷೆ ವಿಧಿಸಲಾಗಿತ್ತು. ಆದರೆ ಅವರು, 'ನಾನು ಈಗ ಮುದುಕನಾಗಿ ಬಿಟ್ಟಿದ್ದೇನೆ. ಇನ್ನು ಸ್ವಲ್ಪಕಾಲದಲ್ಲಿ ಈ ಜೀವ ಹೊರಟುಹೋಗುತ್ತದೆ. ಸಾಯುತ್ತಿರುವವನನ್ನು ಕೊಂದು ನೀವು ಏನು ಮಹಾ ದೊಡ್ಡಶೌರ್ಯವನ್ನು ತೋರಿಸುತ್ತಿದ್ದೀರಿ? ಸ್ವಲ್ಪ ಯೋಚಿಸಿ! ಈ ದೇಹ ಒಂದು ದಿನ ಮುದುಡಿಕೊಂಡು ಹೋಗಲೇಬೇಕು. ಯಾವುದು ಸಾಯುತ್ತದೆಯೋ ಅದನ್ನು ಅಳಿಸಿ ಹಾಕುವುದರಲ್ಲಿ ಮಹತ್ವ ಏನಿದೆ?' ಎಂದು ಹೇಳಲು ಮೊದಲು ಮಾಡಿದರು.

ಸಾಕ್ರಟೀಸನಿಗೆ ವಿಷ ಕೊಡಬೇಕೆಂದು ತೀರ್ಮಾನಿಸಿದ ಹಿಂದಿನ ರಾತ್ರಿ ಅವರ ಶಿಷ್ಯಂಗೆ, 'ಆತ್ಮವು ನಾಶವಾಗುವುದಿಲ್ಲ. ಅದಕ್ಕೆ ಸಾವಿಲ್ಲ!' ಎಂಬುದನ್ನು ಉಪದೇಶ ಮಾಡಿದ್ದರು. ದೇಹದಲ್ಲಿ ವಿಷವು ಸೇರಿದರೆ ಯಾವ ರೀತಿ ವೇದನೆಯುಂಟಾಗುತ್ತದೆ ಎಂಬುದನ್ನು ಕುರಿತು ಉತ್ಸಾಹದಿಂದ ವರ್ಣಿಸಿದ್ದರು. ಅವರಲ್ಲಿ ಸ್ವಲ್ಪವೂ ಕಳವಳ ಕಂಡುಬರಲಿಲ್ಲ. ಆ ಸಂದರ್ಭದಲ್ಲಿ ಅವ ಶಿಷ್ಯರಲ್ಲಿ ಒಬ್ಬ 'ನೀವು ನಿಧನರಾದ ನಂತರ ನಿಮ್ಮ ಅಂತ್ಯಕ್ರಿಯೆಗಳನ್ನು ಹೇಗೆ ಮಾಡಬೇಕು' ಎಂದು ಕೇಳಿದನು. ಅದಕ್ಕೆ ಸಾಕ್ರಟೀಸ್, 'ತುಂಬಾ ಚೆನ್ನಾಗಿದೆ! ಅವರು ಕೊಲ್ಲುತ್ತಾರೆ! ನೀನು ಹೂಳುತ್ತೀಯಾ! ಕೊಲ್ಲುವವರನ್ನು ನನ್ನ ವಿರೋಧಿಗಳಾಗಿರುವಾಗ ಹೂಳುವವರು ಮಾತ್ರ ನನ್ನ ಮೇಲೆ ಹೆಚ್ಚಿನ ಪ್ರೀತಿಯನ್ನು ತೋರಿಸುತ್ತಾರೆಯೇ? ಅವರು ಉಪಾಯವಾಗಿ ನನ್ನನ್ನು ಕೊಲ್ಲುತ್ತಾರೆ. ನೀನು ತಿಳಿದಿರುವವನು ನನ್ನನ್ನು ಹೂಳುತ್ತಿ! ನಾನು ನಿಮಗೆಲ್ಲರಿಗೂ ಮೀರಿದವನು! ನೀವು ನನ್ನನ್ನು ಮಣ್ಣಿನಲ್ಲಿ ತಾನೆ ಹೂಳುತ್ತೀರಿ? ಯಾರೂ ನನ್ನನ್ನು ಕೊಲ್ಲಲಾರಿರಿ, ಹೂಳಲೂ ಆಗುವುದಿಲ್ಲ. ಇದುವರೆಗೂ ನಾನು ನಿಮಗೆ ಉಪದೇಶ ಮಾಡಿದ್ದೇನು? 'ಆತ್ಮಕ್ಕೆ ಸಾವಿಲ್ಲ!' ಇದನ್ನು ಯಾರಿಂದಲೂ ಕೊಲ್ಲಲು, ಹೂಳಲು ಸಾಧ್ಯವಿಲ್ಲ!' ಎಂದರು. ಅವರು ಹೇಳಿದ್ದು ನಿಜವಾಯಿತು! 2500 ವರ್ಷಗಳಿಂದಲೂ ಎಲ್ಲರನ್ನೂ ಸಾವಿಲ್ಲದೆ ಹೂಳಟ್ಟಿದ್ದಾರೆ ಆ ಮಹಾನ್ ಸಾಕ್ರಟೀಸ್!

(ಸಂಗ್ರಹ : ಡಾ. ವಿ. ಗೋಪಾಲಕೃಷ್ಣರವರ ಉತ್ತಮ ಬಾಳುವೆಗೆ ಮಹಾನ್ ವ್ಯಕ್ತಿಗಳ ಜೀವನಾದರ್ಶ ಪುಸ್ತಕದಿಂದ)

# ರಗಳೆ ಕವಿ ಹರಿಹರ

– ಗಂಗಮ್ಮ ಜಿ.
ಬಿ.ಎ. ದ್ವಿತೀಯ ಸೆಮಿಸ್ಟರ್

ಹರಿಹರ 12ನೇ ಶತಮಾನದ ಉತ್ತರಾರ್ಧದಲ್ಲಿದ್ದ ಶೈವ ಕವಿ. ಈತನ ಸೋದರಳಿಯನೇ ರಾಘವಾಂಕ. ಹರಿಹರನು ಕೆಲವು ಕಾಲ ನರಸಿಂಹ ಬಲ್ಲಾಳ ರಾಜನಲ್ಲಿ ಕರಣಿಕನಾಗಿದ್ದ, ಹುಟ್ಟಿದ್ದು ಹಂಪೆಯಲ್ಲಿ.

ತಂದೆ ಮಹಾದೇವ ಭಟ್ಟ, ತಾಯಿ ಶರ್ವಾಣಿ, ತಂಗಿ ರುದ್ರಾಣಿ. ಈಕೆ ರಾಘವಾಂಕನ ತಾಯಿ. ಗುರು ಮಾಯಿದೇವನಾದರೆ, ಆರಾಧ್ಯ ದೈವ ಹಂಪೆಯ ವಿರೂಪಾಕ್ಷನಾಗಿದ್ದ.

ಈತ "ರಗಳೆ ಕವಿ" ಎಂದೇ ಪ್ರಸಿದ್ಧನಾಗಿದ್ದಾನೆ. 12ನೇ ಶತಮಾನದ ಬಹು ಮಹತ್ವದ ಶರಣ ಚಳವಳಿ ಮತ್ತು ವಚನ ಸಾಹಿತ್ಯದ ಪ್ರಭಾವವು ಹರಿಹರನ ಮೇಲೆ ದಟ್ಟವಾಗಿದೆ. ಮೂಲತಃ ಈತನು ಭಕ್ತ ಕವಿ. ಆತನ ಕಾವ್ಯದ ತುಂಬಾ ಭಕ್ತಿಯು ಓತಪ್ರೋತವಾಗಿ ಹರಿದಿದೆ. ಹರಿಹರನ ಎರಡು ಶತಕಗಳಲ್ಲಿ ಆತನು ಹಂಪೆಯ ಶ್ರೀ ವಿರೂಪಾಕ್ಷನಲ್ಲಿ ತಳೆದಿರುವ ಭಕ್ತಿಯು ಎದ್ದು ಕಾಣುತ್ತದೆ.

ಅಂತೆಯೇ ಆತನ ಶಿವಗಣದ ರಗಳೆಗಳಲ್ಲಿ ಶಿವಶರಣರ ಶಿವಭಕ್ತಿಯ ಉಜ್ವಲ ಚಿತ್ರಣವಿದೆ. ಹರಿಹರನ ಶತಕದ್ವಯವು ಪ್ರಮುಖವಾಗಿ ಆತನ ಆತ್ಮಕಥನಗಳೇ ಆಗಿವೆ.

ಗಿರಿಜಾ ಕಲ್ಯಾಣವು ಹರಿಹರನ ಮಹೋನ್ನತ ಚಂಪೂ ಕಾವ್ಯವಾಗಿದೆ. ಅವರೆಗಿನ ಕನ್ನಡ ಚಂಪೂ ಕೃತಿಗಳಲ್ಲಿ ಕಾಣದ ಕಥಾ ವಿಷಯವು ಇಲ್ಲಿದೆ. ಶೈವ ಪುರಾಣಗಳಲ್ಲಿ ಕಂಡು ಬರುವ ಶಿವಪಾರ್ವತಿಯರ ವಿವಾಹದ ಕಥೆ ಗಿರಿಜಾ ವಸ್ತು, ಗಿರಿಜೆಯ ಜನನದಿಂದ ಶಿವನೊಡನೆ ಅವಳ ವಿವಾಹದವರೆಗೆ ಮನೋಜ್ಞವಾಗಿ ಅವಳ ಸೌಂದರ್ಯ, ಸೊಬಗು, ಭಕ್ತಿಯ ಕಠೋರತೆ ಇವುಗಳನ್ನು ಸೂಕ್ಷ್ಮವಾಗಿ ಕವಿಯು ಚಿತ್ರಿಸಿದ್ದಾನೆ.

**ಹರಿಹರನ ಕೃತಿಗಳು**

1. ಗಿರಿಜಾ ಕಲ್ಯಾಣ ಎಂಬ ಚಂಪೂ ಕಾವ್ಯ
2. ಪಂಪಾಶತಕ
3. ರಕ್ಷಾ ಶತಕ
4. ಮುಡಿಗೆಯ ಅಷ್ಟಕ
5. ಶಿವ ಶರಣರ ರಗಳೆಗಳು.

ಇವುಗಳಲ್ಲಿ 63 ಪುರಾತನರು, ಶಿವ ಶರಣರ ರಗಳೆಗಳು ಇವೆ.

**ರಗಳೆಗಳು**

ಹರಿಹರನ ರಗಳೆಗಳಂತೂ ಆತನ ಹೆಸರನ್ನು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಜರಾಮರಗೊಳಿಸಿರುವ ಅಮರ ಕೃತಿಗಳು. ಆತನ ನೈಜ ಪ್ರತಿಭೆಯು ಇಲ್ಲಿ ಗೋಚರಿಸುತ್ತದೆ. ಅವನ ರಗಳೆಗಳ ಸಂಖ್ಯೆಗಳ ಬಗ್ಗೆ ಗೊಂದಲವಿದೆ ಆದರೂ, 106 ಎಂದು ಬಹುತೇಕರ ಅಭಿಪ್ರಾಯವಾಗಿದೆ.

ವಿವಿಧ ಗಾತ್ರದ ಬೇರೆ ಬೇರೆ ಶಿವಶರಣರ ಕಥೆಗಳನ್ನು ಈ ರಗಳೆಗಳಲ್ಲಿ ಹೇಳಲಾಗಿದೆ. ಮುಖ್ಯವಾಗಿ 63 ಪುರಾತನರ ಅಂದರೆ ತಮಿಳಿನ ಪೆರಿಯ ಪುರಾಣದಲ್ಲಿ ಹೇಳಲಾಗಿರುವ 63 ಶಿವಭಕ್ತರ ಕಥೆಗಳು ಇಲ್ಲಿವೆ.

1. ಬಸವರಾಜ ದೇವರ ರಗಳೆ
2. ತಿರುನೀಲಕಂಠ ದೇವರ ರಗಳೆ
3. ನಂಬಿಯಣ್ಣನ ರಗಳೆ
4. ಮಹಾದೇವಿಯಕ್ಕನ ರಗಳೆ
5. ಪ್ರಭುದೇವರ ರಗಳೆ
6. ಕುಂಬಾರ ಗುಂಡಯ್ಯನ ರಗಳೆ
7. ಮಾದಾರ ಚೆನ್ನಯ್ಯನ ರಗಳೆ
8. ಇಳಿಯಾಂಡ ಗುಡಿಮಾರನ ರಗಳೆ
9. ರೇವಣ ಸಿದ್ದೇಶ್ವರ ರಗಳೆಗಳು.

ಹೀಗೆ ಕನ್ನಡ ಸಾಹಿತ್ಯದಲ್ಲಿ ಅಪ್ರತಿಮ ಬರಹಗಾರನಾಗಿ ಕಾಣಿಸಿಕೊಂಡವನೇ ಹರಿಹರ.

# ನಮ್ಮ ಹರಪನಹಳ್ಳಿ

– ಸುವರ್ಣ ಆರ್.ಎಂ.
ಬಿ.ಎಸ್ಸಿ. ದ್ವಿತೀಯ ಸೆಮಿಸ್ಟರ್

ಹರಪನಹಳ್ಳಿಯು ಭಾರತದಲ್ಲಿರುವ ಕರ್ನಾಟಕದ ವಿಜಯನಗರ ಜಿಲ್ಲೆಗೆ ಸೇರುತ್ತದೆ. ಇಲ್ಲಿ 41,889 (2001) ಜನಸಂಖ್ಯೆ ಇದೆ. ಇದು ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಹರಪನಹಳ್ಳಿಯು 14.8 N,75.98 Eನಲ್ಲಿ ಬರುತ್ತದೆ. ಇದು ಸಮುದ್ರ ಮಟ್ಟಕ್ಕಿಂತ ಸುಮಾರು 633 ಮೀ. (2026 ಅಡಿ) ಎತ್ತರದಲ್ಲಿದೆ. 2001ರ ಜನಗಣತಿಯ ಪ್ರಕಾರ ಇಲ್ಲಿಯ ಜನಸಂಖ್ಯೆ 44,889.

ಇಲ್ಲಿಯ ಸಾಕ್ಷರತೆ ಶೇ.55 ಹರಪನಹಳ್ಳಿ ತಾಲ್ಲೂಕಿನಲ್ಲಿ 28 ಗ್ರಾಮ ಪಂಚಾಯ್ತಿಗಳು ಇವೆ. ದಾವಣಗೆರೆಯಿಂದ 40 ಕಿ.ಮೀ. ದೂರದಲ್ಲಿದೆ. ಈ ತಾಲ್ಲೂಕು ಮೊದಲು ಬಳ್ಳಾರಿ ಜಿಲ್ಲೆಗೆ ಸೇರಿತ್ತು. 1997ರಲ್ಲಿ ದಾವಣಗೆರೆಗೆ ಸೇರ್ಪಡೆಯಾಗಿತ್ತು. ಈಗ ಹೊಸ ಜಿಲ್ಲೆಯ ವಿಜಯನಗರ ಜಿಲ್ಲೆಗೆ ಸೇರಿಸಲಾಗಿದೆ. ಹರಿಹರದಿಂದ ಕೂಡ 40 ಕಿ.ಮೀ. ದೂರದಲ್ಲಿದೆ.

ಹರಪನಹಳ್ಳಿಯು ಮೊದಲು ಕರ್ನಾಟಕ ವಿಶ್ವವಿದ್ಯಾಲಯ, ನಂತರ ಗುಲ್ಬರ್ಗ ವಿಶ್ವವಿದ್ಯಾಲಯ ಆಮೇಲೆ ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಟ್ಟಿದೆ. ಇಂದು ಹೊಸ ಶಿಕ್ಷಣನೀತಿ ಜಾರಿಗೆ ಬಂದಿದೆ. ಈ ಪ್ರಸ್ತುತ ವಿಜಯನಗರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಸೇರಿದೆ.

ಖ್ಯಾತ ಸಾಹಿತಿಗಳಾದ ಬೀಚಿ, ಕುಸುಮಾಕರ ದೇಸಾಯಿ, ಹರಪನಹಳ್ಳಿ ಭೀಮವ್ವ, ಹಿರಿಯ ಸಾಹಿತಿಗಳಾದ ಕುಂ.ಬಾ. ಸದಾಶಿವಪ್ಪ ಅವರು ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ದರ್ಶನ ಹಾಗೂ ಕುತೂಹಲದ ಕರ್ನಾಟಕ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಹರಪನಹಳ್ಳಿ ಹೆಸರನ್ನು ನಾಡಿನಾದ್ಯಂತ ಬೆಳಗಿಸಿದ್ದಾರೆ.

ಬಾಗಳಿ, ನೀಲಗುಂದ, ಉಚ್ಚಂಗಿದುರ್ಗ, ಕೂಲಹಳ್ಳಿ ಕ್ಷೇತ, ಬಾಗಳಿ ಕಲ್ಲೇಶ್ವರ ದೇವಸ್ಥಾನ ಇತಿಹಾಸ ಪ್ರಸಿದ್ಧ ಕ್ಷೇತ್ರಗಳು.

ಅರಸನಾಳು ಎ.ಬಿ.ಆರ್ ಕೊಟ್ರಗೌಡರು, ಹೆಚ್.ಎಂ. ವೀರಭದ್ರಯ್ಯ ಅವರು ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಹರಪನಹಳ್ಳಿಯು ಬೀಚಿ ನಾಡೆಂದು ಪ್ರಸಿದ್ಧವಾಗಿದೆ.

**ಬೀಚಿ**

ಏಪ್ರಿಲ್ 23, 1913 ಹರಪನಹಳ್ಳಿ, ವಿಜಯನಗರ ಜಿಲ್ಲೆಯಲ್ಲಿ ಬೀಚಿಯವರು ಜನಿಸಿದರು. ಮಾಧ್ವ ಸಂಪ್ರದಾಯಸ್ಥ ಕುಟುಂಬವೊಂದರಲ್ಲಿ ಬೀಚಿ, ಆರ್. ಶ್ರೀನಿವಾಸರಾಯರು ಮತ್ತು ಭಾರತಮ್ಮ ದಂಪತಿಗಳಿಗೆ 2ನೆಯ ಮಗನಾಗಿ ಜನಿಸಿದರು. ಬೀಚಿ 9 ವರ್ಷದವರಿದ್ದಾಗ ತಾಯಿ ತೀರಿಕೊಂಡರು. ಅವರ ಜೀವನ ಚರಿತ್ರೆಯ ಒಂದು ಪುಟ ಅವರೇ ಬರೆದ ಬೀಚಿ ಬೈಯೋಗ್ರಫಿಯಲ್ಲಿದೆ. ಇವರ ಪತ್ನಿ ಸೀತಾಬಾಯಿ.

"ಬೀಚಿ" ಕನ್ನಡ ಹೂಣ ಲಿಪಿಗಳ ಎರಡು ತಲೆ ಕರುಪಿನಂತೆ ವಿಚಿತ್ರವಾಗಿ ಕಾಣುವ ಈ ಹೆಸರು ಹೆದರಿಕೆ ಹುಟ್ಟಿಸುವಂತ ಬಲಶಾಲಿಯಾದ ಹೆಸರು. ನಿಜವಾದ ಅಚ್ಚಕನ್ನಡದ 'ಬೀಚಿ'ಯೇ . "ಪಾರ್ಥ ಸಾರಥಿ ಪಾಚು ಆಗುತ್ತಾನೆ. ನಾರಾಯಣ ನಾಣಿ. ಅಂತೆಯೇ ಭೀಮಸೇನ ಬೀಚಿಯಾದ ಅವರಿವರ ಬಾಯಲ್ಲಿ, ಹಾಗಾದುದೇ ಒಳಿತಾಯಿತು. ಸದಾ ಕರುಳಿನ ಬೇನೆಯಿಂದ ನರಳುವ ಈ ಹೊಟ್ಟೆರೋಗಿ 'ಭೀಮಸೇನಾ ಹೇಗಾದನು?' ಹೀಗಾಗಿ ಈ 'ಕಚ್ಚೆಕಡ್ಡಿ ಪೈಲ್ವಾನ' ಅವರ ಅಮ್ಮನ ಮುದ್ದಿನ ನುಡಿಗತ್ತರಿಗೆ ಸಿಲುಕಿ 'ಬೀಚಿ' ಯಾದ.

ಬೀಚಿ ಅವರ ಭಾಷಾ ಸಾಧನೆಗೆ ಸಹಾಯಕ ವಾಗಿರುವ ಅವರ ಶ್ರವಣಾಭಿರುಚಿ ಉನ್ನತಮಟ್ಟದ್ದು, ಕೇಳಿದ ಮಾತನ್ನು ಅದೇ ಉಚ್ಚಾರ ಕ್ರಮದಲ್ಲಿ ಉಲ್ಲೇಖಿ ಸಲು ಅವರು ಪ್ರಯತ್ನಿಸುತ್ತಾರೆ. ಜನ ಬಳಸುವ ಒಂದು ಶಬ್ದಕ್ಕೆ ಏನೆಲ್ಲಾ ಅರ್ಥ, ಅನರ್ಥ, ಅಪಾರ್ಥ, ಹೀನಾರ್ಥ, ನಾನಾರ್ಥಗಳನ್ನು ಕಲ್ಪಿಸಬಹುದು. ಶಬ್ದವನ್ನು ಹದರ

ವಾಗಿ ತಿರುವಿ ಬಿಡಿ ಭಾಗಗಳನ್ನು ಹೇಗೆ ತೆರೆದಿಡಬಹುದು ಎಂದು ತಿಳಿಯ ಬಯಸುವವರು ಬೀಚಿಯವರ ಬರಹದ ವೈಖರಿಯನ್ನೇ ಗಮನಿಸಬೇಕು. ಹೀಗಾಗಿ ಅವರಿಗೆ ಸಾಹಿತ್ಯ ಪರಿಷತ್ತಿನ 'ಕನ್ನಡ-ಕನ್ನಡ ನಿಘಂಟು' ಅಂದ ಕೂಡಲೇ 'ಹೆರಲಾರದ ಬಸುರಿ' ಎಂಬ ವ್ಯಾಖ್ಯಾನ ಸಾಧ್ಯವಾಗುತ್ತದೆ.

ಬೀಚಿ ಸುಮಾರು 66 ಕೃತಿಗಳನ್ನು ರಚಿಸಿದರು. ಅವುಗಳಲ್ಲಿ 35 ಕಾದಂಬರಿಗಳು. ಇನ್ನುಳಿದವು ಏಕಾಂತ, ರೇಡಿಯೋ ನಾಟಕಗಳು, ವಿನೋದ ಬರಹಗಳು, ಸಣ್ಣಕಥೆ ಇತ್ಯಾದಿ.

ದಾಸಕೂಟ ಕನ್ನಡ ಸಾಹಿತ್ಯದಲ್ಲಿ ಬಂದ ಮೊಟ್ಟ ಮೊದಲ ಹಾಸ್ಯ ಕಾದಂಬರಿ. ಆಗಿಷ್ಟು, ಈಗಿಷ್ಟು, ಆರು ಏಳು ಸ್ತ್ರೀ ಸೌಖ್ಯ, ಅಮ್ಮಾವ್ರ ಕಾಲ್ಗುಣ, ಆರಿದ ಚಹಾ, ಅಂದನಾ ತಿಂಮ, ಬೆಳ್ಳಿ ಮಾತ್ರೆಗಳು, ಬೆಂಗಳೂರು ಬಸ್ಸು, ಬಿತ್ತಿದ್ದೆ ಬೇವು, ಬ್ರಹ್ಮಚಾರಿ, ಆಟೋ, ಮಾತು ಮತ್ತು ಅರ್ಥ ಎಂಬ ಅನೇಕ ಕಾದಂಬರಿಗಳು. ರೇಡಿಯೋ ನಾಟಕಗಳು, ಏಕೀಕರಣ, ವಶೀಕರಣ, ಏಕೋದರರು, ದೇವರ ಆತ್ಮಹತ್ಯೆ, ನಾನೇ ಸತ್ತಾಗ ಎಂಬ ನಾಟಕಗಳು. ಕೆನೆಮೊಸರು, ಬೇವಿನಕಟ್ಟೆ ಎಂಬ ಅಂಕಣಗಳು.

"ನಿನ್ನಂತೆ ನೀನಾಗು ನಿನ್ನ ನೀ ಅರಿ ಮೊದಲು
ಚೆನ್ನೆಂದು ದೊಡ್ಡವರ, ಅನುಕರಿಸಬೇಡ
ಏನಾಯ್ತು, ಮರಿಕತ್ತೆ? ಚೆಲುವಿತ್ತು, ಮುದ್ದಿತ್ತು
ತನ್ನಪ್ಪನಂತಾಗಿ ಹಾಳಾಯ್ತೋ ತಿಂಮ".

ಬರಹಗಾರನ ವೈಯಕ್ತಿಕ ಪ್ರತಿಭೆ ಜಡ ಅನುಕರಣೆಯ ಮರಳಿನಲ್ಲಿ ಇಂಗಿ ಹೋಗಬಾರದು ಇದು ಬೀಚಿ ಅವರ ದೃಷ್ಟಿಕೋನ. ಈ ದೃಷ್ಟಿಯನ್ನು ಕಂಡೇ ಇರಬೇಕು ತುಂಬಾ ಗಂಭೀರ ಬರಹಗಾರನಾದ ಶಂ.ಬಾ. ಜೋಶಿ ಅವರು ಬೀಚಿ ಅವರನ್ನು "ತನ್ನನ್ನು ತಾನೇ ರೂಪಿಸಿಕೊಂಡ ಅಪೂರ್ವ ಸ್ವಯಂಭೋ" ಎಂದು ವರ್ಣಿಸಿದ್ದಾರೆ.

ಇವರು ಡಿಸೆಂಬರ್ 7, 1980 ರಂದು ಮರಣ ಹೊಂದಿದರು. ಅವರು ಕನ್ನಡ ಸಾಹಿತ್ಯಕ್ಕೊಂದು ಸೊಗಸು ಮೂಡಿಸಿದವರು. ಕರ್ನಾಟಕದ 'ಬರ್ನಾಡ್ ಷಾ' ಎಂದೇ ಕರೆಯಲ್ಪಡುವ ಹಾಸ್ಯ, ವ್ಯಂಗ್ಯ, ವಿಡಂಬನಾತ್ಮಕ ಸಾಹಿತಿ. ಇವರ ಪ್ರವಾಸ ಸಾಹಿತ್ಯ 'ದೇವರಿಲ್ಲದ ಗುಡಿ' ಮತ್ತು ಆತ್ಮಕಥೆ 'ನನ್ನ ಭಯಾಗ್ರಫಿ' ತುಂಬಾ ಪ್ರಸಿದ್ಧವಾಗಿವೆ.

ಹೀಗೆ ಬೀಚಿ ಎಂಬ ಶ್ರೇಷ್ಠ ಸಾಹಿತಿ ನಮ್ಮ ಹರಪನಹಳ್ಳಿಯಲ್ಲಿ ಜನಿಸಿರುವುದು ಶ್ರೇಷ್ಠ ಸಂಗತಿ.

## ಸ್ನೇಹ

ಕಾದಾಟದಿಂದಲೇ ಒಡನಾಟ
ಒಡನಾಟದುದ್ದಕ್ಕೂ ಸವಿ ಸ್ನೇಹದ ರಸದೂಟ
ಬೇರಾದರೂ ದೂರಾಗದ ಮನಸು
ದೂರಾದರೂ ದೂರದಷ್ಟು ಸೊಗಸು...
ನೋಡುವವರಿಗೆ ಬಿಡಿಸಲಾಗದ ಒಗಟು
ನಮ್ಮೀ ಸ್ನೇಹ... ಮೈತ್ರಿಯೋ... ಮತ್ಸರವೋ
ಎಂಬುದೇ ಕಗ್ಗಂಟು.

– ಹಾರ್ನಳ್ಳಿ ಅಮೃತ
ಬಿ.ಎಸ್ಸಿ. ದ್ವಿತೀಯ ವರ್ಷ

# ಹಸ್ತದ ಭವಿಷ್ಯ

– ಡಿ. ಹರೀಶ್
ಬಿ.ಎಸ್ಸಿ, ದ್ವಿತೀಯ ವರ್ಷ

ಜೀವನದಲ್ಲಿ ಸಾಮಾನ್ಯವಾಗಿ ಎಲ್ಲರ ಮನಸ್ಸಿನಲ್ಲಿ ಉಂಟಾಗುವ ಪ್ರಶ್ನೆ (ಸವಾಲು) ಎಂದರೇ ನಮ್ಮ ಭವಿಷ್ಯ ಏನಾಗಬಹುದು.

ಬಾಲ್ಯಾವಸ್ಥೆಯಲ್ಲಿ ಪೋಷಕರು ಹಸ್ತ ತೋರಿಸಿ ಪುತ್ರ ಅಥವಾ ಪುತ್ರಿಯ ಭವಿಷ್ಯವನ್ನು ಕೇಳಿಸಿಯೇ ಇರುತ್ತಾರೆ. ಹಸ್ತವನ್ನು ಗಮನಿಸಿದ ಜ್ಯೋತಿಷ್ಯರು ನಿಮ್ಮ ಪುತ್ರ ಅದ್ವಿತೀಯನಾಗುತ್ತಾನೆ ಎಂದಾಗ ಅಪ್ಪನ ಹರ್ಷೋದ್ಗಾರಕ್ಕೆ ಪಾರವೇ ಇಲ್ಲದಂತಾಗುತ್ತದೆ. ಒಂದು ವೇಳೆ ಅದೇ ಜ್ಯೋತಿಷ್ಯರು ಮಗುವಿನ ಭವಿಷ್ಯದಲ್ಲಿ ಕೊಂಚ ಕಂಟಕ ಉಂಟು ಎಂದಾಗ ಅಪ್ಪ ಚಿಂತಾಕ್ರಾಂತತೆಯಿಂದ ಕುಬ್ಜನಾಗುತ್ತಾನೆ.

ತಂದೆ ನಮಗೆ ಜೀವನದಲ್ಲಿ ಉತ್ತಮ ದಿನಗಳನ್ನೇ ಸೃಷ್ಟಿಸಲು ಪ್ರಯತ್ನಿಸುತ್ತಾರೆ. ಹಾಗಾದರೆ ಬಾಲ್ಯದಲ್ಲಿ ಸಂಸ್ಕಾರ, ಪ್ರೌಢದಲ್ಲಿ ಸಹಬಾಳ್ವೆ, ಯೌವ್ವನದಲ್ಲಿ ಉತ್ತಮ ಶಿಕ್ಷಣ, ತಾರುಣ್ಯದಲ್ಲಿ ತನ್ನಂತೆ ಪರರು ಎಂಬುವ ಭಾವನೆ ಮೂಡಿಸಿದ್ದರೆ, ಮಗ ತಂತಾನೇ ಭವಿಷ್ಯವನ್ನು ಕಟ್ಟಿಕೊಳ್ಳುತ್ತಿದ್ದ. ಆದರೆ, ವಿಚಿತ್ರವೆಂದರೆ ಅಪ್ಪ ಹಸ್ತ ತೋರಿಸಿ ಭವಿಷ್ಯ ಕೇಳುತ್ತಿದ್ದಾನೆ. ಈ ಹಸ್ತ ಭವಿಷ್ಯ ಎಲ್ಲವೂ ಸತ್ಯ ಎಂದು ಹೇಳಲಾಗುವುದಿಲ್ಲ, ಹಾಗಂಥ ಸುಳ್ಳು ಎಂದು ಹೇಳುತ್ತಿಲ್ಲ.

12 ವರ್ಷದ ಒಬ್ಬ ಹುಡುಗ ದಾರಿಯಲ್ಲಿ ನಡೆದು ಬರುತ್ತಿದ್ದ. ರಸ್ತೆಯ ಬದಿಯಲ್ಲೇ ಬಹಳಷ್ಟು ಜನ ಸಾಲಾಗಿ ನಿಂತಿದ್ದರು. ಹುಡುಗ ಆಶ್ಚರ್ಯಚಕಿತನಾದ. ಇಷ್ಟೊಂದು ಜನಸಂದಣಿ ಯಾರನ್ನು ಭೇಟಿ ಮಾಡಲು ಸಾಲಾಗಿ ಕಾಯುತ್ತಿದ್ದಾರೆಂದು ಸಾಲಲ್ಲಿ ನಿಂತವರನ್ನು ಕೇಳಿದ. ಯಾರಿಗಾಗಿ ನಿಂತಿರುವಿರಿ ಎಂದು. ಆಗ ಒಬ್ಬ ವ್ಯಕ್ತಿ ಪ್ರತ್ಯುತ್ತರವಾಗಿ ಹೇಳಿದ ಭವಿಷ್ಯವನ್ನು ಕೇಳಲು ನಿಂತಿದ್ದೇವೆ ಎಂದು.

ಹುಡುಗ : ನಮ್ಮ ಭವಿಷ್ಯವನ್ನು ಯಾಕೆ ಬೇರೊಬ್ಬರಲ್ಲಿ ಕೇಳಬೇಕು?

ವ್ಯಕ್ತಿ : ಮುಂಬರುವ ದಿನಗಳಲ್ಲಿ ಕಂಟಕ ಉಂಟಾದರೆ ಅವುಗಳಿಗೆ ಇಂದಿನಿಂದಲೇ ಪರಿಹಾರ ಹುಡುಕಬಹುದು.

ಹುಡುಗ : ಜ್ಯೋತಿಷ್ಯರು ಹೇಳಿದಂತೆಯೇ ಎಲ್ಲವೂ ನಿಜವಾಗುತ್ತದೆಯೇ?

ವ್ಯಕ್ತಿ : ಉತ್ತರಿಸದೇ, "ಮೌನಂ ಸಮ್ಮತಿ ಲಕ್ಷಣಂ" ಎಂಬಂತೆ ನಿಂತು ಬಿಟ್ಟ.

ಬಹುಶಃ ಅವನಲ್ಲಿ ಉತ್ತರವಿಲ್ಲದಂತೆ ಕಾಣುತ್ತದೆ.

ಹುಡುಗನಿಗೆ ತನ್ನ ಹಸ್ತದ ಗೆರೆಗಳಲ್ಲಿ ಯಾವ ತರಹದ ಭವಿಷ್ಯ ಅಡಗಿದೆ ಎಂದು ತಿಳಿದುಕೊಳ್ಳುವ ಹಂಬಲ ವೃದ್ಧಿಸುತ್ತಾ ಹೋಯಿತು. ತಾನೂ ಸಹ ಸಾಲಲ್ಲಿ ನಿಂತ. ಸಾಲು ದೊಡ್ಡದಾಗಿದ್ದರಿಂದ ಜ್ಯೋತಿಷಿಯನ್ನು ಕಾಣಲು ತಡವಾಯಿತು. ಊಟ, ನೀರು ತ್ಯಜಿಸಿ ಅವರನ್ನು ಕಾಣಲು ಹಂಬಲಿಸಿದ. ಸಾಲು ಮುಗಿಯುತ್ತಿದ್ದಂತೆ ತನ್ನ ಭವಿಷ್ಯ ಹತ್ತಿರವಾಗುವಂತೆ ಭಾಸವಾಗತೊಡಗಿತು. ತನ್ನ ಹಸ್ತವನ್ನು ಅವರ ಮುಂದಿತ್ತ, ಜೋಯಿಸರು ಸೂಕ್ಷ್ಮವಾಗಿ ರೇಖೆಗಳನ್ನು ಗಮನಿಸಿ ಕೊನೆಗೆ ಹೇಳಿದರು.

"ನಿನಗೆ ಅಭೂತಪೂರ್ವವಾದ ಭವಿಷ್ಯವಿದೆ, ಆದರೆ ನಿನ್ನಲ್ಲಿ ಒಂದು ರೇಖೆಯಲ್ಲಿ ಮಾತ್ರ ಕೊರತೆಯಿದೆ. ಆ ಒಂದು ರೇಖೆ ಇದ್ದಿದ್ದರೆ ನೀನು ಅಪ್ರತಿಮನಾಗುತ್ತಿದ್ದೆ" ಎಂದು ಪರಿಪರಿಯಾಗಿ ವಿವರಿಸತೊಡಗಿದರು.

ನಾನಂದುಕೊಂಡೆ ಹುಡುಗನಲ್ಲಿ ಕೊಂಚ ಗೊಂದಲ ಸೃಷ್ಟಿಯಾಗಿರಬಹುದೆಂದು. ಆದರೆ, ಹುಡುಗನ ಯೋಚನೆ, ಯೋಜನೆಯೇ ಬೇರೆಯಾಗಿತ್ತು.

ಜೋಯಿಸರು ಮುಂದೆ ಕುಳಿತಿದ್ದ ಹುಡುಗ ಮಾತು ಕೇಳಿದ ತಕ್ಷಣ ತಟ್ಟನೆ ಎದ್ದು ನಿಂತ. ತನ್ನ ಜೇಬಿನಲ್ಲಿದ್ದ ಕತ್ತಿ ಹೊರತೆಗೆದ. ಜ್ಯೋತಿಷಿ ಗಾಬರಿಯಿಂದ ಮೇಲೆದ್ದರು. ತನಗೆಲ್ಲಿ ಕತ್ತಿಯಿಂದ ಇರಿಯುವನೋ ಎಂದು ಭಯಗೊಂಡಿದ್ದರು. ಆದರೆ ಹುಡುಗ ಜ್ಯೋತಿಷಿಗಳಿಗೆ ಕತ್ತಿಯಿಂದ ಇರಿಯಲಿಲ್ಲ ಬದಲಿಗೆ,

ಹುಡುಗ : "ಹೆದರಬೇಡಿ ಜ್ಯೋತಿಷಿಗಳೇ, ನೀವು ನನಗೆ ತಿಳಿಸಿದ ಎಲ್ಲಾ ರೇಖೆಗಳು ನನ್ನ ಹಸ್ತದಲ್ಲಿ ಬರಬೇಕು" ಎಂದು ಹೇಳಿದ.

ಅವರು ತೋರಿಸಿದ ತಕ್ಷಣವೇ ತನ್ನ ಕೈಯನ್ನು ಕತ್ತಿಯಿಂದ ಇರಿದುಕೊಂಡನು. ಜ್ಯೋತಿಷಿಗಳು ಹೇಳಿದ ಹಾಗೆಯೇ ರೇಖೆಯು ಬಂತು. ಧಾರಾಕಾರವಾಗಿ ರಕ್ತವು ಹರಿಯಿತು. ಈಗ ಪ್ರಶ್ನೆಯನ್ನು ಕೇಳಿದ, ನೀವು ಹೇಳಿದ ಹಾಗೆ ನಾನು ರೇಖೆಯನ್ನು ಬರಿಸಿದ್ದೇನೆ. ನಾನು ನೀವು ನುಡಿದ ಹಾಗೆ, ನಾನು ಪ್ರಸಿದ್ಧಿಯಾಗುತ್ತೇನೆಯೇ?

ಜ್ಯೋತಿಷ್ಯರು: "ಇದು ನೀ ಮೂಡಿಸಿದ ರೇಖೆ" ಯಾರ ಮನಸ್ಸಲ್ಲಿ ರೇಖೆ ಕೈಯಲ್ಲಿ ಮೂಡಿದ ರೇಖೆಯಲ್ಲ, ಮನಸ್ಸಲ್ಲಿ ಅಚ್ಚಳಿಯದಂತೆ ಮೂಡಿರುತ್ತದೆಯೋ, ಅವರು ವಿಶ್ವದಾದ್ಯಂತ ಮಾನ್ಯತೆಯನ್ನು ಪಡೆಯುತ್ತಾರೆ.

ಸ್ನೇಹಿತರೇ ನಮ್ಮ ಕೈಯಲ್ಲಿರುವ ಗೆರೆಗಳು ನಮ್ಮ ಜೀವನಕ್ಕೆ ಸಂಬಂಧವೇ ಇಲ್ಲ ಎನಿಸುತ್ತದೆ. ಏಕೆಂದರೆ ನಾವು ಕೇವಲ ನಮ್ಮಂತಿರುವವರ ಬಗ್ಗೆ ಮಾತ್ರ ಯೋಚಿಸುತ್ತೇವೆ. "ಕೇವಲ ಕೈ ಇದ್ದವರಿಗೆ ಮಾತ್ರ ಭವಿಷ್ಯವಿದ್ದರೆ, ಕೈ ಇಲ್ಲದವರಿಗೆ ಭವಿಷ್ಯವೇ ಇಲ್ಲವೇ?" ನೀವೇ ಯೋಚಿಸಿ ನೋಡಿ. ಈ ಕಥೆಯಲ್ಲಿ ಬಂದ ತರುಣ ಬೇರೆ ಯಾರೂ ಅಲ್ಲ, ಆತ ಮೆಸಿಡೋನಿಯಾದಿಂದ ಇಡೀ ಪ್ರಪಂಚವನ್ನೇ ಗೆಲ್ಲಲು ಬಂದ' ಅಲೆಗ್ಸಾಂಡರ್' ದೊರೆ.

**ಕೊನೆಯ ಮಾತು** : ಇದನ್ನು ಒಮ್ಮೆ ಯೋಚಿಸಿ. "ನಿಂತು ಹೋದ ಗಡಿಯಾರ ದಿನಕ್ಕೆ ಎರಡು ಬಾರಿ ಸರಿಯಾದ ಸಮಯವನ್ನು ಸೂಚಿಸುತ್ತದೆ".

## ಅಮ್ಮ

ಅಮ್ಮ ಎಂಬ ಎರಡಕ್ಷರದ ಅಮೃತಕ್ಕಿಂತ ಸಿಹಿಯಾದುದು
ಅಮ್ಮನ ಪ್ರೀತಿಯ ಮುಂದೆ ಬ್ರಹ್ಮನು ಕೂಡ ಸರಿಸಾಟಿಯಾಗನು
ಕೈ ತುತ್ತು ತಿನ್ನಿಸಿ ಲಾಲಿ ಹಾಡಿದವಳಿಗೆ ಹಾಡಿದೋಳಿಗೆ
ಗುಣವಾಚನ ಮಾಡಲು ಪದಗಳೇ ಸಿಗದು.
ಚಂದ್ರನ ತೋರಿಸಿ ಹಾಡಿದ ಜೋಗುಳಕ್ಕೆ ಬೆಲೆನೇ ಕಟ್ಟಲು ಆಗದು.
ಲೋಕದ ಮಾತಲ್ಲಿ ಅವಳ ಹೆಸರೇ ಮೊದಲಾದುದು
ಮಾತಿನಲ್ಲಿ ಹೇಳಲಾಗದು, ರೇಖೆಯಲ್ಲಿ ಗೀಚಲಾಗದು,
ಮನೆಯಲ್ಲೂ, ಮನದಲ್ಲೂ ತಾಯಿಯ ನೆನಪು ಅಮರ ಹಾಗೂ ಪಂಚದೃವತಾರೆ
ಆದರೂ ಕೆಲ ಮಕ್ಕಳಿಗೆ ತಾಯಿ ಪ್ರೀತಿ ಸಿಕ್ಕಲ್ಲ,
ಸಿಕ್ಕವರು ಅರ್ಥ ಮಾಡಿಕೊಳ್ಳಲ್ಲ.

**ಹಾರ್ನಳ್ಳಿ ಅಮೃತ**
ಬಿ.ಎಸ್ಸಿ., ದ್ವಿತೀಯ ವರ್ಷ

## ಕನಕದಾಸರ ಕೀರ್ತನೆಗಳು

ಅರಸಿನಂತೆ ಬಂಟನೋ ಹನುಮರಾಯ
ಅರಸಿನಂತೆ ಬಂಟನೋ ಹನುಮರಾಯ
ಅರಸಿನಂತೆ ಬಂಟ ತಾನೆಂಬುದನ್ನು ।
ಕುರುಹ ತೋರಿದ ಮೂಲೋಕದಿ ಹನುಮಂತ ॥

ಒಡೆಯನಂಬುಧಿಯೊಳು ಪೊಕ್ಕು ದೈತ್ಯನ ಕೊಂದು ।
ತಡೆಯದೆ ಶ್ರುತಿಯಜಗಿತ್ತನೆಂದು ॥
ಸಡಗರದಿಂದ ಕಡಲದಾಂಟಿ ಮಣಿಜೆ ಪೇ ।
ರ್ಮುಡಿಯ ಮಾಣಿಕವ ರಾಘುವಗಿತ್ತೆ ಹನುಮ ನೀ ॥

ಮಂದಾರಚಲ ಗೋವರ್ಧನಗಿರಿ ಲೀಲೆ ।
ಯಿಂದಲಿ ಹರಿ ನೆಗೆಹಿದನೆನುತ ॥
ಸಿಂಧು ಬಂಧನಕ್ಕೆ ಸಮಸ್ತ ಪರ್ವತಗಳ ।
ತಂದು ನಳದ ಕೈಯಲಿಳುಹಿದೆ ಹನುಮ ನೀ ॥

ಸಿರಿಧರ ವರ ಕಾಗಿನೆಲೆಯಾದಿಕೇಶವ ।
ಸುರಗಿಗಮೃತವನ್ನು ಎರೆದನೆಂದು ॥
ವರ ಸಂಜೀವನವನು ತಂದು ಕಪಿಗಳ ಪ್ರಾಣ ।
ಕೆರೆದು ಶ್ರೀ ರಾಮದೂತನಾಮ್ಯಾ ಹನುಮ ನೀ ॥

ಸಂಗ್ರಹ :
**ಟಿ. ಲಕ್ಷ್ಮೀ**
ಬಿ.ಎ. ದ್ವಿತೀಯ ಸೆಮಿಸ್ಟರ್

## ಗುರುವಿನ ಆಶಯ
## (ಗುರು ಶಿಷ್ಯರ ಸಂಬಂಧಗಳು)

ಗುರುವಿನ ಹೆಸರು ಅಜರಾಮರವಾಗಬೇಕಾದರೆ
ತನ್ನನ್ನೇ ಶಿಷ್ಯನನ್ನು ಪಡೆಯಬೇಕು.
ಗುರು ಕಥೆಯಾದರೆ ಶಿಷ್ಯ ದಂತಕತೆ ಆಗಬೇಕು
ಗುರು ಗುಡಿಯಾದರೆ ಶಿಷ್ಯ ಗೋಪುರವಾಗಬೇಕು
ಗುರು ಶಿಕ್ಷಕನಾದರೆ ಶಿಷ್ಯ ಮುಖ್ಯಶಿಕ್ಷಕನಾಗಬೇಕು
ಗುರು ಶ್ರೇಷ್ಠನಾದರೆ ಶಿಷ್ಯ ಪರಮಶ್ರೇಷ್ಠನಾಗಬೇಕು
ಗುರು ಮೂರ್ತಿಯಾದರೆ
ಶಿಷ್ಯ ಸಾಕಾರಮೂರ್ತಿಯಾಗಬೇಕು
ಗುರು ದೀಪವಾದರೆ ಶಿಷ್ಯ ನಂದಾದೀಪವಾಗಬೇಕು
ಗುರು ಅಮೃತವಾದರೆ ಶಿಷ್ಯ ಪಂಚಾಮೃತವಾಗಬೇಕು
ಗುರು ಜ್ಞಾನಿಯಾದರೆ ಶಿಷ್ಯ ಸುಜ್ಞಾನಿಯಾಗಬೇಕು
ಗುರು ಮರವಾದರೆ ಶಿಷ್ಯ ಹೆಮ್ಮರವಾಗಬೇಕು
ಗುರು ಪುಟವಾದರೆ ಶಿಷ್ಯ ಪುಸ್ತಕವಾಗಬೆಕು
ಗುರು ಪುಸ್ತಕನಾದರೆ ಶಿಷ್ಯ ಗ್ರಂಥಾಲಯವಾಗಬೇಕು
ಗುರು ಪಂಡಿತನಾದರೆ ಶಿಷ್ಯ ವಿದ್ವಾಂಸನಾಗಬೇಕು
ಪ್ರತಿ ಗುರುವಿನ ಆಶಯ, ತನ್ನ ಶಿಷ್ಯ ತನ್ನನ್ನು ಮೀರಿಸುವ ಹಂತಕ್ಕೆ ಬೆಳೆಯಬೇಕು ಎಂಬುದು ಗುರುವಿನ ಕನಸಾಗಿರುತ್ತದೆ.

**ಉತ್ತಂಗಿ ಶೀಲ**
ಬಿ.ಎ. ದ್ವಿತೀಯ ವರ್ಷ

# ಚುಟುಕುಗಳು

## ಮುಂಜಾನೆ

ನಮಸ್ಕಾರ ಮುಂಜಾನೆ
ಏಳಿ ಎದ್ದೇಳಿ ಬೇಗನೇ
ಏಳುವಾಗ ಮಾಡದಿರಿ ನಟನೆ
ಶುಚಿಯಾಗಿ ಮಾಡಿರಿ ದೇವನಾಮ ಪಠನೆ
ಅನಂತರ ಮೂಡಲಿ ಕಾಯಕದ ಭಾವನೆ.

## ರಂಗೋಲಿ

ಮನದಿ ಮೂಡಲಿ ತಾಳ್ಮೆಯ ರಂಗೋಲಿ
ಆಗದಿರಲಿ ಕೋಪದಲಿ ಬದುಕಿನ ಚಿಲ್ಲಾಪಿಲ್ಲಿ
ಇದು ಬದುಕು ಬಯಸುವ ಸುಪ್ವಾಲಿ
ಇದನ್ನು ಕಲಿತು ನೀ ನಗುತಾ ನಲಿ.

## ವಿದ್ಯಾರ್ಥಿ ವಾಣಿ

ಓದಬೇಕೆಂಬ ಆಸೆಯಿಂದ ಬೇಗನೆ ಎದ್ದೆ
ಆದರೆ ಆಸೆಯೇ ದುಃಖಕ್ಕೆ ಮೂಲವೆಂದು
ಮತ್ತೆ ಹಾಸಿಗೆಯ ಮೇಲೆ ಬಿದ್ದೆ
ಪರೀಕ್ಷೆಯಲ್ಲಿ ಉತ್ತರಗಳನ್ನು ಕದ್ದೆ
ಫಲಿತಾಂಶದಲ್ಲಿ ಬಂತು ಬರೀ ಮುದ್ದೆ.

## ಛಲ

ಸಾಯೋವಾಗ ಬೇಕಾಗಿಲ್ಲ ಗಂಗಾಜಲ
ಬದುಕಿರುವಾಗ ಬೇಕು ಸಾಧಿಸುವ ಛಲ

## ಉಪದೇಶ

ನಿನ್ನೆಯ ಸೋಲಿನ ಬಗ್ಗೆ ಹತಾಶೆ ಪಡಬೇಡ
ನಾಳೆಯ ಗೆಲುವಿನ ಬಗ್ಗೆ ಸಂತೋಷ ಪಡು
ಮೊದಲು ಸೋಲುವುದನ್ನು ಕಲಿ
ಆಮೇಲೆ ಗೆಲುವು ತಾನಾಗಿಯೇ ಲಭಿಸುತ್ತದೆ.

## ಫ್ಯಾಷನ್

ಶೋಕಿಗಾಗಿ ಕಾಲೇಜಿಗೆ ಹೋಗುವುದೇ
ಈಗಿನ ಹುಡುಗರ ಫ್ಯಾಷನ್
ಏಕೆಂದರೆ ಈಗಿನ ಪಾಲಕರು ಕೇಳದೇ
ಹಣ ಕೊಡುವ ಎಟಿಎಂ ಮೆಷಿನ್

## ರಕ್ಷಕರು

ವಿದ್ಯೆ ಕಲಿಸುವಾಗ ಶಿಕ್ಷಣ ನೀಡುವವರು
ಲಜ್ಜೆ ಬಿಟ್ಟು ತಪ್ಪೆಸಗಿದಾಗ ಶಿಕ್ಷೆ ನೀಡುವವರು
ಎಡವಿ ಕಂಗೆಟ್ಟಾಗ ರಕ್ಷಣೆ ನೀಡುವವರು
ಅಜ್ಞಾನ ಅಶಿಸ್ತುಗಳ ಭಕ್ಷಕರು
ಅವರೇ ಶಿಕ್ಷಕರು; ನಮ್ಮ ರಕ್ಷಕರು.

ಬಿ. ನೀಲಮ್ಮ
ಬಿ.ಎ. ದ್ವಿತೀಯ ವರ್ಷ

## ಮೌನ

ತಿಳಿಯದೇ ಮಾಡಿದೆ ನಿನ್ನಯ ಧ್ಯಾನ
ಅದಕ್ಕೇ ಏನೋ ಈ ಮೌನ
ತಿಳಿಯದೇ ಮಾಡಿರುವೆ ಪ್ರೀತಿಯನ್ನ,
ಸಹಿಸಲಾರೆನೋ ಈ ವಿರಹವನ್ನ
ನಿನ್ನ ಮನದ ಕನ್ನಡಿಯಲ್ಲಿ
ನನ್ನನ್ನು ಕಾಣುವ ಆಸೆ
ಕನ್ನಡಿಯಲ್ಲಿ ಕಾಡುತಿದೆ ನಿನ್ನಯ ಮೌನ....!

## ಕಾಲೇಜು

ಕಾಲೇಜು ಎಂಬುದು ರಸದೂಟ
ಕಾಲು ಜಾರಿ ಬಿದ್ದರೆ ವಿಷದಾಟ
ಹೊರಗಡೆ ಗೆಳೆಯರ ಕಾಟ
ಕ್ಲಾಸಿನಲ್ಲಿ ಗುರುಗಳ ಪಾಠ
ಫೇಲಾದ್ರೆ ಮನೆಯವರ ಕಾಟ
ಪಾಸ್ ಆದ್ರೆ ಕೆಲಸದ ಹುಡುಕಾಟ
ಇದು ವಿದ್ಯಾರ್ಥಿ ಜೀವನದ ಗೋಳಾಟ

## ಸ್ನೇಹ

ಜೀವನಕ್ಕೆ ಹತ್ತಿರವಾಗುವುದು ತಂದೆ ತಾಯಿ ಮಾತ್ರ
ಬದುಕಿಗೆ ಹತ್ತಿರವಾಗುವುದು ದೇವರು ಮಾತ್ರ
ದುಃಖಕ್ಕೆ ಹತ್ತಿರವಾಗುವುದು ನಿನ್ನಂತೆ ಸ್ನೇಹಿತೆ ಮಾತ್ರ

**ನವ್ಯ ಎನ್.ಬಿ.**
ಬಿ.ಎಸ್ಸಿ. ತೃತೀಯ ವರ್ಷ

## ಹನಿಗವನ

ಬ್ಯಾಂಕಿನಲ್ಲಿ ಕ್ಯಾಶ್ ಕೌಂಟರಿನ ಚೆಲುವೆಯ
ಸೌಂದರ್ಯದತ್ತ ಹರಿದು ನೋಟ
ಗಮನಿಸಲಿಲ್ಲ ಅವಳು ಕೊಟ್ಟ ಹರಿದ ನೋಟ!

## ಪತ್ರೆ

ಶನಿದೇವರಿಗೆ ಶಮೀಪತ್ರೆ
ವಿಷ್ಣುವಿಗೆ ತುಳಸಿಪತ್ರೆ
ಈಶ್ವರನಿಗೆ ಪ್ರಿಯವಂತೆ
ಬಿಲ್ವ ಪತ್ರೆ
ಯಮನಿಗೆ
ಆಸ್–ಪತ್ರೆ

## ಅಧ್ಯಕ್ಷ ಭಾಷಣ

ಅದ್ಭುತವಾಗಿತ್ತು ಅಧ್ಯಕ್ಷರ ಭಾಷಣ
ವಿಷಯ, ಶೈಲಿ, ಭಾಷೆ ಎಲ್ಲವೂ ಚೆನ್ನ
ಆದರೂ ನೋಡಬೇಕಾಗಿತ್ತು, ಒಮ್ಮೆಯಾದರೂ
ತಮ್ಮ ವಾಚನ್ನ!

## ಅಸಾಧ್ಯ

ಆಗಿನಿಂದಲೂ ಗಂಡಸರು ಗೆದ್ದು ಬಂದಿದ್ದಾರೆ
ಮಲ್ಲಯುದ್ಧ, ಮುಷ್ಠಿಯುದ್ಧ
ಆದರೆ,
ಗೆಲ್ಲಲು ಆಗದೇ ಇರುವುದು
ಹೆಣ್ಣಿನ ದೃಷ್ಟಿಯುದ್ಧ!

**ಲತಾಶ್ರೀ ಬಡಿಗೇರ್**
ಬಿ.ಎ. ತೃತೀಯ ವರ್ಷ

# ರೂಪಕ ಸಾಮ್ರಾಜ್ಯ ಚಕ್ರವರ್ತಿ ಕುಮಾರವ್ಯಾಸ

– ಬಿ. ನೀಲಮ್ಮ
ಬಿ.ಎ. ದ್ವಿತೀಯ ಸೆಮಿಸ್ಟರ್

**ಕುಮಾರವ್ಯಾಸನು ಹಾಡಿದನೆಂದರೆ**
**ಕಲಿಯುಗ ದ್ವಾಪರವಾಗುವುದು**
**ಭಾರತ ಕಣ್ಣಲಿ ಕುಣಿಯುವುದು**
**ಮೈಯಲಿ ಮಿಂಚಿನ ಹೊಳೆ ತುಳುಕಾಡುವುದು**

ಇದು ಯುಗದ ಕವಿಯೊಬ್ಬ ಜಗದ ಕವಿಯ ಬಗ್ಗೆ ತೆಗೆದ ಉದ್ಗಾರ! ಕುವೆಂಪುರವರ ಈ ಹೇಳಿಕೆಯಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ. ಕುಮಾರವ್ಯಾಸನ ದೇಶೀ ಶೈಲಿಯಲ್ಲಿ ಅನೇಕ ರೂಪಕಗಳೊಂದಿಗೆ ಸಾಹಿತ್ಯ ರಚನೆಯಲ್ಲಿ ತೊಡಗಿದ ವಿಶೇಷ ಕವಿ.

ವಾಲ್ಮೀಕಿಯ ರಾಮಾಯಣದ ನಂತರ ಅನೇಕ ರಾಮಾಯಣಗಳನ್ನು ಸಂಸ್ಕೃತ ಹಳೆಗನ್ನಡಗಳಲ್ಲಿ ಅನೇಕ ಕವಿಗಳು ಬರೆದರು. ಆದರೆ ಕುಮಾರವ್ಯಾಸನು ಮಹಾಭಾರತವನ್ನೇ ಆಯ್ದುಕೊಂಡನು. ತಾನು ಅದನ್ನು ಆಯ್ದುಕೊಂಡುದಕ್ಕೆ ಕಾರಣವನ್ನೂ ಕುಮಾರವ್ಯಾಸನು ಪೀಠಿಕೆಯಲ್ಲೇ ಹೇಳುತ್ತಾನೆ.

**ತಿಣುಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ**
**ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ**

ಕುಮಾರವ್ಯಾಸ ಭಾರತವೆಂದೇ ಹೆಸರಾದ ಕರ್ಣಾಟ ಭಾರತ ಕಥಾಮಂಜರಿಯು ವಾಸ್ತವದಲ್ಲಿ ಕೃಷ್ಣ ಕಥೆಯೇ. ಇವನು ಭಕ್ತ ಕವಿ. ಶ್ರೀ ಕೃಷ್ಣನು ಅವತಾರವೆತ್ತಿದುದೇ ಮಾನವ ಕಲ್ಯಾಣಕ್ಕಾಗಿ ಎಂಬುದು ಕುಮಾರವ್ಯಾಸನ ಅಚಲ ನಂಬಿಕೆ.

ಕನ್ನಡದ ಅತ್ಯುನ್ನತ ಕವಿಗಳಲ್ಲಿ ಒಬ್ಬ. ಕುಮಾರವ್ಯಾಸನ ಮೂಲ ಹೆಸರು "ನಾರಾಯಣಪ್ಪ" "ಗದುಗಿನ ನಾರಾಯಣಪ್ಪ" ಈತನ ಕಾವ್ಯನಾಮ ಕುಮಾರವ್ಯಾಸ. ವ್ಯಾಸ ಮಹಾಕವಿಯು ಬರೆದ ಸಂಸ್ಕೃತದ ಮಹಾಭಾರತವನ್ನು ಕನ್ನಡದಲ್ಲಿ ರಚಿಸಿದ್ದರಿಂದ, ವ್ಯಾಸ ಮಹಾಕವಿಯ ಮಾನಸಪುತ್ರ ತಾನು ಎಂಬ ಆತ್ಮೀಯ ಭಾವದಿಂದ ನಾರಾಣಪ್ಪನು ಕುಮಾರವ್ಯಾಸನಾಗಿದ್ದಾನೆ. ಕುಮಾರವ್ಯಾಸನು ಗದುಗಿನ ವೀರನಾರಾಯಣ ದೇಗುಲದಲ್ಲಿನ ಒಂದು ಕಂಬದ ಅಡಿಯಲ್ಲೇ ಕುಳಿತು ಈ ಮಹಾಭಾರತವನ್ನು ರಚಿಸಿದನಂತೆ. ಅಷ್ಟೇ ಅಲ್ಲದೆ, ಈಗಲೂ ಅದೇ ದೇವಸ್ಥಾನದ ಆವರಣದಲ್ಲಿ ಇರುವ ಬಾವಿಯಲ್ಲಿ ಸ್ನಾನ ಮಾಡಿ, ಒದ್ದೆ ಪಂಚೆಯಲ್ಲಿಯೇ ಬಂದು ರಚಿಸಿದನೆಂದೂ ಹೇಳುತ್ತಾರೆ. ಆ ಒದ್ದೆ ಆರುವವರೆಗೂ ಅವನಿಗೆ ಭಾರತವನ್ನು ರಚಿಸುವುದಕ್ಕೆ ನಿರರ್ಗಳ ಸ್ಫೂರ್ತಿ ಹೊಮ್ಮುತ್ತಿತ್ತಂತೆ.

ಕುಮಾರವ್ಯಾಸನ ಕಾಲವು ಸುಮಾರು 15ನೆಯ ಶತಮಾನ. "ಪ್ರಭುಲಿಂಗಲೀಲೆ" ಬರೆದ ಚಾಮರಸನ ತಂಗಿಯ ಗಂಡನೆಂದೂ, ಇದರ ಪ್ರಕಾರ ಇವನ ಕಾಲ ಸುಮಾರು 1439 ಆಗುತ್ತದೆಂದು ಕವಿಚರಿತಕಾರರು ಅಭಿಪ್ರಾಯಪಟ್ಟಿದ್ದಾರೆ. ಆದ್ದರಿಂದ ಕುಮಾರವ್ಯಾಸನ ಕಾಲವನ್ನು ಕ್ರಿ.ಶ. 1350–1400 ಎಂದು ವಿದ್ವಾಂಸರು ನಿರ್ಣಯಿಸಿರುತ್ತಾರೆ.

ಇವನು ಹುಟ್ಟಿದ್ದು ಗದುಗಿನ ಕೋಳಿವಾಡವೆಂಬ ಗ್ರಾಮವೆಂದೂ ಅವನ ವಂಶಸ್ಥರು ಈಗಲೂ ಅಲ್ಲಿ ವಾಸಿಸುತ್ತಾರೆಂದೂ ಹೇಳಲಾಗಿದೆ. ಒಟ್ಟಿನಲ್ಲಿ ಕವಿ ನಾರಾಯಣಪ್ಪ ಕೋಳಿವಾಡದ ಶಾನುಭೋಗ. "ಗದುಗಿನ ವೀರನಾರಾಯಣ" ಇವನ ಆರಾಧ್ಯದೈವ.

ಕನ್ನಡ ಸಾಹಿತ್ಯದಲ್ಲಿ ಮೇರು ಕೃತಿಯಾಗಿ ಪರಿಗಣಿತವಾಗಿರುವ ಈ ಕನ್ನಡ ಭಾರತವು ಸಂಸ್ಕೃತ ಮಹಾಭಾರತದ ಮೊದಲ ಹತ್ತು 10 ಪರ್ವಗಳು, 147 ಸಂಧಿ, 7971 ಪದ್ಯಗಳನ್ನು ಒಳಗೊಂಡಿದೆ. ತಿದ್ದುಪಡಿ 152 ಸಂಧಿಗಳು, 8244 ಪದ್ಯಗಳು, ಕುಮಾರವ್ಯಾಸ ಭಾರತದ ಭಾಷೆ ನಡುಗನ್ನಡ. ಕುಮಾರವ್ಯಾಸ ಭಾರತ–ಆದಿಪರ್ವ.

ಸಂಪೂರ್ಣ ಕಾವ್ಯವು ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿದ್ದು ಕುಮಾರವ್ಯಾಸನ ಕಾವ್ಯ ಪ್ರತಿಭೆ ಓದುಗರನ್ನು ದಂಗಬಡಿಸುತ್ತದೆ. ಅವನ ಕಾವ್ಯ ಪ್ರತಿಭೆ ಪೂರ್ಣಶಕ್ತಿಯಲ್ಲಿ ಹೊರಹೊಮ್ಮುವುದು ಅವನ

ರೂಪಕಗಳಲ್ಲಿ. ಕುಮಾರವ್ಯಾಸನ ರೂಪಕಗಳ ವೈವಿಧ್ಯತೆ ಮತ್ತು ಆಳ ಅಪಾರವಾದದ್ದು. ಇದೇ ಕಾರಣಕ್ಕಾಗಿ ಕುಮಾರವ್ಯಾಸನ ಹೆಸರು "ರೂಪಕ ಸಾಮ್ರಾಜ್ಯ ಚಕ್ರವರ್ತಿ" ಎಂದೇ ಖ್ಯಾತಿ ಪಡೆದಿದೆ.

**"ಬವರವಾದರೆ ಹರನ ವದನಕೆ ಬೆವರ ತಹೆನು"**
**"ನರಶರದ ಬುಂಬುಪೊಳೆಯಲಿ ಜಾರುವನೆ ಜಾಹ್ನವೀಧರ"**
**"ಜವನ ಮೀಸೆಯ ಮುರಿದನೋ"**
**"ಅರಿವಿನ ಸೆರಗು ಹೌರಿತು" ಇವೇ ಮೊದಲಾದವು ಅವನ ಶಕ್ತಿಶಾಲಿ ರೂಪಕಗಳಿಗೆ ಉದಾಹರಣೆಗಳು.**

ರೂಪಕಗಳೊಂದಿಗೆ ಕುಮಾರವ್ಯಾಸನ ಇನ್ನೊಂದು ಸಾಮರ್ಥ್ಯ ಮಾನವ ಪ್ರಕೃತಿಯ ವರ್ಣನೆ. ಕುಮಾರವ್ಯಾಸನ ಪಾತ್ರಗಳು ಕಣ್ಣಿಗೆ ಕಟ್ಟುವಷ್ಟು ಸ್ಪಷ್ಟ. ಶ್ರೀ ಕೃಷ್ಣನ ವರ್ಣನೆ ಅವನ ಕಾವ್ಯ ರಚನೆಯ ಮೂಲೋದ್ದೇಶಗಳಲ್ಲಿ ಒಂದು. ಅವನ ಮಹಾಭಾರತ ಕಥೆ ಕೃಷ್ಣನ ಸುತ್ತಲೂ ಸುತ್ತುತ್ತದೆ. ಕುಮಾರವ್ಯಾಸ ಕೃಷ್ಣನ ಭಕ್ತ. ಮಹಾಭಾರತದ 18 ಪರ್ವಗಳಲ್ಲಿ 10 ಪರ್ವದವರೆಗೆ. ಬರೆದು ದುರ್ಯೋಧನನ ಅವಸಾನದ ನಂತರ, ಕುಮಾರವ್ಯಾಸನು ಮುಂದೆ ಸಂಕ್ಷಿಪ್ತವಾಗಿ, ಶ್ರೀ ಕೃಷ್ಣನು ಧರ್ಮರಾಜನಿಗೆ ಪಟ್ಟಾಭಿಷೇಕವನ್ನು ಮಾಡಿಸಿ ದ್ವಾರಕೆಗೆ ಹಿಂದಿರುಗುವವರೆಗೆ ಬರೆದಿದ್ದಾನೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಕುಮಾರವ್ಯಾಸನು ಕನ್ನಡ ಸಾಹಿತ್ಯದ ಮೇರುಕವಿ, ಕಾಳಿದಾಸನ ಸಮಸಮಕ್ಕೆ ನಿಲ್ಲುವ ಕವಿ ಎಂದೇ ಹೇಳಬಹುದು.

## ತಂದೆ–ತಾಯಿ

ವಿದ್ಯೆಯಲ್ಲಿ ಜ್ಞಾನಾರ್ಜನೆ ಮೂಡಿಸಿ
ಸಮಯದ ಪರಿಕಲ್ಪನೆ ಮೂಡಿಸಿ
ಕಲಿಕೆಯಲ್ಲಿ ಅರಿವನ್ನು ಮೂಡಿಸಿ
ಜೀವನದಲ್ಲಿ ಸನ್ಮಾರ್ಗವನ್ನು ತೋರಿಸಿ
ನಿಸ್ವಾರ್ಥ ಪ್ರೀತಿಯ ರೂವಾರಿ
ಭವಿಷ್ಯವನ್ನು ನಿರೂಪಿಸುವ ದೇವರು
ನನ್ನ ಮೊದಲ ಸ್ಥಾನ ತಂದೆ–ತಾಯಿಗೆ

ಅರಿತು ಬಾಳಬೇಕು
ತಿಳಿದು ಬದುಕಬೇಕು
ಅರಿಯದೇ, ತಿಳಿಯದೇ
ಜೀವನ ಸಾಗಿಸಬಾರದು
ಅರಿತು ರೂಪಿಸಿಕೊಂಡು
ಬದುಕಿನ ತಾತ್ಪರ್ಯತೆ ತಿಳಿಯಬೇಕು

**– ಎಚ್.ಎಂ. ಸುಮಾ**
ತೃತೀಯ ಬಿ.ಎ.

# ಯುವ ಪೀಳಿಗೆಗೆ ಒಂದು ಪ್ರಶ್ನೆ....
# ಜ್ಯೋತಿಷ್ಯ ಅರ್ಥಪೂರ್ಣವೋ ಅರ್ಥರಹಿತವೋ?

– ಮಂಜುಳ ಮಳೆಯಪ್ಪನವರ
ತಳಕಲ್ಲು, ಬಿ.ಎ. 4ನೇ ಸೆಮಿಸ್ಟರ್

ಸಾಮಾನ್ಯವಾಗಿ ಜ್ಯೋತಿಷ್ಯಶಾಸ್ತ್ರವನ್ನು ಅನಾದಿ ಕಾಲದಿಂದಲೂ ಕಾಣುತ್ತಾ ಬಂದಿದ್ದೇವೆ. ಹಾಗಾದರೆ ಏನಿದು ಜ್ಯೋತಿಷ್ಯಶಾಸ್ತ್ರ? ಎಂಬುದನ್ನು ನೋಡುವುದಾದರೆ ಜ್ಯೋತಿಷ್ಯವು ರಾಹುಕಾಲ, ಗುಳಿಕಕಾಲ ಮತ್ತು ಯಮಗಂಡಕಾಲ ಈ ಮೂರು ಹಂತದ ಅಡಿಪಾಯವನ್ನು ಹೊಂದಿದೆ. ಹಾಗಾದರೆ ಯುವ ಪೀಳಿಗೆ ತಾರ್ಕಿಕವಾಗಿ ಯೋಚಿಸಬೇಕಾಗಿರುವುದು ಏನೆಂದರೆ ರಾಹು, ಕೇತುಗಳು ಅಸ್ತಿತ್ವದಲ್ಲೇ ಇಲ್ಲದಿರುವಾಗ ರಾಹುಕಾಲ, ಗುಳಿಕಕಾಲ, ಯಮಗಂಡ ಕಾಲಗಳೇಕೆ? ಸಹಜವಾಗಿ ಅವುಗಳಿಗೆ ಯಾವುದೇ ಅರ್ಥವಿರುವುದಿಲ್ಲ.

21ನೇ ಶತಮಾನ ಯುವಪೀಳಿಗೆಯಲ್ಲಿ ಒಬ್ಬಳಾದ ನನ್ನ ಪ್ರಕಾರ ವೈಜ್ಞಾನಿಕವಾಗಿ ಆಲೋಚಿಸುವ "ನನ್ನ ದೃಷ್ಟಿಕೋನದ ಪ್ರಕಾರ ಜ್ಯೋತಿಷ್ಯಶಾಸ್ತ್ರವು ಅರ್ಥರಹಿತವಾದದ್ದು".

ಬುದ್ಧನು ಒಂದು ಕಡೆ ಹೇಳುತ್ತಾ ಹೋಗುತ್ತಾನೆ. ನಕ್ಷತ್ರಗಳ ಲೆಕ್ಕಾಚಾರದಂತಹ ತಂತ್ರಗಳಿಂದ ಯಾರು ಜೀವನ ನಡೆಸುತ್ತಾರೋ ಅವರಿಂದ ದೂರವಿರಬೇಕು ಎಂದು ಎಚ್ಚರಿಸುತ್ತಾನೆ.

ನಕ್ಷತ್ರ ವೀಕ್ಷಣೆ ಮತ್ತು ಜ್ಯೋತಿಷ್ಯ ಶಾಸನಗಳ ಆಧಾರದಿಂದ ಶುಭ ಅಥವಾ ಅಶುಭವನ್ನು ತಿಳಿಸುವುದು. ಒಳಿತು ಕೆಡುಕುಗಳ ಬಗ್ಗೆ ಭವಿಷ್ಯ ನುಡಿಯುವುದು ಇಂತಹ ಸಂಗತಿಗಳಿಂದ ದೂರವಿರಬೇಕು. ಆಗ ಮನಸ್ಸು ಕೂಡ ಶಾಂತವಾಗಿರುತ್ತದೆ.

**ಹಾಗಾದರೆ ಜ್ಯೋತಿಷ್ಯ ವಿಜ್ಞಾನವಾಗಬಹುದೇ?**

ನನ್ನ ಅಭಿಪ್ರಾಯದ ಪ್ರಕಾರ ಖಂಡಿತವಾಗಿಯು ಸಾಧ್ಯವಿಲ್ಲ! ಜ್ಯೋತಿಷ್ಯವು ವಿಜ್ಞಾನವಾಗಬೇಕಾದರೆ ಆಧಾರ ಸಾಕ್ಷಿ, ಪ್ರಯೋಗ ತರ್ಕಗಳ ಯುದ್ಧದಲ್ಲಿ ಗೆದ್ದು ಬರಬೇಕಾಗುತ್ತದೆ. ಹಾಗಾದರೆ ಮಾತ್ರ ಯುವ ಜನಾಂಗ ಒಪ್ಪಿಕೊಳ್ಳಬಹುದು. ಆದರೆ ಅದು ಜ್ಯೋತಿಷ್ಯಶಾಸ್ತ್ರದಿಂದ ಸಾಧ್ಯವಿಲ್ಲವೆಂಬುದು ಸ್ಪಷ್ಟ. ಏಕೆಂದರೆ ಜ್ಯೋತಿಷ್ಯವು ಸೂರ್ಯ, ಚಂದ್ರ, ರಾಹುಕೇತುಗಳನ್ನು ಗ್ರಹಗಳೆಂದು ಉಲ್ಲೇಖಿಸಿದೆ. ಆದರೆ ವಿಜ್ಞಾನದ ಪ್ರಕಾರ ಸೂರ್ಯ ಒಂದು ನಕ್ಷತ್ರ, ಚಂದ್ರ ಒಂದು ಉಪಗ್ರಹ ರಾಹುಕೇತುಗಳ ಉಲ್ಲೇಖವಂತು ವಿಜ್ಞಾನದಲ್ಲಿ ಇಲ್ಲವೇ ಇಲ್ಲ. ಆದ್ದರಿಂದ ಜ್ಯೋತಿಷ್ಯವು ವಿಜ್ಞಾನವಾಗಲಾರದು.

ಯುವ ಪೀಳಿಗೆಯ ಸ್ಫೂರ್ತಿಯ ನಾಯಕರಾದ ಸ್ವಾಮಿ ವಿವೇಕನಂದರು ಈ ಜ್ಯೋತಿಷ್ಯಶಾಸ್ತ್ರದ ಬಗ್ಗೆ ಕಟುವಾದ ಅಭಿಪ್ರಾಯಪಡುತ್ತಾರೆ. ನಕ್ಷತ್ರಗಳ ಪ್ರಭಾವ ನನ್ನ ಮೇಲೆ ಆಗುವುದಾದರೆ ಆಗಲಿ ಅದು ನನ್ನ ಜೀವನದ ಮೇಲೆ ಪ್ರಭಾವ ಬೀರಿದರೆ ಅದಕ್ಕೆ ಯಾವ ಬೆಲೆ ಇರುವುದಿಲ್ಲ. ಜ್ಯೋತಿಷ್ಯ ಮತ್ತಿತರ ಅಸ್ಪಷ್ಟ ಸಂಗತಿಗಳು ಸಾಮಾನ್ಯವಾಗಿ ದುರ್ಬಲ ಮನಸ್ಸಿನ ಗುರುತುಗಳು ಇಂತಹ ಸಂಗತಿಗಳು ನಿಮ್ಮ ಜೀವನದಲ್ಲಿ ಪ್ರಾಮುಖ್ಯತೆ ಪಡೆದುಕೊಂಡಾಗ ವೈದ್ಯರನ್ನು ಕಂಡು ಉತ್ತಮ ಸಲಹೆ ಪಡೆದುಕೊಳ್ಳುವುದು ಉತ್ತಮ. ಇದನ್ನು ವಿವೇಕಾನಂದರು ಸಹ ಹೇಳಿದ್ದಾರೆ.

ಹಾಗಾದರೆ ಇಷ್ಟೆಲ್ಲಾ ತಿಳಿದುಕೊಂಡ ನಮ್ಮ ಕೆಲಸವೇನು? ಯುವ ಜನಾಂಗವಾದ ನಾವು ವೈಜ್ಞಾನಿಕ ಮನೋಭಾವವುಳ್ಳ ಎಲ್ಲರೂ 21ನೇ ಶತಮಾನ ವೈಜ್ಞಾನಿಕ ಜಗತ್ತಿನಲ್ಲಿರುವವರು ಜ್ಯೋತಿಷ್ಯಗಳಂತಹ ಮೂಢನಂಬಿಕೆಯಿಂದ ಸಮಾಜವನ್ನು ಸುಧಾರಣೆ ಮಾಡಬೇಕಾಗಿದೆ.

ಜೀವನದಲ್ಲಿ ಎಲ್ಲವೂ ಪೂರ್ವನಿರ್ಧರಿತವೆಂದು ಜ್ಯೋತಿಷ್ಯಶಾಸ್ತ್ರ ತಿಳಿಸುತ್ತದೆ. ಇದು ಎಷ್ಟರಮಟ್ಟಿಗೆ ನಂಬಬಹುದಾದ ಸಂಗತಿ? ಜ್ಯೋತಿಷ್ಯಗಳು ಎಂದಿಗೂ ನಿಖರವಾದ ಭವಿಷ್ಯ ಹೇಳುವುದಿಲ್ಲ ಉದಾಹರಣೆಗೆ : ಒಬ್ಬ ವ್ಯಕ್ತಿಗೆ ಈ ವರ್ಷ ಸರ್ಕಾರಿ ಕೆಲಸಕ್ಕೆ ಪ್ರಯತ್ನಪಟ್ಟರೆ ಸಿಗಬಹುದೆಂದು ಹೇಳುತ್ತಾನೆ. ಸಿಕ್ಕರೆ ನಾನು ಹೇಳಿರಲಿಲ್ಲವೇ ಸಿಗುತ್ತದೆ ಎಂದು ಹೆಮ್ಮೆಯಿಂದ ಹೇಳುತ್ತಾನೆ. ಸಿಗದಿದ್ದರೆ ನಾನು ಹೇಳಿದನೆಲ್ಲಾ ಪ್ರಯತ್ನಪಡಬೇಕೆಂದು, ನೀವು ಪ್ರಯತ್ನಪಟ್ಟಿಲ್ಲವೆಂದು ಸಮರ್ಥನೆ ಮಾಡಿಕೊಳ್ಳುತ್ತಾನೆ. ಅವರ ಮಾತುಗಳು "ಅಡ್ಡಗೋಡೆಯ ಮೇಲೆ

ದೀಪವಿಟ್ಟಂತಿರುತ್ತವೆ" ಆದ್ದರಿಂದ ಇಂತಹ ಮೂಢ ನಂಬಿಕೆಗಳ ಬಗ್ಗೆ ವಿದ್ಯಾವಂತರಾದ ನಾವು ಸಾಮಾನ್ಯ ಜನರಲ್ಲಿ ಜಾಗೃತಿ ಮೂಡಿಸಬೇಕಾಗಿದೆ.

ಸಮಾಜ ಸುಧಾರಣೆಯೇ ಶಿಕ್ಷಣದ ಮೂಲ ಉದ್ದೇಶವಾಗಬೇಕು. ಸಮಾಜ ಅಭಿವೃದ್ಧಿಯ ಪಥದಲ್ಲಿ ಸಾಗಬೇಕಾದರೆ ಉತ್ತಮವಾದ ವೈಜ್ಞಾನಿಕ ಮನೋಭಾವನೆಯನ್ನು ಯುವ ಜನಾಂಗ ರೂಢಿಸಿಕೊಂಡು ಇತರೆ ಸಾಮಾನ್ಯ ಜನರಿಗೂ ಸಹ ಅರಿವು ಮೂಡಿಸಬೇಕಾಗಿದೆ.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳಾಗಿರುವುದರಿಂದ ಅವರಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಬೇಕು. ಅವರಲ್ಲಿ ಪಾರದರ್ಶಕತೆ ಬೆಳೆಸಬೇಕು. ನನ್ನ ಮಾತಿನಲ್ಲಿ ಹೇಳುವುದಾದರೆ.... ಪ್ರಶ್ನಿಸದೆ, ಪರಿಶೀಲಿಸದೆ ಯಾವುದನ್ನು ಒಪ್ಪಿಕೊಳ್ಳಬಾರದು. ಇಂತಹ ಮನೋಭಾವನೆ ಯುವ ಪೀಳಿಗೆಯಲ್ಲಿ ಬಂದಾಗ ಮಾತ್ರ ಸಮಾಜ ಅಭಿವೃದ್ಧಿ ಸಾಧ್ಯ.

ಮೌಢ್ಯತೆ ಜೀವರು ಮಿಂದು
ಬುದ್ಧಿ ಘಮ್ಮೆನ್ನುತ್ತಿದೆ
ಮೌಢ್ಯತೆ ಬೆತ್ತಲಾದರೂ
ಮೂಢಾಚರಣೆ ನಿಲ್ಲುತ್ತಿಲ್ಲ....!

## ವಿಜ್ಞಾನ ತ್ಯಾಗ!

ಜಗದೀಶ್ ಚಂದ್ರಬೋಸ್ ಅವರು ಇಂಗ್ಲೆಂಡಿನಲ್ಲಿ ಗಿಡಗಳ ಬಗೆಗೆ ಸಂಶೋಧನೆ ನಡೆಸುತ್ತಿದ್ದರು. ಗಿಡಗಳಿಗೂ ನಮಗಿದ್ದಂತೆಯೇ ಸುಖ, ದುಃಖ ಅನುಭವವಾಗುತ್ತದೆ ಎಂದು ನಿರೂಪಿಸಲು ಅವರು ಪ್ರಯತ್ನಿಸುತ್ತಿದ್ದರು. ಮನುಷ್ಯ ವಿಷದಿಂದ ಮುದುಡಿ ಹೋಗುವಂತೆ ಗಿಡಗಳು ಸಹ ಮುದುಡಿ ಹೋಗುತ್ತವೆ ಎಂದರು. ಇದನ್ನು ಸ್ಪಷ್ಟಪಡಿಸಲು ಹಲವಾರು ಮಂದಿಯ ಎದುರಿನಲ್ಲಿ ಪರಿಶೋಧನೆಗಾಗಿ ಇರಿಸಿದ್ದ ಗಿಡಕ್ಕೆ ಸೂಜಿಯ ಮೂಲಕ ವಿಷವನ್ನು ಚುಚ್ಚಿದರು. ಆದರೆ ಆ ಗಿಡದಲ್ಲಿ ಯಾವ ರೀತಿಯ ಬದಲಾವಣೆಯೂ ಆಗಲಿಲ್ಲ! ಜಗದೀಶ್ ಚಂದ್ರರನ್ನು ಇಷ್ಟಪಡದವರು, ಅವರ ಮೇಲೆ ಅಸೂಯೆಯುಳ್ಳವರು ಒಳಗೊಳಗೇ ಸಂತೋಷಪಟ್ಟರು.

ಪರಸ್ಪರ ಒಬ್ಬರೊನ್ನೊಬ್ಬರು ನೋಡಿಕೊಳ್ಳುತ್ತಾ ಕಣ್ಣುಗಳ ಮೂಲಕವೇ ಮಾತನಾಡಿಕೊಳ್ಳುತ್ತಿದ್ದರು. ಅಲ್ಲಿ ಸೇರಿದ್ದ ಜನರೂ ತಮ್ಮಲ್ಲಿಯೇ ಗುಸುಗುಟ್ಟಲು ಪ್ರಾರಂಭಿಸಿದರು. ಆಗ ಎಲ್ಲರಿಗೂ ಜಗದೀಶರ ಗಂಭೀರವಾದ ಸ್ವರ ಕೇಳಿಸಿತು. 'ಈ ವಿಷದಿಂದ ಗಿಡಕ್ಕೆ ಏನೂ ಆಗಲಿಲ್ಲವೆಂದರೆ ನನ್ನ ದೇಹದಲ್ಲಿಯೂ ಯಾವ ಬದಲಾವಣೆಯೂ ಆಗುವುದಿಲ್ಲ!' ಎಂದು ಹೇಳುತ್ತಾ ಜನರೆಲ್ಲರೂ ನೋಡುತ್ತಿದ್ದಂತೆಯೇ ಜಗದೀಶ್ ಚಂದ್ರರು ಉಳಿದಿದ್ದ ವಿಷವನ್ನು ತಾವೇ ಕುಡಿದು ಬಿಟ್ಟರು. ಅಲ್ಲಿದ್ದ ಜನರ ಮಧ್ಯೆ ಗಲಿಬಿಲಿಯಾಯಿತು. ಆ ಗುಂಪಿನಿಂದ ಒಬ್ಬ ವ್ಯಕ್ತಿ ಜಗದೀಶ್ ಚಂದ್ರರ ಬಳಿಗೆ ಬಂದು, "ಸ್ವಾಮಿ, ನೀವು ಗೆದ್ದಿದ್ದೀರಿ. ನಿಮ್ಮನ್ನು ಅವಮಾನಪಡಿಸಬೇಕೆಂದು ವಿಷಕ್ಕೆ ಬದಲಾಗಿ ಅದೇ ಬಣ್ಣದ ನೀರನ್ನು ಅಲ್ಲಿ ಇಡಲಾಗಿತ್ತು!" ಎಂದನು. ಅನಂತರ ನಿಜವಾದ ವಿಷವನ್ನು ಕೊಟ್ಟು ಪರಿಶೋಧನೆ ನಡೆಸಲಾಯಿತು. ಗಿಡವು ಸ್ವಲ್ಪಸ್ವಲ್ಪವಾಗಿ ಬಾಡುತ್ತಾ ಬಂತು! ಪ್ರಸಿದ್ಧ ವಿಜ್ಞಾನಿ 'ಅಲ್ಬರ್ಟ್ ಐನ್‌ಸ್ಟೀನ್' ಅವರು ಜಗದೀಶರ ಸಂಶೋಧನೆಯ ಬಗೆಗೆ ಸಂತೋಷಗೊಂಡು, 'ಜಗದೀಶ್ ಚಂದ್ರಬೋಸ್ ಅವರು ಅಮೂಲ್ಯವಾದ ಹಲವಾರು ಸಂಶೋಧನಾ ಫಲಿತಾಂಶಗಳನ್ನು ಪ್ರಪಂಚಕ್ಕೆ ನೀಡಿದ್ದಾರೆ. ಅವುಗಳಲ್ಲಿ ಪ್ರತಿಯೊಂದಕ್ಕೂ ವಿಜಯಸ್ತಂಭವನ್ನು ನೆಡಬೇಕು!' ಎಂದರು.

(ಸಂಗ್ರಹ : ಡಾ. ವಿ. ಗೋಪಾಲಕೃಷ್ಣರವರ ಉತ್ತಮ ಬಾಳುವೆಗೆ ಮಹಾನ್ ವ್ಯಕ್ತಿಗಳ ಜೀವನಾದರ್ಶ ಪುಸ್ತಕದಿಂದ)

# ಮನುಷ್ಯತ್ವ

– ಹೆಚ್.ಎಂ. ಸುಮ
ಬಿ.ಎ. 3ನೇ ಸೆಮಿಸ್ಟರ್

ಮನುಷ್ಯತ್ವವೆಂಬುದು ಮಾನವನು ಅಳವಡಿಸಿಕೊಳ್ಳಬೇಕಾದ ಜೀವನದ ವಿಷಯ. ಮೊದಲು ಮಾನವನಾಗುವ ಮೊದಲು ಮನುಷ್ಯತ್ವ ತುಂಬಿದ ಮನುಜನಾದಾಗ ಮಾತ್ರ ಮಾನವನ ಅಸ್ತಿತ್ವಕ್ಕೆ ಬೆಲೆಯಿದೆ. ಅದಕ್ಕೆ ಸಾಕ್ಷಿಯಾಗಿ ಎರಡು ಹೆಣಗಳ ಸಂಭಾಷಣೆಯ ಸಾಕ್ಷಿಯಾಗಿದೆ ಎನ್ನಬಹುದು.

ಒಬ್ಬ ಮಾನವನು ಬಡವನಾಗಿದ್ದರು ಮೊದಲು ಮಾನವೀಯತೆಯ ಮೌಲ್ಯವನ್ನು ಅಳವಡಿಸಿಕೊಂಡು ಬದುಕಿನ ನಾಲ್ಕು ದಿನದ ಸಂತೆಯಲ್ಲಿ ಸಾಗಬೇಕು ಎಂಬ ಲೀಲೆಯನ್ನು ಅರಿತಿದ್ದ ಒಬ್ಬ ರೈತ ವ್ಯಾಪಾರಿಯು ಪ್ರೀತಿ ವಿಶ್ವಾಸ, ನಂಬಿಕೆ, ಪ್ರಾಮಾಣಿಕತೆ, ನಿಷ್ಠಾವಂತ ವ್ಯಕ್ತಿಯಾಗಿ ಸಮಾಜದಲ್ಲಿ ಮಾನವೀಯ ಮೌಲ್ಯಗಳು ರೂಪಗೊಂಡು ವ್ಯಕ್ತಿತ್ವ ವಿಕಸನವಾಯಿತು.

ಇನ್ನೊಬ್ಬ ಶ್ರೀಮಂತ ವ್ಯಾಪಾರಿಯು ತನ್ನಲ್ಲಿ ಇರುವ ಮೌಲ್ಯಗಳನ್ನು ಅಲ್ಪಮತೀಯವನಂತೆ 'ಶ್ರೀಮಂತಿಕೆ' ಎಂಬ ದರ್ಪಿಷ್ಟನಾಗಿ ವ್ಯಕ್ತಿತ್ವ ರೂಪುಗೊಂಡಿತು. ನಾನು, ನನ್ನದು ಎನ್ನುವ ಅಹಂಕಾರ ತುಂಬಿದ ಪ್ರವೃತ್ತಿಯು ಅವನನ್ನು ಸಮಾಜದಲ್ಲಿ ವೈರಿಯಂತೆ ಕಾಣಿಸತೊಡಗಿತು.

ಅಂದರೆ ರೈತ ವ್ಯಾಪಾರಿ ಮತ್ತು ಶ್ರೀಮಂತಿಕೆ ವ್ಯಾಪಾರಿಯು ಒಂದು ದಿನ ಮರಣದ ದಿನಗಳು ಹತ್ತಿರ ಬಂದಿತು. ಮಾನವೀಯತೆ ತುಂಬಿದ ರೈತನ ಹೆಣವು ಸನ್ಮಾರ್ಗದಲ್ಲಿ, ಗೌರವ ಘನತೆಯಿಂದ ಸ್ಮಶಾನವನ್ನು ಸೇರಿತು. ಆದರೆ ಶ್ರೀಮಂತ ವ್ಯಾಪಾರಿಯ ಹೆಣವು ಬೀದಿಯಲ್ಲಿ ಬಿದ್ದ ಬೀದಿನಾಯಿಯಂತೆ ಯಾರೋ ಒಂದು ಸ್ಮಶಾನದ ಕಡೆಗೆ ಎಸೆದು ಹೋದರು. ಸ್ಮಶಾನದಲ್ಲಿ ಅಳುತ್ತಿದ್ದ ಶ್ರೀಮಂತ ಹೆಣವು ತಾನು ಮಾಡಿದ ಪಾಪಕೃತ್ಯಗಳನ್ನು ನೆನೆಸಿಕೊಂಡು ಪ್ರಾಯಶ್ಚಿತ್ತಪಟ್ಟಿತು. ಅದನ್ನು ನೋಡಿದ ರೈತ ವ್ಯಾಪಾರಿಯು 'ಏ ಮನುಜ' ಏಕೆ? ಅಳುತ್ತಿರುವೆ? ಆಗ ಶ್ರೀಮಂತ ಹೆಣವು ನನ್ನನ್ನು ಬೀದಿಗೆ ಬಿಸಾಡಿದರು ಎಂದಿತು.

ರೈತ ವ್ಯಾಪಾರಿಯ ಹೆಣವು ಶ್ರೀಮಂತಿಕೆಯ ಹೆಣಕ್ಕೆ ಹೇಳಿತು. ಯಾವ ವ್ಯಕ್ತಿಯು ಹುಟ್ಟುತ್ತಲೇ ಶ್ರೀಮಂತರು, ಗುಣವಂತರು, ನಿಷ್ಠವಂತನೂ ಆಗಿರುವುದಿಲ್ಲ. ಆದರೆ, ಭೂಮಿಗೆ ಬಂದ ನಂತರ ಸಮಾಜವು ನಮ್ಮನ್ನು ವ್ಯಕ್ತಿತ್ವ ರೂಪಿಸುತ್ತದೆ. ಆದರೆ ಸಮಾಜದಲ್ಲಿ ಮಾನವೀಯ ಅಂಶಗಳನ್ನು ರೂಪಿಸಿಕೊಳ್ಳದೇ ನಾವೇ 'ಅಹಂ' ಪ್ರವೃತ್ತಿಯ ಕಡೆಗೆ ಹೋಗಿ ಮನುಜತ್ವವನ್ನು ಕಳೆದುಕೊಳ್ಳುತ್ತವೆ. ಸಂಬಂಧಗಳಿಗೆ ಬೆಲೆಕೊಡದೆ ಹಣದಿಂದಲೇ ದರ್ಪವನ್ನು ತೋರಿಸಿ, ಸಮಾಜದಲ್ಲಿ ಕೆಟ್ಟ ವ್ಯಕ್ತಿಂಠಾಗಿ ಹೊರಹೊಮ್ಮುತ್ತೇವೆ. ಆದರೆ ತಿಳಿದುಕೊಳ್ಳಬೇಕಾದ ವಿಷಯವೆಂದರೆ, ಎಲ್ಲಾ ಇದ್ದಾಗ ಬಳಸಿಕೊಂಡು ಅರ್ಧ ದಾರಿಯಲ್ಲೇ ಪಯಣಿಸುವರನ್ನು ನೂರು ಜನರನ್ನು ಗಳಿಸುವುದಕ್ಕಿಂತ, ತಮ್ಮ ಅಸ್ತಿತ್ವವೇ ನಮಗೆ ತಿಳಿಯದೇ ಇದ್ದಾಗ ಜೊತೆಗೆ ಹೆಜ್ಜೆ ಹಾಕುವವರನ್ನು, ನಾಲ್ಕು ಜನ ನಂಬಿಕೆ ನಿಷ್ಠಾವಂತ ಜನರನ್ನು ಗಳಿಸಬೇಕು. ಇದಷ್ಟೇ ಜೀವನದ ಗುಟ್ಟು, ಹುಟ್ಟುವಾಗ ಏನನ್ನು ತರಲಿಲ್ಲ, ಸಾಯುವಾಗ ಏನನ್ನು ಒಯ್ಯುವುದಿಲ್ಲ. ಬರುವುದೊಂದೇ ಗೌರವ, ಘನತೆ ಅದೇ ಮಾನವನು ಅಪೇಕ್ಷಿಸಬೇಕು.

ನಾಲ್ಕು ಜನರ ಬಾಯಲ್ಲಿ ನಲಿದಾಡಿ ನೂರಾರು ವರ್ಷ ನೆನೆಸಿಕೊಳ್ಳುವಂತೆ, ಪರರಿಗೆ ನಾವು ಆದರ್ಶವಾಗಿ, ತಂದೆ–ತಾಯಿಗೆ ಒಳ್ಳೆಯ ಮಕ್ಕಳಾಗಿ ನಮ್ಮ ಕರ್ತವ್ಯ ಪರಿಪಾಲನೆ ಮಾಡಿದಾಗ ಮಾತ್ರ ಸಮಾಜದಲ್ಲಿ ತಮ್ಮ ವ್ಯಕ್ತಿತ್ವವು ಅಜರಾಮರವಾಗಿರುತ್ತದೆ. ಮಾನವನು ಮೊದಲು ಮನುಷ್ಯತ್ವ ತುಂಬಿದ ವ್ಯಕ್ತಿತ್ವವು ವ್ಯಕ್ತಿಯನ್ನು ಹಾಳಾಗಲು ಬಿಡುವುದಿಲ್ಲ ಎಂದು ರೈತ ಹೆಣವು ಶ್ರೀಮಂತ ಹೆಣಕ್ಕೆ ಹೇಳಿತಂತೆ. ಶ್ರೀಮಂತ ಹೆಣವು ರೈತನ ಹೆಣವನ್ನು ನೋಡಿ 'ಅಣ್ಣಾ' ಎಂದು ಓಡಿ ಬಂದು ಅಪ್ಪಿಕೊಂಡಿತು. ಅಂದರೆ ರೈತನು ದುಡಿದು ತನ್ನ ತಮ್ಮನನ್ನು ಓದಿಸಿದ್ದರಿಂದ ತಮ್ಮನು ಉದ್ಯೋಗವನ್ನು ತೆಗೆದುಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಯಾದವನೇ ಹೊರತು, ಮಾನವೀಯತೆ ವ್ಯಕ್ತಿಯಾಗಲಿಲ್ಲ. ಶ್ರೀಮಂತ

ಹೇಣವು ಹೇಳಿತು. ಅಂದಿನ ದಿನವು ನಿನ್ನನ್ನು ನನ್ನ ಒಡಹುಟ್ಟಿದವನು ಎನ್ನದೇ 'ನಿರ್ಗತಿಕವಾಗಿ' ಬೀದಿಯಲ್ಲಿ ಬಿಸಾಡಿದನು. ಅದರ ಪ್ರಾಯಶ್ಚಿತಕ್ಕೆ ನನ್ನ ಕುಟುಂಬವು, ಸ್ನೇಹಿತರರೂ ನನ್ನನ್ನು ಬೀದಿಪಾಲು ಮಾಡಿದರು.

ಎಷ್ಟೇ ಶ್ರೀಮಂತನಾದರು, ನಿನ್ನನ್ನು ಮಾನವೀಯತೆ ಮೌಲ್ಯಗಳಲ್ಲಿ ನಾನೇ ಸಣ್ಣವನಾದೆನು ಅಣ್ಣಾ ಎಂದು ದುಃಖಿಸಿತು. ದೇವರು ಮಾಡಿದ ಆಟವು ನಾನು ಮಾಡಿದ ಕರ್ಮಕ್ಕೆ ನನಗೆ ಸರಿಯಾಗಿದೆ ಎಂದಿತು. ದೇವರು ಆಡಿಸುವಾಗ ನಾವು ಅವನ ಪಾತ್ರಧಾರಿಗಳಷ್ಟೇ, ನಟನೆಯು ಅವನದ್ದೇ. ನಾವು ಅದನ್ನು ಅರಿತು ಬಾಳಬೇಕು ಎಂದು. ಎರಡು ಹೇಣಗಳು ಸಮಾಜಕ್ಕೆ ಸಂದೇಶವಿತ್ತವು.

## ನನ್ನ ಅವ್ವ

ನನ್ನ ಬದುಕಿನ ಸಹನೆಯ ಮೂರ್ತಿ
ತಾಳ್ಮೆಯ ಪ್ರತೀಕ
ಯಾರೊಬ್ಬರ ಮನಸ್ಸನ್ನು ನೋಯಿಸದ ಜೀವ
ಅದುವೇ ನನ್ನವ್ವ...

ತನ್ನ ಕಷ್ಟಗಳನ್ನೆಲ್ಲಾ ಸ್ವೀಕರಿಸಿ
ಚಿಂತೆಯ ಸುಳಿಯಲ್ಲಿ ಸಿಲುಕಿರುವಳು
ಮಕ್ಕಳ ಭವಿಷ್ಯದ ಪ್ರಗತಿಯನ್ನು
ಕಾಣುವಳು ನನ್ನವ್ವ

ಬಾಹ್ಯವಾಗಿ ನಕ್ಷತ್ರದಂತೆ ಹೊಳೆಯುವಳು
ಅಂತರಿಕವಾಗಿ ಮನಸ್ಸಲ್ಲೇ ಕೊರಗುವಳು
ಕುಟುಂಬದ ನೆರವಿಗೆ ನಿಲ್ಲುವಳು
ಎಲ್ಲರ ನೋವಿಗೆ ಸ್ಪಂದಿಸುವಳು ನನ್ನವ್ವ

ನನ್ನ ಪ್ರಗತಿಯ ಸುಳಿವೇ
ಅವಳಿಗೆ ಪ್ರಯಾಣ
ಯಾರು ಬಲ್ಲರು... ಅದರ ನಿಲ್ದಾಣ
ಎಲ್ಲದಕ್ಕೂ ಮಿಗಿಲು ನನ್ನವ್ವ

**ತಳವಾರ ಚೌಡಮ್ಮ**
4ನೇ ಸೆಮಿಸ್ಟರ್

# ಹರಪನಹಳ್ಳಿ ಭೀಮವ್ವನವರ ಜೀವನ ಚರಿತ್ರೆ

– ಐ. ಕೊಟ್ರಮ್ಮ
ಬಿ.ಎ. 4ನೇ ಸೆಮಿಸ್ಟರ್

"ಹರಪನಹಳ್ಳಿ ಭೀಮವ್ವ ಕನ್ನಡ ಸಾಹಿತ್ಯ ಲೋಕದ ಭವ್ಯ ಬರಹಗಾರ್ತಿ".

ಸಂಸಾರದುದ್ದಕ್ಕೂ ಲೌಕಿಕ ಜಗತ್ತಿನಲ್ಲಿ ಈ ಭೌತಿಕ ಜಗತ್ತಿನಲ್ಲಿ ತನ್ನ ಎಲ್ಲಾ ಕರ್ತವ್ಯಗಳನ್ನು ಮಾಡುತ್ತಲೇ ಮುಕ್ತಿಯ ಸೋಪಾನವನ್ನು ತಾನು ಸ್ವತಃ ಏರುವುದಲ್ಲದೇ ತನ್ನಂಥ ನಾರಿಯರಿಗೆ ದಾರಿ ತೋರಿಸಿದವರಲ್ಲಿ ನಮ್ಮ ಹರಿದಾಸಿಯರಲ್ಲಿ ಪ್ರಮುಖರಾದವರು ಹೆಳವನಕಟ್ಟೆ ಗಿರಿಯಮ್ಮ ಹಾಗೂ ಹರಪನಹಳ್ಳಿ ಭೀಮವ್ವನವರು.

ಭೀಮವ್ವನವರು 1823 ರ ಜುಲೈ 6ನೇ ತಾರೀಖು ನಾರಾಯಣ ದೇವರ ಕೆರೆ ಎಂಬ ಊರಲ್ಲಿ ನರೇಭಟ್ಟರ ವಂಶರ ರಘನಾಥಾಚಾರ್ಯ ಮತ್ತು ರಾಘಮ್ಮ ದಂಪತಿಗಳ ಮಗಳಾಗಿ ಜನಿಸಿದರು. ಇವರ ಹುಟ್ಟು ಹೆಸರು ಕಮಲಾಕ್ಷಿ. ಪುಟ್ಟ ಮಗು ಅಳತೊಡಗಿದಾಗಲೇ ತೊಟ್ಟಿಲು ತೂಗುತ್ತಾ ಹರಿನಾಮ ಹಾಡಿದರೆ ಕೂಡಲೇ ಸುಮ್ಮನಾಗುತ್ತಿತಂತೆ.

ಹರಪನಹಳ್ಳಿ ಭೀಮವ್ವ ಅವರು ದಾಸ ಸಾಹಿತ್ಯದಲ್ಲಿ ಪ್ರಮುಖ ಕೊಡುಗೆಯನ್ನಿತ್ತ ಅಪರೂಪದ ಮಹಿಳೆ ಎನಿಸಿದ್ದಾರೆ. ಇವರ ಕಾವ್ಯನಾಮ "ಭೀಮೇಶ ಕೃಷ್ಣ" ಇವರನ್ನು ಜನ "ಅವ್ವನವರೂ" ಎಂದು ಹೇಳುತ್ತಾರೆ.

ಭೀಮವ್ವನ ನೆನಪಿನ ಶಕ್ತಿಯೂ ಘನವಾಗಿತ್ತು. ಹಾಗಾಗಿಯೇ ಅವರು ಸಾವಿರಾರು ಕೀರ್ತನೆಗಳನ್ನೂ ನೂರಾರು ನುಡಿಗಳ ಕಥನ ಕೀರ್ತನೆಗಳನ್ನೂ ಬಾಯಿಂದಲೇ ನಿರರ್ಗಳವಾಗಿ ಹೇಳುತ್ತಿದ್ದರು. ಮಗು ಆರು ವರ್ಷದವಳಿರುವಾಗಲೇ ಆಕೆಗೆ ಶ್ರೀ ವೇದವ್ಯಾಸ ದೇವರ ದರ್ಶನವಾಗಿತ್ತು. ಅಂದಿನಿಂದಲೇ ಅವಳಲ್ಲಿ ಗುರುತರ ಬದಲಾವಣೆ ಕಾಣಿಸಿಕೊಂಡಿತ್ತು. ಈಕೆಗೆ 11 ವರ್ಷವಾದಾಗ ರಾಯದುರ್ಗ ತಾಲೂಕಿನ ಹರೇ ಸಮುದ್ರ ಗ್ರಾಮದ ಗೋಪಾಲಪ್ಪ ಎಂಬುವರ ವಂಶದ ಮುನಿಯಪ್ಪನವರ ಜೊತೆ ಮದುವೆಯಾಯಿತು. ವರನ ವಯಸ್ಸು 48 ವರ್ಷ ಅವರಿಗೆ ಇದು ಮೂರನೆಯ ಮದುವೆ. ಮದುವೆಯಾದ 14 ವರ್ಷಕ್ಕೆ ಇವರಿಗೆ ಒಬ್ಬ ಮಗ ಹಾಗೂ ನಾಲ್ಕು ವರ್ಷಗಳ ನಂತರ ಮಗಳು ಜನಿಸಿದರು. ಇವರ ಪತಿ ವಿಯೋಗವಾಯಿತು. ಇಲ್ಲಿಂದ ಇವರ ಜೀವನ ಮಾರ್ಗ ಬದಲಾಯಿತು.

ಇವರ ಮೊದಲ ಹಾಡು "ರಕ್ಷಿಸಬೇಕೆನ್ನ ಲಕ್ಷ್ಮೀ ನರಸಿಂಹನ ಭಕ್ತನೇ". ಗೋಪಿಕಾ ಸ್ತ್ರೀಯರು ಉದ್ಧವನೆದುರು ಮಾಡಿದ ಪ್ರಲಾಪ, ಮುಯ್ಯದ ಹಾಡು, ಸುಭದ್ರಾ ಕಲ್ಯಾಣ, ರತಿ ಕಲ್ಯಾಣ, ನಳಚರಿತ್ರೆ, ಸತ್ಯಭಾಮೆಯು "ಪತಿದಾನ ಕೊಟ್ಟ ಹಾಡು" ಮುಂತಾದ ದೊಡ್ಡ ಕೀರ್ತನೆಗಳನ್ನಲ್ಲದೆ ಸಣ್ಣ ಪುಟ್ಟ ಕೀರ್ತನೆಗಳನ್ನೂ ಇವರು ಮೂಡಿಸಿದರು. ಕೀರ್ತನೆ, ಸುಳಾದಿ, ಉಗಾಭೋಗ ಹೀಗೆ ಮೂರು ಪ್ರಕಾರಗಳಲ್ಲಿಯೂ ಭೀಮವ್ವನವರು ಕೃತಿ ರಚನೆ ಮೂಡಿದ್ದಾರೆ.

143 ಸಣ್ಣ ಕೀರ್ತನೆಗಳನ್ನೂ, 193 ದೊಡ್ಡ ಕೀರ್ತನೆಗಳನ್ನು ರಚಿಸಿದ್ದಾರೆ. ಉತ್ತರ ಕರ್ನಾಟಕದಲ್ಲಿ ಶ್ರಾವಣ ಮಾಸದಲ್ಲಿಯ ಶುಕ್ರವಾರ ಹಾಗೂ ಶನಿವಾರಗಳಂದು ಲಕ್ಷ್ಮೀದೇವಿಯನ್ನು ಗಡಿಗೆಯ ರೂಪದಲ್ಲಿ ಕೂಡ್ರಿಸಿ ಪೂಜಿಸುವಾಗ ಹಾಡುಗಳು, ಮಂಗಳಗೌರಿ ಹಾಡು, ಭಕ್ಷ್ಯ ಭೋಜನಗಳ ವರ್ಣನೆ ಮುಂತಾದವು ತುಂಬಾ ಸುಂದರವಾಗಿವೆ.

ಹೆಣ್ಣಿಗೆ ಮುತ್ತೈದೆತನ, ಸಂತಾನ ಪ್ರಾಪ್ತಿ ಇವುಗಳ ಮಹತ್ವವನ್ನು ತೋರುವ ಮನೋಭಾವ ಭೀಮವ್ವನವರ ಕಾವ್ಯಗಳಲ್ಲಿ ಎದ್ದು ಕಾಣುತ್ತದೆ. ಅಷ್ಟೇ ಅಲ್ಲದೆ ಮಧ್ವಮತದ ತತ್ವಗಳೂ, ಪಂಚವಿಧ ಭಾವಗಳಾದ ದಾಸ್ಯ, ಸಖ್ಯ, ಮಧುರ, ವಾತ್ಸಲ್ಯ ಹಾಗೂ ಶಾಂತ ಇವುಗಳಿಂದ ಇವರು ಭಗವಂತನನ್ನು ಸ್ತುತಿಸಿದ್ದಾರೆ. ಈ ರೀತಿ ಕಥೆಯನ್ನು ಪಾತ್ರಗಳ ಬಾಯಿಂದಲೇ ಹೇಳಿಸುವ ರೀತಿ ಅನನ್ಯವಾದದ್ದು, ಅಸಾಮಾನ್ಯ ಗ್ರಹಣಶಕ್ತಿ, ಸ್ಮರಣಶಕ್ತಿ, ಧಾರಣ ಹಾಗೂ ಪ್ರತಿಭೆ ಮೆಚ್ಚುವಂತಹದು.

ಹರಪನಹಳ್ಳಿ ಭೀಮವ್ವನವರು ಕ್ರಿ.ಶ. 1903 ನೇ ಜನವರಿ 11ನೇ ತಾರೀಖು ಅಂದರೆ ಪುಷ್ಯ ಶುದ್ಧ 13, ಮುಕ್ಕೋಟಿ ದ್ವಾದಶಿಯ ದಿನ ಮಧ್ಯಾಹ್ನದಲ್ಲಿ ನಿಧನರಾದರು.

# ಕನ್ನಡ ನಾಡಿನ ಮಡಿವಾಳ ಮಾಚಿದೇವ

– ಮಡಿವಾಳ ಸುಮ
ಬಿ.ಎ. 2ನೇ ಸೆಮಿಸ್ಟರ್

12ನೇ ಶತಮಾನದಲ್ಲಿ ದುರ್ಬಲರ ಶೋಷಣೆ, ಜಾತೀಯತೆ, ಮೇಲು-ಕೀಳು, ತಾರತಮ್ಯ, ಅಸ್ಪೃಶ್ಯತೆ, ಮೂಢನಂಬಿಕೆಗಳ ಸೃಷ್ಟಿ, ಶಿಕ್ಷಣದಲ್ಲಿ ಅವಕಾಶ ವಂಚನೆ ಹೀಗೆ ಅನೇಕ ಸಾಮಾಜಿಕ ಅಸಮಾನತೆಯಿಂದ ಜನರು ತುಳಿತಕ್ಕೆ ಒಳಗಾಗಿದ್ದರು.

ಇವೆಲ್ಲವುಗಳಿಂದ ಮಹಿಳೆಯರು, ವೃತ್ತಿನಿರತ ಶ್ರಮ ಜೀವಿಗಳು, ಬಡವರು, ದೀನದಲಿತರು ನಿರಾಶೆ-ಹತಾಶೆಗೊಂಡು ಅಸಹನೀಯ ಬದುಕಿಗೆ ತುತ್ತಾಗಿದ್ದರು.

"ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಒದಗಿಸಲು ಬಸವ-ಮಾಚಿದೇವಾದಿ ಶರಣರು ಸಾಮಾಜಿಕ ಕ್ರಾಂತಿಯನ್ನು ಕೈಗೊಂಡರು. ಶರಣರ ಅಗ್ರಗಣ್ಯ ಬಳಗದಲ್ಲಿ 'ಮಡಿವಾಳ ಮಾಚಿದೇವ' ಅತ್ಯಂತ ಪ್ರಕಾಶಮಾನವಾಗಿ ಕಂಡುಬರುವರು.

**ಅವತಾರ ಪುರುಷ :** ದಕ್ಷನನ್ನು ಸಂಹಾರ ಮಾಡಿ ಅತೀ ಉತ್ಸಾಹದಿಂದ ಶಿವನನ್ನು ಕಾಣಲು ವೀರಭದ್ರ ಶಿವನ ಸಭೆಯೊಳಗೆ ನಡೆದು ಬರುತ್ತಾನೆ. ಸಭೆಯಲ್ಲಿರುವ ಶಿವ ಭಕ್ತನಿಗೆ ಈತನ ಉತ್ತರೀಯ ಸೆರಗು ತಾಕುತ್ತದೆ. ವಿಜಯದ ಉದ್ವೇಗದಲ್ಲಿ ಆದ ಆ ತಪ್ಪಿಗೆ, ಭೂಲೋಕದಲ್ಲಿ ಮಡಿವಾಳನಾಗಿ ಜನಿಸಿ ಶರಣರ ವಸ್ತ್ರಗಳನ್ನು ಮಡಿ ಮಾಡುವ ಕಾಯಕ ಪೂರೈಸಿ ದೋಷಮುಕ್ತನಾಗಿ ಬರುವಂತೆ ಶಿವನ ಆದೇಶವಾಗುತ್ತದೆ.

ಮಾಚಿದೇವರನ್ನು ವೀರಭದ್ರನ 'ದೇವಾಂಶ ಸಂಭೂತ' ಅವತಾರ ಪುರುಷನೆಂದು ನಿರೂಪಿಸುವುದು ಸಾಮಾನ್ಯ ರೂಢಿಯಾಗಿದೆ.

**ಉದಯಿಸಿದ ಶರಣ ಕಿರಣ**

ಬಿಜಾಪುರ ಜಿಲ್ಲೆಯ ಸಿಂಧಗಿ ತಾಲ್ಲೂಕಿನ 'ದೇವರ ಹಿಪ್ಪರಗಿ'ಯಲ್ಲಿ ಪರುವತಯ್ಯ-ಸುಜ್ಞಾನವ್ವ ದಂಪತಿಗಳ ಪುತ್ರ ರತ್ನ-ಶರಣ ಕಿರಣ ಮಡಿವಾಳ ಮಾಚಿದೇವರು ಜನಿಸಿದ್ದು ಕ್ರಿ.ಶ. 1120-1130ರ ನಡುವೆ.

**ಕಾಯಕ ಹಿಮಾಚಲ ಮಾಚಯ್ಯ**

ಮಾಚಯ್ಯ ಹುಟ್ಟಿನಿಂದಲೂ ಮಡಿವಾಳನಾಗಿದ್ದು, ಅಚಲ ಕಾಯಕ ನಿಷ್ಠೆಯಲ್ಲಿ ಹಿಮಾಲಯದಷ್ಟು ದೃಢನಾಗಿದ್ದ, ತನ್ನ ಕಾಯಕವೇ ಭಕ್ತಿ, ಜೀವನದುಸಿರು ಎಂದು ನಂಬಿದ್ದ. ಜಂಗಮ ವೇಷದಲ್ಲಿ ಬಂದ ಶಿವನ ಬಟ್ಟೆಗಳನ್ನು ಆತನ ಷರತ್ತಿನ ಮೇರೆಗೆ ತನ್ನ ಹೆಂಡತಿ ಮಲ್ಲಿಗೆಮ್ಮಳ ಎದೆ ಬಗೆದ ರಕ್ತದಲ್ಲಿ ಒಗೆದು ಒಣಗಿಸಿಕೊಂಡು ಬಂದ ಸಂದರ್ಭದ ದಂತ ಕಥೆ ಹಿಮಾಚಲಕ್ಕಿಂತಲೂ ಗಟ್ಟಿ ಕಾಯಕದ ಹಿರಿಯಾಳು ಮಾಚಿದೇವನಾಗಿದ್ದ ಎಂಬುದನ್ನು ತಿಳಿಸುತ್ತದೆ.

ಶಿವಶರಣರ ಹಾಗೂ ಕಾಯಕದಲ್ಲಿ ನಿಷ್ಠೆಯುಳ್ಳ, ಮೈಲಿಗೆಯ ಬಟ್ಟೆಗಳನ್ನು 'ಮಡಿ' ಮಾಡಿ ಮುಟ್ಟಿಸುವ ಕಾಯಕ ಇವರದಾಗಿತ್ತು. ಅರಸುತನ ಮೇಲಲ್ಲ, ಅಗಸುತನ ಕೀಳಲ್ಲ ಎಂದು ಜನಕ್ಕೆ ಸಾರಿದರು.

**ಮಾಚಿದೇವರ ವಚನಗಳು**

ಅಂಗವೇ ಲಿಂಗವಾಗಿ, ಲಿಂಗವೇ ಪ್ರಾಣವಾಗಿ
ಜಂಗಮವೇ ಸಂಗವಾಗಿ, ಸಂಗವೇ ಸುಸಂಗವಾಗಿ
ಪ್ರಾಣವೇ ಪ್ರಸಾದವಾಗಿ, ಪ್ರಸಾದವೇ ಪ್ರಾಣವಾಗಿ
ಇಂತಿ ತ್ರಿವಿಧದಲ್ಲ ಸಂಪನ್ನನಾ
ಸಮತಾ ಪ್ರಸಾದಿ, ಸನ್ನಿಹಿತ ಪ್ರಸಾದಿ
ಸಮಾಧಾನ ಪ್ರಸಾದಿ ಕಲಿದೇವಯ್ಯ
ಚೆನ್ನಬಸವಣ್ಣನ ಪ್ರಸಾದವ ಕೊಂಡು
ನಾನು ಬದುಕಿದೆನು ಕಾಣಾ ಪ್ರಭುವೇ.

## ಸಮರ್ಪಣೆ

ಸಾಧನೆ ಇಲ್ಲದೆ ಸತ್ತರೆ
ಸಾವಿಗೆ ಅವಮಾನ
ಹುಟ್ಟಿದಾಗ ನಾವು ಅಳಬೇಕು
ಸತ್ತಾಗ ಜಗತ್ತು ಅಳಬೇಕು
ಅಂತಹ ಬದುಕು ಸಾರ್ಥಕ

ತೇಗದ ಮರದಂತೆ ಬಾಗದೇ
ಮುಳ್ಳು ಚುಚ್ಚುತ್ತಾ ಬೆಳೆಯುವುದಲ್ಲ
ಅರಳಿ ಮರದಂತೆ ನೆರಳು ಕೊಡುತ್ತಾ
ಅಸಂಖ್ಯಾತ ಹಕ್ಕಿ ಪಕ್ಷಿಗಳಿಗೆ ಆಶ್ರಯ ಕೊಡುತ್ತಾ
ಅರಳಿ ಮರದ ವಿಶಾಲತೆಯ ಬದುಕು ಸಾರ್ಥಕ

ಬದುಕಿನ ಎಲ್ಲೆ ಮೀರಿ ಸ್ವಾರ್ಥ
ಪರಿವಾರಕ್ಕಾಗಿ ಪರಿವಾರ್ಥಿ
ಪರೋಪಕಾರಕ್ಕಾಗಿ ಪರೋಪಕಾರ್ಥಿ
ಪ್ರಪಂಚದ ಕಲ್ಯಾಣಕ್ಕೆ ಪರಮಾರ್ಥಿ
ಸಾರ್ಥಕ ಬದುಕಿನ ಅರ್ಥ

ಜ್ಞಾನವನ್ನು ಪಡೆದುಕೊಳ್ಳುತ್ತಾ
ಪ್ರೇಮವನ್ನು ಹಂಚುತ್ತಾ
ನ್ಯಾಯ ಮಾರ್ಗದ ನಿಮಿತ್ತ
ಧೈರ್ಯದಿಂದ ಮುನ್ನುಗ್ಗುತ್ತಾ
ಭಗವಂತನಿಗೆ ಸಮರ್ಪಣೆಗೊಂಡ ಬದುಕು ಸಾರ್ಥಕ

**– ಐ.ಜಿ. ಸಿಂಧು**
ಬಿ.ಕಾಂ. ಅಂತಿಮ ವರ್ಷ

## ಮಾತು

ಖಾಲಿಯಾಗಿವೆ ಮಾತು
ಕಾರಣಾಂತರಗಳಿಂದ !
ಸದ್ಯಕ್ಕೆ ಬಾಕಿ ಉಳಿದಿರುವುದು
ನೋವು ತುಂಬಿದ ನಗು ಮಾತ್ರ

**– ಡಿ. ಹರೀಶ್**
ದ್ವಿತೀಯ ಬಿ.ಎಸ್ಸಿ.

## ನನ್ನ ಬರಹ

ಅಪ್ಪ ಅಂದರೇ ಆಕಾಶ
ಜೀವನದ ಸಾರಾಂಶ
ಅವನಿಲ್ಲದ ಬದುಕು ನಶ್ವರಂಶ
ಅವನೇ ಈ ಪಯಣಕ್ಕೆ ವಿಶ್ವಾಸ
ನೀ ತೊರೆದರೆ ಬಾಳೆ ಶೂನ್ಯಾಂಶ

**– ಕವಿತಾ ಚೌಡಪ್ಪ**
ಬೂದಿಹಾಳು, ಬಿ.ಎ. ದ್ವಿತೀಯ

## ಪ್ರೀತಿ

ನಿನ್ನ ಪ್ರೀತಿಯ ಗುಂಗಲ್ಲಿ, ನನ್ನ ಹೆಸರನ್ನೇ
ಮರೆತ ಅನಾಮಿಕ ನಾನು
ಒಮ್ಮೆ ಹೇಳಬಾರದೇ ಪ್ರಿಯೇ ನಿನ್ನ
ಹೆಸರನ್ನು ನೀನು
ಸುರಿವ ಕಾರ್ಗತ್ತಲಲ್ಲಿ ಬೆಳದಿಂಗಳ
ಬಾಲೆಯಾಗಿ ಅಂದು ನೀ ಬಂದೆ ನನ್ನ ಮುಂದೆ
ನನ್ನೆಲ್ಲಾ ಆಸೆ, ಆಕಾಂಕ್ಷೆಗಳನ್ನ ನೀ
ಕೊಂದೆ, ಕೊಂದೆ, ಕೊಂದೆ.

**– ಡಿ. ಹರೀಶ್**
ದ್ವಿತೀಯ ಬಿ.ಎಸ್ಸಿ.

# ಜಾಗತಿಕ ತಾಪಮಾನ

– ಭರತ್ ದುಗ್ಗಾವತಿ
ಉಪನ್ಯಾಸಕರು, ಆಂಗ್ಲಭಾಷಾ ವಿಭಾಗ

"ಜಾಗತಿಕ ತಾಪಮಾನ ಹಾಗೂ ಹವಾಮಾನ ಬದಲಾವಣೆ ಇಂದು ಎದುರಿಸುತ್ತಿರುವ ಅತ್ಯಂತ ತೀವ್ರವಾದ ಸಮಸ್ಯೆಯಾಗಿದೆ. ಭಯೋತ್ಪಾದನೆಯ ಬೆದರಿಕೆಗಿಂತಲೂ ಗಂಭೀರವಾಗಿದೆ." ಈ ವಾಕ್ಯವು ಅಕ್ಷರಶಃ ಅರ್ಥಪೂರ್ಣವಾಗಿದೆ. ಇಂದು ಹೆಚ್ಚುತ್ತಿರುವ ಜಾಗತಿಕ ತಾಪಮಾನಕ್ಕೆ ನಾವೆಲ್ಲರೂ ಕಾರಣೀಕರ್ತರಾಗಿದ್ದೇವೆ.

ಗಾಂಧೀಜಿ ಹೇಳಿದಂತೆ "ಈ ಭೂಮಿ ತಾಯಿಯು ನಮ್ಮೆಲ್ಲರ ಅವಶ್ಯಕತೆಗಳನ್ನು ಪೂರೈಸಲು ಸಶಕ್ತಳು. ಆದರೆ ನಮ್ಮ ದುರಾಸೆಗಳನ್ನಲ್ಲ" ಎಂಬುದು ಇಂದಿಗಾದರೂ ನಮಗೆಲ್ಲರಿಗೂ ಮನವರಿಕೆಯಾಗಬೇಕಿದೆ. ಆ ಮಹಾತ್ಮರ ಸರಳ ಜೀವನ, ಉದಾತ್ತ ವಿಚಾರ, ಕಾರ್ಯ ಕೌಶಲ್ಯ, ಅವರ ಗ್ರಾಮ ಸ್ವರಾಜ್ಯ, ಸ್ವಾವಲಂಬನೆ ಒಟ್ಟಾರೆ ಅವರ ದೂರದೃಷ್ಟಿಯು ಇಂದಿನ ಜಾಗತಿಕ ತಾಪಮಾನ ಏರುವಿಕೆ ಹಾಗೂ ಹವಾಮಾನ ಬದಲಾವಣೆಯ ಸಮಸ್ಯೆಗೆ ಇಡೀ ಪ್ರಪಂಚಕ್ಕೆ ಪರಿಹಾರ ಸೂಚಿಸುವ ಮಾರ್ಗೋಪಾಯಗಳಾಗಿವೆ.

ಆದರೆ ಮಾನವ ತನ್ನ ಅತಿ ಆಸೆ ಹಾಗೂ ಐಷಾರಾಮಿ ಜೀವನಕ್ಕಾಗಿ ನಿಸರ್ಗಕ್ಕೆ ಮಾಡಿದ ಹಾನಿಯಿಂದ ಇಂದು ನಿಸರ್ಗ ನೀಡುತ್ತಿರುವ ಪರಿಣಾಮವೇ "ಜಾಗತಿಕ ತಾಪಮಾನ". ಹಾಗಾದರೆ ಜಾಗತಿಕ ತಾಪಮಾನ ಎಂದರೇನು? ಇದಕ್ಕೆ ಕಾರಣ ಮತ್ತು ಇದರಿಂದಾಗುವ ಪರಿಣಾಮವೇನು? ಎಂಬುದನ್ನು ಕೆಳಗಿನಂತೆ ತಿಳಿದುಕೊಳ್ಳೋಣ.

**ಹಸಿರುಮನೆ ಪರಿಣಾಮ :** ಭೂಮಿಯು ಸೂರ್ಯನ ಹ್ರಸ್ವ ಶಾಖ ವಿಕಿರಣಗಳನ್ನು ಪಡೆಯುತ್ತದೆ. ಹೀಗೆ ಪಡೆದ ವಿಕಿರಣಗಳನ್ನು ಭೂಮಿಯ ಮೇಲಿನ ವಾತಾವರಣದಲ್ಲಿರುವ "ಹಸಿರುಮನೆ ಅನಿಲಗಳು" ಹಿಡಿದಿಟ್ಟುಕೊಳ್ಳುತ್ತವೆ. ಇದರಿಂದ ಭೂಮಿಯ ವಾತಾವರಣದಲ್ಲಿ ತಾಪಮಾನ ಹೆಚ್ಚಾಗುತ್ತದೆ. ಈ ವಿದ್ಯಮಾನಕ್ಕೆ "ಹಸಿರುಮನೆ ಪರಿಣಾಮ" ಎನ್ನುವರು.

ಇದರಲ್ಲಿ $co^2$ ಪ್ರಮುಖವಾದದ್ದು ಈ $co^2$ 55% ಹಸಿರುಮನೆ ಪರಿಣಾಮಕ್ಕೆ ಕಾರಣವಾಗಿದೆ.

**ಜಾಗತಿಕ ತಾಪಮಾನ ತಡೆಯಲು ಭಾರತದ ಕಾರ್ಯಕ್ರಮಗಳು :**

1. ಇಂಧನ ದಕ್ಷತೆ ಮತ್ತು ಸಾಮರ್ಥ್ಯತೆ ಹೆಚ್ಚಿರುವ ಮತ್ತು ಕಡಿಮೆ ಇಂಗಾಲ ಹೊರ ಸೂಸುವ BS-4 ವಿಧದ ಇಂಜಿನ್ ಹೊಂದಿರುವ ವಾಹನಗಳನ್ನು ಜಾರಿಗೆ ತಂದಿದೆ.
2. ಗುಜರಿ ಯೋಜನೆ : 15 ವರ್ಷ ಮೇಲ್ಪಟ್ಟ ವಾಣಿಜ್ಯ ವಾಹನಗಳು ಮತ್ತು 20 ವರ್ಷ ಮೇಲ್ಪಟ್ಟ ಸ್ವಂತ ಬಳಕೆ ವಾಹನಗಳನ್ನು ಸ್ವಯಂಪ್ರೇರಿತವಾಗಿ ಗುಜರಿಗೆ ಹಾಕುವ ಯೋಜನೆಯನ್ನು ಜಾರಿಗೆ ತರಲು ಚಿಂತಿಸಿದೆ.
3. ONE TIME USE PLASTIC ನಿಷೇಧ : 2019 ಅಕ್ಟೋಬರ್‌ನಲ್ಲಿ.
4. Electric Vehicles ಗೆ ಉತ್ತೇಜನ : ಈಗಾಗಲೇ ಅಂತರಾಷ್ಟ್ರೀಯ TESLA ಎಂಬ ಎಲಾನ್ ಮಸ್ಕ್ Electric car ಉತ್ಪಾದಿಸುವ ಕಂಪನಿ ತನ್ನ R&D ಕಚೇರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿದೆ.
5. ಬೆಂಗಳೂರಿನಲ್ಲಿ ಪ್ರತಿ ತಿಂಗಳ 4ನೇ ತಾರೀಖು ಬಸ್ ದಿನವಾಗಿ ಆಚರಣೆ : ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸುವ ಸಲುವಾಗಿ ಆಚರಿಸಲಾಗುತ್ತಿದೆ.
6. ರಾಷ್ಟ್ರೀಯ ಸೌರ ನೀತಿ (2016)
7. ಜೈವಿಕ ಇಂಧನಗಳ ಬಳಕೆ (Bio fuels)
8. ರಾಷ್ಟ್ರೀಯ ಹಸಿರು ಪ್ರಾಧಿಕಾರ ಸ್ಥಾಪನೆ.

**ಮುಂದೆ ಮಾಡಬೇಕಾಗಿರುವುದು ಏನು?**

1. ಅರಣ್ಯಪ್ರದೇಶವನ್ನು ಹೆಚ್ಚಿಸುವುದು, ಕೃಷಿ ಅರಣ್ಯೀಕರಣ ಕಾರ್ಯಕ್ರಮಗಳನ್ನು ಜಾರಿಗೆ ತರುವುದು ಹಾಗೂ ಸಾವಯವ ಕೃಷಿ ಉತ್ತೇಜಿಸುವುದು.

2. ಪಳೆಯುಳಿಕೆ ಇಂಧನಗಳನ್ನು ಬಳಸುವುದನ್ನು ಬಿಟ್ಟು ಪರಿಸರ ಸ್ನೇಹಿ ಸೌರ ವಿದ್ಯುತ್, ವಾಯು, ಜೈವಿಕ ಶಕ್ತಿಗಳನ್ನು ಬಳಸಬೇಕು. ಹೆಚ್ಚು carbon ಹೊರಸೂಸುವ ವಾಹನಗಳನ್ನು ನಿಷೇಧಿಸಬೇಕು.
3. ಜಾಗತಿಕ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಕಾನೂನು ಮತ್ತು ನೀತಿಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದು.

**ಉಪ ಸಂಹಾರ :**

ಒಟ್ಟಾರೆ ಜಾಗತಿಕ ತಾಪಮಾನದ ಹೆಚ್ಚಳದಲ್ಲಿ ಪ್ರತಿಯೊಬ್ಬರ ಪಾತ್ರವಿದ್ದು ಈಗ ಅದನ್ನು ಕಡಿಮೆ ಮಾಡುವುದು ಕೂಡ ಪ್ರತಿಯೊಬ್ಬರ ಕರ್ತವ್ಯ. "ವಸುದೈವ ಕುಟುಂಬಕಂ" ಎಂಬುದು ಪರಂಪರೆಯಿಂದ ಬಂದ ಧ್ಯೇಯ. ಇದರಂತೆ ಪ್ರತಿಯೊಬ್ಬರು ವಿಶ್ವ ಒಂದು ಕುಟುಂಬ. ಆ ಕುಟುಂಬದಲ್ಲಿ ತಾನು ಒಬ್ಬ ಎಂಬ ಮನಸ್ಥಿತಿಯಲ್ಲಿ ಜಾಗತಿಕ ತಾಪಮಾನದಿಂದಾಗುವ ಪರಿಣಾಮವನ್ನು ಅರಿತು ಪ್ರತಿಯೊಬ್ಬ ಪ್ರಜೆ, ಪ್ರತಿಯೊಂದು ರಾಜ್ಯ & ಅಂತರಾಷ್ಟ್ರೀಯ ಸಂಸ್ಥೆಗಳು ಜಾಗತಿಕ ತಾಪಮಾನ ಕಡಿಮೆ ಮಾಡುವುದಕ್ಕೆ ಶ್ರಮಿಸುವುದು ಅತ್ಯಂತ ಅವಶ್ಯಕವಾಗಿದೆ.

"ಪರಿಸರ ರಕ್ಷಿತೋ ರಕ್ಷಿತಃ"

## ಅರಗಿಳಿ

ಅಲ್ಲೊಂದು ಕಡಲ ತೀರದಲಿ
ಪಕ್ಷಿಗಳ ಕಲರವದ ಚಿಲಿಪಿಲಿ
ಗುಣುಗುಟತಲಿತ್ತು ನಿಸರ್ಗದ ಮಡಿಲು
ಏನೆಂದು ಬಣ್ಣಿಸಲಿ ನಾ ಬರಿ ಮಾತಿನಲಿ
ಅರಿವೆ ಇಲ್ಲದೇ ಸಾಗುತ್ತಿದೆ ಜೀವನದ ಗಲಿಬಿಲಿ
ಪರಿಸರದ ಮೇಲೆ ದೌರ್ಜನ್ಯ ನಡೆಯುತ್ತಿದೆ
ಆಧುನಿಕ ಜಗತ್ತಿನಲ್ಲಿ
ಕಾರ್ಮೋಡ ಕರಗಿ ಮಳೆಯು ಸುರಿಯಲಿ
ಬೆಳದಿಂಗಳ ಬೆಳಕ ಚೆಲ್ಲಿ ಬಾನಂಗಳದಲಿ
ಕಣ್ಣಂಚಿನ ಕನಸಿನ ಲೋಕದ ಕಣಕಣದಲಿ
ಈ ಸುಂದರ ಪರಿಸರದ ಮಾಯಾಜಾಲದಲಿ
ನಗುನಗುತಾ ಬಾಳಿ ನೂರಾರು ಕಾಲ ಎಂದು ಹಾರೈಸುವ
ಮುದ್ದು ಅರಮನೆಯ ಅರಗಿಳಿ.

**– ಗೌರಿಹಳ್ಳಿ ರೇಖಾ**
ಬಿ.ಎಸ್ಸಿ. ದ್ವಿತೀಯ ವರ್ಷ

## ಬಾಳಿನ ಬಂಡಿ

ಬಡತನವಿರಲಿ, ಸಿರಿತನವಿರಲಿ
ಮೇಲು ಕೀಳು ಎಂಬ ಭಾವನೆ ಮೂಡದಿರಲಿ
ಭವಿಷ್ಯದ ಬಗ್ಗೆ ಚಿಂತೆಯಿರಲಿ
ಆಗುಹೋಗುಗಳ ಬಗ್ಗೆ ಪರಿಜ್ಞಾನವಿರಲಿ

ಕುರುಡನಾಗಲಿ, ಕುಂಟನಾಗಲಿ
ಸಾಧನೆ ಮಾಡುವ ಛಲ ಹುಟ್ಟಲಿ
ಕಷ್ಟ ಬರಲಿ ದುಃಖ ಬರಲಿ
ಗೆಲ್ಲುವ ಹಠ ನಮ್ಮದಾಗಲಿ

ಮಳೆಯಿರಲಿ, ಬರಗಾಲವಿರಲಿ
ರೈತರ ಜೀವಕ್ಕೆ ಸಾವು ಬಾರದಿರಲಿ
ಕಗ್ಗತ್ತಲೆಯಂತಿರುವ ನಮ್ಮ ಬಾಳು
ಸದಾ ಬೆಳಕಲ್ಲಿ ಮುಂದೇಳಲಿ

ಧರ್ಮಗಳಿರಲಿ, ಜಾತಿ ಮತ ಕುಲಗಳೇನೇ ಇರಲಿ
ಎಲ್ಲರೂ ಮಿತ್ರರಾಗಲಿ
ಈ ನಮ್ಮ ಪವಿತ್ರ ಮಣ್ಣಿನಲ್ಲಿ ಮತ್ತೆ ಗಾಂಧೀಜಿ,
ಭಗತ್ ಸಿಂಗ್, ವಾಜಪೇಯಿ, ಕಲಾಂ
ಅಂತಹ ಅನೇಕ ಮುತ್ತು ರತ್ನಗಳು ಹುಟ್ಟಲಿ

**– ಮುಸ್ಕಾನ್ ಕೆ**
ಬಿ.ಎ. 4ನೇ ಸೆಮಿಸ್ಟರ್

# Uniform Civil Code

– **Bharath Duggavathi,** Lecturer
Dept. of English, ADB College

India is a diverse country with multiple religions and ethnicity, this is rejected in our legal systems, in the form of religious based personal laws.

The Uniform Civil Code (UCC) is defined in our Constitution under article 44 of the Directive Principle of State Policy (DPSP).

A UCC means that all sections of the society irrespective of their religion shall be treated equally according to a national civil code.

The areas like marriage, divorse, maintenance, adoption, successions of property there is no connection B/W religion and law in modern civilization.

Article 44 of the Indian Constitution defines a UCC, article 44 says ``The state share endeavour to secure for the citizens a UCC throughout the territory of India``.

Part about uniform laws are originated;- The British Government in 1840 on the basis of ``Lex Loci report`` had framed uniform laws for crimes, but personal laws of Hindus and Muslims are left by them, those days reforms were raising voice to frame laws related to women against the discrimination.

So constitution assembly was set up to frame our constitution in 1946 added in the constitution under article 44 in part 4 of DPSP.

Than a series of bills were passed, to codify Hindu laws in the form of Hindu marriage act 1955.

-The Hindu succession Act 1956.

-The Hindu minority and guardianship act 1956.

collectively known of Hindu code Bill. which allows right to divorce, made....... irrelevent to marriage and abolished polygony.

Supreme Court first decided to direct the parliament to frame a UCC;

**Shah Bano case :** Mohammad Ahmad Khan v/s Shah Bano Begum in this case in 1985, She was a 73 year old was divorced by her husband using the triple talaq (Saying divorce 3 times ) and was denied maintenance.

The ``Supreme Court`` ruled in her favour in 1985 under the `` maintenance of wives, children and parents``. section 125 of all India criminal code, which applied to all citizens. Irrespective of religion, so it recommended that a UCC be set up.

Article 37 of the constitution itself makes it clear the ``DPSP shall not be enforceble by any court of Law``. They are ``Fundamental in the governance of the country``.it indicates that althrough our constitution itself belives that UCC should be implemented.

**Uniform Civil Code in Goa :** State of Goa once state in India followed the UCC. For all it is citizens. Under their code married couple holds Joint ownership in all assets, Muslim person who have gifted there marriage person who allowed to practice propagony.

**Features :**

- The UCC in Goa is a progressive low that allows equal division of income and property b/w husband and wife and also b/w children.
- Muslims who have their marriage registered in Goa can't practice divorce.

- Inherited property must be shared equally among the children.

**Suggestions for implementing a UCC** :

To realize the goals of the DPSP and maintain uniformity of laws.

- The uniform civil code should be drafted keeping in mind interest of all the religions.
- A Commitee of eminent junists should be constituted to maintain uniformity not to hurt the sentiments of any particular community.
- A progressive act look should be encouraged among the PPL to understand the spirit of ucc in the education, awarness programs must be taken up.
- According to my point of view for an ideal state of UCC would be an ideal safeguard of citizen's rights, need has araisen for having a common civil code for all citizens exrespective of all religion. Ensecuring that their Fundamental and constitutions rights must be protected. Even securalism and national integrity can also be strengthned by introducing the UCC.

# Application for dissolution of love

- The time i sppent with you was perfect. Joyful and exhilarating. But what we didn't expect was the storm of time would up root all our happiness. Today, I am in such a fix in my life that I cannot promise a fulfilling future to you, My love.
- Love is like a tide, it rises and falls. Unfortunately, my love for you is a tide. That has fallen for good. I know it is hard to hear, but I have it to you. To be honest. I hope you will move on like the mighty ocean waves with power and purpose. Good luck in the future.

**Kiran G.R**
B.sc 2nd year

# ವಿಶ್ವದ ಅತ್ಯಂತ ದುಬಾರಿ ಕಾಫಿ

**– ಸೌಮ್ಯ ಚಿತ್ತವಾಡಗಿ**
ಉಪನ್ಯಾಸಕರು, ಪ್ರಾಣಿಶಾಸ್ತ್ರ ವಿಭಾಗ

ವಿಶ್ವಾದ ಮೂರನೇ ಅತಿ ದೊಡ್ಡ ಕಾಫಿ ಉತ್ಪಾದಕ ಮತ್ತು ರಫ್ತುದಾರ ಭಾರತ. ಸಿವೆಟ್ ಕ್ಯಾಟ್‌ನ (ಪುನುಗು ಬೆಕ್ಕು) ಮಲದಿಂದ ತಯಾರಿಸಿದ ವಿಶ್ವದ ಅತ್ಯಂತ ದುಬಾರಿ ಕಾಫಿಯನ್ನು ಕರ್ನಾಟಕದ ಕೊಡಗು ಜಿಲ್ಲೆಯಲ್ಲಿ ಸಣ್ಣ ಪ್ರಮಾಣದಲ್ಲಿ ಉತ್ಪಾದಿಸಲು ಪ್ರಾರಂಭಿಸಿದೆ.

**ಏನಿದು ಕಾಫಿ!**

ಲುವಾರ್ಕ್ ಕಾಫಿ ಎಂದು ಕರೆಯಲ್ಪಡುವ ಸಿವೆಟ್ ಕಾಫಿ ದುಬಾರಿಯಾಗಿದೆ. ಏಕೆಂದರೆ ಅಂತಹ ಕಾಫಿಯನ್ನು ಉತ್ಪಾದಿಸುವ ಅಸಾಮಾನ್ಯ ವಿಧಾನವಾಗಿದೆ. ಇದು ಸಿವೆಟ್ ಕ್ಯಾಟ್‌ನಿಂದ ಜೀರ್ಣವಾಗುವ ಕಾಫಿ ಬೀಜಗಳಿಂದ ಉತ್ಪತ್ತಿಯಾಗುತ್ತದೆ. ಈ ಬೆಕ್ಕಿನ ಮಲವನ್ನು ಸಂಗ್ರಹಿಸಿ ಸಂಸ್ಕರಿಸಿ ಮಾರಾಟ ಮಾಡಲಾಗುತ್ತದೆ.

**ಬೆಳೆಯುವ ವಿಧಾನ**

ಸಿವೆಟ್ ಬೆಕ್ಕು ಚೆರ್ರಿ ಮಾಂಸಗಳನ್ನು ತಿನ್ನುತ್ತದೆ ಮತ್ತು ಹುರುಳಿ ಅಲ್ಲ. ಸಿವೆಟ್‌ನ ಹೊಟ್ಟೆಯಲ್ಲಿರುವ ನೈಸರ್ಗಿಕ ಕಿಣ್ವಗಳು ಹುರುಳಿ ಪರಿಮಳವನ್ನು ಹೆಚ್ಚಿಸುತ್ತದೆ ಮತ್ತು ಅದಕ್ಕಾಗಿಯೇ ಈ ಕಾಫಿ ವಿಶಿಷ್ಟವಾಗಿದೆ.

ಈಗ ರೈತರು ಈ ಕಾಫಿಯ ಪ್ರಾಮುಖ್ಯತೆಯನ್ನು ಅರ್ಥ ಮಾಡಿಕೊಳ್ಳುತ್ತಿದ್ದಾರೆ ಮತ್ತು ನಾವು ಇತರ ದೇಶಗಳಿಗಿಂತ ಭಿನ್ನವಾಗಿ ನೈಸರ್ಗಿಕ ರೂಪದಲ್ಲಿ ಅದನ್ನು ಉತ್ಪಾದಿಸುತ್ತೇವೆ. ಅಲ್ಲಿ ಸಿವೆಟ್ ಬೆಕ್ಕುಗಳನ್ನು ಪಂಜರದಲ್ಲಿ ಇರಿಸಲಾಗುತ್ತದೆ ಮತ್ತು ಕಾಫಿ ಬೀಜಗಳೊಂದಿಗೆ ಬಲವಂತವಾಗಿ ನೀಡಲಾಗುತ್ತದೆ.

**ವಿಶೇಷತೆ ಏನು?**

ಈ ಕಾಫಿಯು ಹೆಚ್ಚು ಪೌಷ್ಟಿಕಾಂಶವಾಗಿದೆ ಎಂದು ಹೇಳಲಾಗುತ್ತದೆ. ಸಂಸ್ಕರಣೆಯ ಸಮಯದಲ್ಲಿ ವ್ಯರ್ಥ ವಾಗುವುದು ಮತ್ತು ಗುಣಮಟ್ಟದ ಪ್ರಮಾಣೀಕರಣದಲ್ಲಿ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುತ್ತದೆ.

- ಗಲ್ಫ್ ರಾಷ್ಟ್ರಗಳು ಮತ್ತು ಯುರೋಪ್‌ಗಳಲ್ಲಿ ವ್ಯಾಪಕ ವಾಗಿ ಸೇವಿಸುವ ಸಿವಿಟ್ ಕಾಫಿಯನ್ನು ವಿದೇಶದಲ್ಲಿ 1 ಕೆಜಿಗೆ ರೂ. 20,000 ರಿಂದ 25,000/– ಸಾವಿರದವರೆಗೆ ಮಾರಾಟ ಮಾಡಲಾಗುತ್ತದೆ.
- ಭಾಗಶಃ ಜೀರ್ಣವಾಗುವ ಕ್ರಿಯೆಯನ್ನು ಸುಧಾರಿಸುತ್ತದೆ.

## ಜೀವನ

ಏನಿದು ಜೀವನದಲ್ಲಿ ಗಲಿಬಿಲಿ
ಸದ್ದಿಲ್ಲ ಗುಬ್ಬಿಗಳ ಚಿಲಿಪಿಲಿ
ಎಲ್ಲೆಲ್ಲೂ ನೋಡಿದರೂ ಕಾರ್ಖಾನೆಗಳ ಹಾವಳಿ
ಸಾಯುವುದಕ್ಕೂ ಕೊಡಬೇಕು ಇಲ್ಲಿ ಬಳುವಳಿ
ಜೀವನ ನಡೆಸಲು ಮಾಡಬೇಕು ದಿನ ಚಳುವಳಿ
ಈ ಪ್ರಪಂಚ ನಮಗೊಂದು ಕಬ್ಬಿಣದ ಸರಪಳಿ
ಇದನ್ನೆಲ್ಲಾ ಬಿಡಿಸಿ ನೋಡಿದರೆ ಪ್ರಕೃತಿಯಲ್ಲಿ
ಸಿಗುವುದು ಜೀವನದ ಹೂವಿನ ಕಂಬಳಿ.

**– ಗೌರಿಹಳ್ಳಿ ರೇಖಾ**
ಬಿ.ಎಸ್ಸಿ. 4ನೇ ಸೆಮಿಸ್ಟರ್

# ಮರೆಗುಳಿತನವೆಂಬ ಕಾಯಿಲೆ

- ಸೌಮ್ಯ ಚಿತ್ತವಾಡಗಿ
ಉಪನ್ಯಾಸಕರು, ಪ್ರಾಣಿಶಾಸ್ತ್ರ ವಿಭಾಗ

ಮರೆವು ಮನುಷ್ಯನ ಸಹಜ ಗುಣ. ಅಸಹಜ ಮರೆವು ಮಾತ್ರ ಮನುಷ್ಯನಿಗೆ ಕಾಯಿಲೆ ಎಂದು ನಿರ್ಧರಿಸಲಾಗುತ್ತದೆ. ಮನುಷ್ಯನಿಗೆ ವಯಸ್ಸಾದಂತೆ ವೃದ್ಧಾಪ್ಯಕ್ಕೆ ತಲುಪಿದಂತೆ ಮರೆವು ದ್ವಿಗುಣವಾಗುತ್ತದೆ.

ಅದಕ್ಕೆ ಮುಖ್ಯ ಕಾರಣವೇ ಮೆದುಳಿನ ನರಗಳ ಸಂವಹನ ಕೊರತೆಯಾಗಿದೆ. ವೈದ್ಯಕೀಯ ವಿಜ್ಞಾನದ ಪರಿಭಾಷೆಯಲ್ಲಿ "ನ್ಯೂರಾನ್‌ಗಳ ಅವನತಿ" ಎನ್ನಲಾಗುತ್ತದೆ. ಅದನ್ನು ಮರೆವು ಕಾಯಿಲೆ ಎನ್ನುವುದಕ್ಕಿಂತ ನಿಧಾನವಾಗಿ ನಮ್ಮನ್ನು ಬದುಕಿನ ಪ್ರಜ್ಞಾಸ್ಥಿತಿಯಿಂದ ದೂರವಾಗಿಸಿ ಬಿಡುತ್ತದೆ. ನಿಧಾನವಾಗಿ ಆವರಿಸುವ ಈ ಕಾಯಿಲೆಗೆ ವಿಜ್ಞಾನದ ಪರಿಭಾಷೆಯಲ್ಲಿ "ಆಲ್‌ಝೈಮರ್ ಡಿಸೀಜ್ (Alzheimer Disease) ಎಂದು ಕರೆಯಲಾಗುತ್ತದೆ. ಇಡೀ ಜಗತ್ತಿನಲ್ಲಿ 5.6 ಕೋಟಿ ಜನರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಭಾರತದಲ್ಲೂ 52 ಲಕ್ಷ ಜನರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಈ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ 2050ರ ಹೊತ್ತಿಗೆ 131.1 ಮಿಲಿಯನ್ ಆಗಲಿದೆ ಎಂದು ಅಂದಾಜಿಸಲಾಗುತ್ತಿದೆ. ಅಂದರೆ 85 ಜನರಲ್ಲಿ ಒಬ್ಬರು ಈ ಕಾಯಿಲೆಗೆ ತಗಲುವ ಸಾಧ್ಯತೆಯಿದೆ ಎಂದು ವಿಜ್ಞಾನಿಗಳು ಊಹಿಸಿದ್ದಾರೆ.

**ಇತಿಹಾಸ :** ಆಲ್‌ಝೈಮರ್ ಕಾಯಿಲೆ ವಾಸಿ ಮಾಡಲಾಗದ ಮಾರಕ ಕಾಯಿಲೆಯನ್ನು ಜರ್ಮನಿಯ ಮನೋವೈದ್ಯ ಅಲೋಯ್ಸ್ ಆಲ್‌ಝೈಮರ್ 1906ರಲ್ಲಿ ಮೊದಲಿಗೆ ಗುರುತಿಸಿದ್ದರಿಂದ ಈ ಕಾಯಿಲೆಗೆ ಅವನ ಹೆಸರು ಇಡಲಾಯಿತು.

**ಏನಿದು ಆಲ್‌ಝೈಮರ್ ಕಾಯಿಲೆ!**

'Alzheimer's Disease' ಅನ್ನು (AD) ಹೆಸರಿನಿಂದ ಗುರುತಿಸುತ್ತಾರೆ. ಬುದ್ಧಿಹೀನತೆಯ ರೂಪವಿದೆ. ಸಾಮಾನ್ಯವಾಗಿ ಶೇ.70ರಷ್ಟು ಪ್ರಕರಣಗಳಲ್ಲಿ ಮರೆಗುಳಿತನ (ಡಿಮೆನ್ಷಿಯಾ) ಕಾರಣದಿಂದಲೇ ಆಲ್‌ಝೈಮರ್ ಬಾಧಿಸುತ್ತದೆ. ಡಿಮೆನ್ಷಿಯಾ ರೋಗವು ವ್ಯಕ್ತಿಯೊಬ್ಬನ ನೆನಪು ಮತ್ತು ಯೋಚನಾಶಕ್ತಿ ಕಡಿಮೆಯಾಗುವುದನ್ನು ಸೂಚಿಸುತ್ತದೆ. ಇದರಿಂದ ಮನುಷ್ಯನ ನಿತ್ಯದ ಚಟುವಟಿಕೆಗಳ ಮೇಲೆ ನಕರಾತ್ಮಕ ಪರಿಣಾಮವು ಉಂಟಾಗುತ್ತದೆ.

ಮಧ್ಯವಯಸ್ಸಿನ ನಂತರ ವಯೋವೃದ್ಧರಲ್ಲಿ ಈ ಸಮಸ್ಯೆ ಕಾಣಿಸುವುದು ಸಹಜವಾಗಿತ್ತು. ಇತ್ತೀಚಿನ ದಿನಗಳಲ್ಲಿ ಹದಿಹರೆಯದವರಲ್ಲೂ ಆಲ್‌ಝೈಮರ್ ಕಾಯಿಲೆ ಕಂಡು ಬರುತ್ತಿರುವುದು ಆತಂಕದ ವಿಚಾರವಾಗಿದೆ. ಕಾರಣವೇನೆಂದರೆ ಆಧುನಿಕ ವೇಗಮಯ ಜೀವನಕ್ರಮ ಮತ್ತು ಒತ್ತಡದ ಜೀವನಶೈಲಿ, ಮಾದಕ ವ್ಯಸನ, ವಿಟಮಿನ್ ಕೊರತೆ, ಮೆದುಳಿನ ನರ ಸಮಸ್ಯೆ, ಪಾರ್ಶ್ವವಾಯು ಮುಂತಾದ ಕಾರಣಗಳಿಂದ ಡಿಮೆನ್ಷಿಯಾ ಕಾಯಿಲೆಯು ಬಾಧಿಸುತ್ತದೆ. ನರ ಸಂಬಂಧಿ ದೋಷಗಳ ಹೊರತಾಗಿ ಡಿಮೆನ್ಷಿಯಾ ಆವರಿಸಿದರೆ ಅದಕ್ಕೆ ಸೂಕ್ತ ಚಿಕಿತ್ಸೆಗಳಿವೆ. ಆದರೆ ಮೆದುಳಿನ ಕೋಶಗಳ ಹಾನಿಯಿಂದ ಉಂಟಾದ ಮರೆವು ಬುದ್ಧಿಮಾಂದ್ಯತೆಗೆ ಕಾರಣವಾಗಬಹುದು. ಮಾತನಾಡುವಾಗ ತೊದಲುವಿಕೆ, ಮುಂಗೋಪ, ಆಕ್ರಮಣಶೀಲ ಸ್ವಭಾವ, ಗೊಂದಲದ ಮನೋಭಾವದಂತಹ ಸಮಸ್ಯೆಗಳು ಗೋಚರಿಸುತ್ತವೆ.

**ರೋಗದ ಲಕ್ಷಣಗಳು**

- ನಿತ್ಯದ ಚಟುವಟಿಕೆಗಳನ್ನು ನಿರ್ವಹಿಸಲು ಅಸಮರ್ಥವಾಗಿರುವುದು.
- ಓದು ಬರಹದ ಕೌಶಲ್ಯ ಹಂತ-ಹಂತವಾಗಿ ಕಡಿಮೆಯಾಗುವುದು.
- ಗೊತ್ತು ಗುರಿಯಿಲ್ಲದೇ ಕೆಲಸ ಮಾಡುವುದು.
- ಅಸ್ಥಿರ ಮನಸ್ಸು ಮತ್ತು ಮುಂಗೋಪ ಸ್ವಭಾವ.

- ಸ್ವಯಂ ಆಗಿ ಆಹಾರ ಸೇವಿಸುವ ಸಾಮರ್ಥ್ಯ ಕಳೆದುಕೊಳ್ಳುವುದು.

**ರೋಗಕ್ಕೆ ಕಾರಣಗಳು :**

ಅಮಿಲಾಯ್ಡ್ ಪೆಪ್ಟೈಡ್‌ಗಳ ಜಮಾವಣೆಯು ನರಕೋಶಗಳ ಅವನತಿಯನ್ನು ಪ್ರಚೋದಿಸುವುದು ಪ್ರಮುಖ ಕಾರಣವೆಂದು ಹೇಳಲಾಗುತ್ತದೆ. ಅಮಿಲಾಯ್ಡ್ ತಂತುವಿನ ಭಾಗಗಳ ಕಣರಾಶಿ ರೂಪದಲ್ಲಿ ಸಂಗ್ರಹವಾಗಿ ನರಕೋಶಗಳ ಸಾವನ್ನು ಪ್ರಚೋದಿಸುತ್ತದೆ. ಅಮಿಲಾಯ್ಡ್ ಪೆಪ್ಟೈಡ್‌ಗಳು ಎರಡು ನರಕೋಶಗಳ ಮಧ್ಯಭಾಗದಲ್ಲಿ ಜಮಾವಣೆಯಾಗುತ್ತದೆ. ಇದರಿಂದ ಒಂದು ನರಕೋಶದಿಂದ ಇನ್ನೊಂದು ನರಕೋಶಕ್ಕೆ ಸಂಪರ್ಕ ಕಡಿತವಾಗುತ್ತದೆ. ಇದರಿಂದ ನರಕೋಶಗಳಲ್ಲಿ ಮಾಹಿತಿ ವಿನಿಮಯವಾಗುವುದಿಲ್ಲ. ಕಾಲಕ್ರಮೇಣ ನರಕೋಶಗಳು ಸಾವನ್ನಪ್ಪುತ್ತವೆ. ಹೀಗಾದಾಗ ಮರೆವು ಮನುಷ್ಯನನ್ನು ಸಂಪೂರ್ಣವಾಗಿ ಆವರಿಸಿ ಸಾವಿನ ಪರಿಧಿಗೆ ದೂಡಿ ಬಿಡುತ್ತದೆ.

**ರೋಗ ನಿರ್ವಹಣೆ ಮತ್ತು ತಡೆಗಟ್ಟುವಿಕೆ :**

- ನಿತ್ಯಯೋಗ, ವ್ಯಾಯಾಮ, ವಿಶ್ರಾಂತಿ, ಕೈ ತೋಟ ನಿರ್ವಹಣೆ, ವೈವಿಧ್ಯ ಹಣ್ಣು ತರಕಾರಿಗಳ ಸೇವನೆ, ಹೊಸ ವಿಷಯಗಳ ಕಲಿಕೆಯಲ್ಲಿ ಆಸಕ್ತಿ, ಸಂತೋಷ ನೀಡುವ ಆಟ ಸಂಪೂರ್ಣ ನಿದ್ರೆ, ಚಿಂತೆಯಿಂದ ಮುಕ್ತತೆ, ನಗುವಿನೊಂದಿಗಿನ ಮಾತು ಇವೆಲ್ಲವುಗಳನ್ನು ರೂಢಿಸಿಕೊಂಡರೆ ಕಾಯಿಲೆಯನ್ನು ತಡೆಯಬಹುದು.

## ಮೌನದ ಸಾಧನೆ!

ಚೀನಾ ದೇಶದ ತತ್ವಜ್ಞಾನಿ ಕನ್‌ಫ್ಯೂಷಿಯಸ್ ಒಂದು ದಿನ ತನ್ನ ಶಿಷ್ಯರೆಲ್ಲರನ್ನು ಕುರಿತು, 'ಈ ಮನುಷ್ಯರಿಗೆ ಎಷ್ಟೇ ಒಳ್ಳೆಯ ವಿಷಯಗಳನ್ನು ಬೋಧಿಸಿದರೂ ಅವರು ಅವುಗಳನ್ನು ಪಾಲಿಸುತ್ತಿಲ್ಲ. ಆದ್ದರಿಂದ ನಾನು ಇನ್ನು ಮೌನವಾಗಿಯೇ ಇರುತ್ತೇನೆ!' ಎಂದರು.

ಇದನ್ನು ಕೇಳಿದ ಶಿಷ್ಯರು, 'ಗುರುಗಳೇ! ನೀವು ಮೌನವಾದರೆ ಬೇರೆ ಯಾರಿಗೂ ಏನನ್ನೂ ಬೋಧಿಸಲಾಗುವುದಿಲ್ಲ! ಅಲ್ಲದೆ ನಮಗೂ ಏನನ್ನೂ ನಿಮ್ಮಿಂದ ಕಲಿಯಲು ಸಾಧ್ಯವಾಗುವುದಿಲ್ಲ' ಎಂದರು. ಅದಕ್ಕೆ ಆ ಪರಮಜ್ಞಾನಿ ಕನ್‌ಫ್ಯೂಷಿಯಸ್ ಹೇಳಿದರು, 'ಆಕಾಶ ಮಾತನಾಡುತ್ತದೆಯೆ? ಇಲ್ಲ! ಆದರೂ ಋತುಮಾನ ತಕ್ಕ ಕಾಲದಲ್ಲಿ ತಾನೇ ಬದಲಾಗುತ್ತಾ ಇರುತ್ತದೆಯಲ್ಲವೆ? ಅದರಲ್ಲಿ ಬೇರೆಬೇರೆ ವಿಷಯಗಳು ಸೃಷ್ಟಿಯಾಗುತ್ತಲೇ ಇವೆ! ಆಗ ಆಕಾಶ ಮಾತನಾಡುತ್ತದೆಯೇ?' ಎಂದರು. ಇದನ್ನು ಕೇಳಿದ ಶಿಷ್ಯರು ಮೌನ ತಾಳಿದರು. 'ಆಡಂಬರದಿಂದ ಸಾಧಿಸಲಾಗದ ಕೆಲಸವನ್ನು ಸಹ 'ಮೌನ' ಸಾಧಿಸಿ ತೋರಿಸುತ್ತದೆ' ಎಂದರು ಜ್ಞಾನಿ ಕನ್‌ಫ್ಯೂಷಿಯಸ್.

(ಸಂಗ್ರಹ : ಡಾ. ಬಿ. ಗೋಪಾಲಕೃಷ್ಣರವರ ಉತ್ತಮ ಬಾಳುವೆಗೆ ಮಹಾನ್ ವ್ಯಕ್ತಿಗಳ ಜೀವನಾದರ್ಶ ಪುಸ್ತಕದಿಂದ)

# Problem of Rupee: Gold standard versus Gold exchange standards

**Dr. Anneshi R.**
Asst Professor,Dept of Economics,
ADB College.

Before 1835 in India multiple coins were in circulation and this was quite confusing East India Company (EIC) tried to solve this problem by unifying all the currencies. An act was passed to introduced the bimetallism (gold and silver). Due to the discovery of gold in various parts of Australia and California gold coins (Bad currency) were overvalued and drove the silver coins (Good currency) out of the market. In 1853, EIC stopped receiving any gold coins and tried to demonetise the gold currency This led to liquidity crisis and at the same time demand for silver coins aggavated. Government of India was not favour of introducing gold currency and prepared paper currency to improve the situation. So, in 1861 paper currency act was passed and paper currency was made the legal tender. But these paper and silver currencies were not enough to cope up with the increasing monitory demand. 1870, silver metal was discovered in south America and Mexico.

Due to this in 1873 the value of silver drastically fell down in terms of gold. Consequently there exchange rate and British imports got consequently there was a fall in the exchange rate and British imports got expensive, large scale minting of rupee at that time gave rise to light inflation. Suggestion was made to adot the gold standard and stop minting of silver coins. in 1898 to 1916, gold exchange standard were adopted and more as emphasis was running out of gold to pay back it remittances leading to an increase in the demand of rupee, as a result government of India started minting rupee to tackle the situation. This created inflationary pressure in the economy at that period of time.

Dr. B.R. Ambedkar studied this matter in depth and commented on whether the gold standard of gold exchange standard would be better for curb the inflation in a country like India. In this doctoral thesis he has mentioned that excess importance was given to exchange, rate stability rather than price stability. According to him exchange rate stability will benefit only the trading class not the poors in the economy. Poor's will be benefitted only when there is an internal stability.

Ambedkar asked a very relevant question, what is the purpose of money? is it how much gold we can purchase out of it. the obvious answer to this is how much commodities and services we can purchage out of it.

According to Babasaheb currency should be stable in terms of commodities not in terms of gold. He was against the concept of linking money supply with the gold. He pointed out that government under gold exchange standard tries to manipulate the curency to keep it pan with the gold value which not a good idea. Ambedkar was a strong believer of quantity theory of money. He did not like the idea that government should manage the flow at the currency. He was afraid that government will not be able to manage it properly. He was not in favour of giving the power to the government to expand the money supply without expanding the production of good and services.

Since it can lead to an unstable currency value. So he strongly opposed the managed currency system and supported gold standards with some modification.

# William Wordsworth

-**Hanumanthappa . H**

William Wordsworth was born in Cocker mouth, Cambria, England on April 7th, 1770.Words worth's mother died when he was eight this experience shapes much of his later work. Words worth attended Hawkshead Grammar school, where his love of poetry was firmly established and, it is believed, where he made his first attempts at verse. While he was at Hawkshead, Wordsworth's died leaving him and his four siblings orphans.

After Hawkshead, Wordsworth studied at St. John college in Cambridge and before his final semester, he set out on a walking tour of Europe -an experience that influenced both his poetry and his political sensibilities. While touring Europe, Wordsworth came into contact with the French Revolution.

Wordsworth's earliest poetry was published in 1793 in the collections an evening walk and descriptive sketches. Later that year, he married Mary Hutchinson, a childhood friend and they had five children together. In 1812, while living in Grasmere, two of their children Catherine and Jon died.

Equally important in the poetic life of wordsworth was his 1795 meeting with the poet Samuel Taylor Caleridge. It was with coleridge that Wordsworth published the famous Lyrical Ballads (J. and A. Arch) in 1798. While the poems themselves are some of the most influential in western literature. it is the preface to the second edition that remains one of the most important testaments to a poet's views on both his craft and his place in the world.

Wordsworth's most famous work The prelude (Edward Mosou, 1850) is considered by many to be the crowning achievement of English Romanticism. The poem, revised numerous times. Chronicles the spiritual life of the poet and marks the birth of a new genre of poetry. Although Wordsworth worked on The prelude throughout. His life, the poem was published posthmously. Wordsworth spent his final years settled at Rydal mount in England, traveling and continuing his outdoor excursions. Devastated by the death of his daughter, Dora in 1847. Wordsworth seemingly lost his will to compose poems.

**Major works**

**lyrical Ballads - 1798-1800**

1. Simon hee
2. We are seven
3. The Tables Turned
4. Lucy Gray
5. Michael

**Poems in two volumes (1807)**

1. Resolution and Independence
2. My heart heaps up
3. ode to duty
4. London, 1802
5. To the cuckoo
6. Laodania (1815, 1845)
7. Peter Bell (1819)
8. The prelude (1850)

**Death**

William Wordsworth died at Rydal mount on April 23, 1850, leaving his wife, Mary to publish The Prelude three months later.

# Medicinal uses of *Vinca Rosea*

**Nandini T M**
B.Sc., 1st Year

The Scientific name is *'Vinca Rosea'*. It is commonly known as bright eyes, cape periwinkle, Graveyard plant, Madagascar periwinkle, old maid, pink periwinkle, rosa periwinkle, is a pereunial species of flowering plant in the family apocynaceae. It is navtive and endemic to Madagascar. But crown else where as an ornamental and medical plant. It is a source of the drugs vincristine and viublastine, used to Heat cancer. It was formerly included in the gee vinca as vinca roses. It has many vernacular names among which are arivotaombelona or rivotambelona, touga, tougatse of trongatse tsimatiririnina and Voneuina.

Vinblastine and vineristine, chemotherapy medications used to treat several types of cancers are found in the plants and are biosynthesised from the coupling of the alkaloids catharathine and viudoline. The semi-synthetic chemotherapeutic agent vinorelbine, used in the treatment of non-small-cell lung cancer can be prepared either from Vindoline and catharauthine of from the vinca alkaloid leurosine, in both cases via aulyedrovinblastine. The insulin-stimulating vincoline has been isolated from the plants.

Vinca Rosea can be extremely toxic if consumed orally by humans and is cited (under its synonym Vinca rosea). In the Lousisiana state Act 159 all parts of the plants are poisonous on consumption, synetoms consists of mild stomach armps, cardiac complications, hypotention, Systematic paralysis eventually leading to death.

Its natural rage along the dry coats of souther, Madagascar, catharauthus roseus is considered weedy and invasive, often self seeding prolifically in distributed areas along road sides and in fallows fields. It is also however, widely cultivated and is naturalized in sub tropical and tropical areas of the world, such as Australia, Bangladesh, India, Malaysia, Pakistan and the US. it is so well adopted to growth in Australia that is listed as a noxious weed in western Australia and the australian capital territory and also is parts of Eastern queenland.

# ಗಮಕ ಕಲೆ

– ಡಾ॥ ಎ.ಎಂ. ರಾಜಶೇಖರಯ್ಯ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ

ಗಮಕ ಕಲೆ ಎನ್ನುವುದು ಕನ್ನಡ ನಾಡಿನಲ್ಲಿ ತುಂಬಾ ಪ್ರಾಚೀನವಾದುದು. ಕ್ರಿ.ಪೂ. 1ನೇ ಶತಮಾನದಲ್ಲಿ ಗಮಕ ಕಲೆ ರೂಢಿಯಲ್ಲಿತ್ತು ಎನ್ನುವುದಿದೆ. ವಾಲ್ಮೀಕಿ ಮಹರ್ಷಿಯು ಲವ-ಕುಶರಿಂದ ರಾಮಾಯಣ ಕಾವ್ಯವನ್ನು ಗಮಕ ಶೈಲಿಯಲ್ಲಿ ಹೇಳಿಸಿದನೆಂದು ಅದೇ ಕಾವ್ಯದಲ್ಲಿ ತಿಳಿಯುತ್ತದೆ.

ಗಮಕ ಎಂದರೆ ಗಾಯನವನ್ನು ಮನಸ್ಸಿಗೆ ತಲುಪಿಸುವ ಕಾವ್ಯವೇ ಗಮಕ.

ಪದ್ಯ ಹಾಗೂ ಚಂಪೂ ಕಾವ್ಯವನ್ನು ರಾಗಬದ್ಧವಾಗಿ ಓದುವ ಒಂದು ವಿಶಿಷ್ಟ ಪದ್ಧತಿ. ಗಮಕ ಎಂದರೆ ಕಾವ್ಯ ವಾಚಿಸುವ ಒಂದು ಕ್ರಮ. ರಾಗಯುಕ್ತವಾಗಿರಬೇಕಾದದ್ದು ಗಮಕ. ಕಾವ್ಯದ ರಸಕ್ಕೆ ಅನುಗುಣವಾಗಿರಬೇಕು. ಅಲ್ಲದೇ ಸಾಹಿತ್ಯ ಪ್ರಧಾನವಾಗಿರಬೇಕು ಮತ್ತು ಕಾವ್ಯದ ಅರ್ಥ ಜನರಿಗೆ ಸುಲಭವಾಗಿ ಗೊತ್ತಾಗುವಂತೆ ವಾಚನ ಮಾಡಬೇಕು ಸಾಹಿತ್ಯ ದೇವಿಯ ಅಡಿದಾವರೆಯೇ ಗಮಕ.

ಇತ್ತೀಚಿಗೆ ಗಮಕ ಎನ್ನುವುದು ಯಾವ ವಯಸ್ಸಿನವರಿಗೆ, ಯಾವ ಜಾತಿಯವರಿಗೆ ಎನ್ನುವಂತಾಗಿದೆ. ಗಮಕ ಯಾರು ಬೇಕಾದರೂ ಹಾಡಬಹುದು ಕೇಳಬಹುದು. ಇದು ಜಾತ್ಯಾತೀತವಾಗಿ ಗೌರವಿಸುವ ಕಲೆ, ಸಾಹಿತ್ಯದ ಅಭಿರುಚಿ ಉಳ್ಳವರು ಗಮಕ ಕಲಿಯಲು ಸಾಧ್ಯ. ಅನೇಕ ಅನಕ್ಷರಸ್ಥ ಜನ ಸಂಗೀತ ಕಲಿಯದಿದ್ದರೂ ಹಳಗನ್ನಡ, ನಡುಗನ್ನಡ ಕಾವ್ಯಗಳನ್ನು ಸರಳವಾಗಿ, ಸುಶ್ರಾವ್ಯವಾಗಿ ಹಾಡುತ್ತಿದ್ದರು. ಸಂಗೀತ ಕಲಿತರಷ್ಟೆ ಗಮಕವಲ್ಲ. ಸಂಗೀತ ಗೊತ್ತಿದ್ದರೆ ಇನ್ನೂ ಒಳ್ಳೆಯ ರಾಗಬದ್ಧವಾಗಿ ಹಾಡಬಹುದು. ಆದರೆ ಅನೇಕ ಅಕ್ಷರ ವಂಚಿತ ಹಿರಿಯರು ಗಮಕವನ್ನು ದಿನನಿತ್ಯ ರಾಮಾಯಣ, ಮಹಾಭಾರತ, ಆದಿಪುರಾಣ, ಗದಾಯುದ್ಧ, ಭಾಗವತ, ಕುಮಾರವ್ಯಾಸ ಭಾರತ, ವಚನ, ನೀತಿಸಾರಗಳನ್ನು ನಿರರ್ಗಳವಾಗಿ ಹಾಡುತ್ತಿದ್ದರು.

ಕವಿರಾಜ ಮಾರ್ಗಕಾರ ಅನಕ್ಷರಸ್ಥ ಜನಪದೀಯರನ್ನು ಕುರಿತಾಗಿ "ಕುರಿತೋದದೆಯಂ ಕಾವ್ಯಪ್ರಯೋಗ ಪರಿಣತಿಮತಿಗಳ್" ಎಂದಿದ್ದಾನೆ. ನಮ್ಮ ಹಿರಿಯರು ಶಾಲೆಗೆ ಹೋಗದೇ ಮಹಾಕಾವ್ಯಗಳನ್ನು ಕೇಳುತ್ತಾ ಹೇಳುತ್ತಾ ಸಾಹಿತ್ಯ ಪ್ರಜ್ಞೆ ಬೆಳೆಸಿಕೊಂಡವರು. ಹಿಂದೆ ಕಟ್ಟೆಯ ಮೇಲೆ, ದೇವಾಸ್ಥಾನಗಳಲ್ಲಿ ಗಮಕ ಹಾಡುವ ಕಲೆ ರೂಢಿಸಿಕೊಂಡಿದ್ದರು.

ಮಹಾಕಾವ್ಯಗಳನ್ನು ಜನರಿಗೆ ಅರ್ಥವಾಗುವ ಹಾಗೆ ಹೇಳುತ್ತಾ ನಮ್ಮ ಬದುಕಿಗೆ ಬೇಕಾದ ಮೌಲ್ಯಗಳನ್ನು ತಿಳಿಸುತ್ತಿದ್ದರು. ಗಮಕವನ್ನು ಮೊದಲು ಒಬ್ಬರೇ ಹೇಳುತ್ತಿದ್ದರು. ಇತ್ತೀಚಿಗೆ ವಾಚನ ಮತ್ತು ವ್ಯಾಖ್ಯಾನಕಾರರು ಗಮಕ ಕಲೆಯನ್ನು ನಡೆಸಿಕೊಡುತ್ತಾರೆ. ಗಮಕವು ಒಂದು ಪಂಡಿತಕಲೆ. ಪಾಂಡಿತ್ಯ ಮತ್ತು ಕಲಾವಂತಿಕೆ ಎರಡರ ಸಮಪಾಕವಾಗಿ ಬರುವುದರಿಂದ ಇದು ಸಮಾಜಕ್ಕೆ ಬಹುಪ್ರಿಯ.

ಗಮಕವನ್ನು ಹೇಗೆ ಹಾಡಬೇಕು ಎಂದು ಕವಿರಾಜ ಮಾರ್ಗ, ಆದಿಪುರಾಣ, ಗದುಗಿನ ಭಾರತ, ಭರತೇಶ ವೈಭವದಲ್ಲಿ ಮೂಡಿಬಂದಿದೆ. ನೀತಿಸಾರದಲ್ಲಿ ಗಮಕವನ್ನು ಕುರಿತಾಗಿ – ಎಡವದೆ, ತಡವರಿಸದೇ ತಲೆ ಕೊಡಹದೆ, ಕರ್ಕಶವಾಗಿ ಹೇಳದೇ ಎಲ್ಲರ ಮನಸ್ಸಿಗೆ ತಟ್ಟುವಂತೆ ಕಾವ್ಯವಾಚನ ಮಾಡುವುದು ಗಮಕ ಕಲೆ ಎಂದಿದೆ.

ಗಮಕವನ್ನು ಹಾಡುವುದರಿಂದ ತುಂಬಾ ಲಾಭಗಳಿವೆಯಂತೆ. ಕಾವ್ಯಗಳು ವ್ಯಕ್ತಿಯನ್ನು ಸುವಿಚಾರಿಯನ್ನಾಗಿಸುತ್ತದೆ. ಸದಾ ಆಲೋಚನೆಯಲ್ಲಿ ತೊಡಗಿಸುತ್ತದೆ.

ಕುಮಾರವ್ಯಾಸನು ಗಮಕವನ್ನು ಹಾಡುವುದರಿಂದ ವೇದಪಾರಾಯಣದ ಫಲ ಸಿಗುತ್ತದೆ, ಗಂಗಾದಿ ತೀರ್ಥಸ್ನಾನ ಸಿದ್ಧಿಸುತ್ತದೆ, ತಪಸ್ಸಿನ ಫಲ ಸಿದ್ಧಿಯಾಗುತ್ತದೆ. ಕನ್ಯಾದಾನ ಫಲ ಮುಂತಾಗಿ ಅನೇಕ ಲಾಭಗಳು ದೊರಕುತ್ತವೆ ಎಂದಿದ್ದಾನೆ.

**1. ಎಂ. ಚಿದಾನಂದಮೂರ್ತಿಯವರು :** "ಗಮಕಿಯು ಕಾವ್ಯಕ್ಕೆ ಮತ್ತು ಸಹೃದಯರಿಗೂ ಮಧ್ಯವರ್ತಿ ಯಾದವನು, ಸಮಾಜದಲ್ಲಿ ಗಮಕಿಗೆ ಕವಿಯಷ್ಟು

ಪ್ರಮುಖ ಸ್ಥಾನವಿರದಿದ್ದರೂ ಕವಿಯ ನಂತರದ ಸ್ಥಾನ ಗಮಕಿಗೆ" ಎಂದಿದ್ದಾರೆ.

**2. ಜಿ. ವೆಂಕಟಸುಬ್ಬಯ್ಯನವರು :** ಒಬ್ಬ ಕವಿಯ ಕಾವ್ಯವನ್ನು ಗಮಕಿಯು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾನೆಂಬುದು ಅವನ ವಾಚನದಲ್ಲಿ ವ್ಯಕ್ತವಾಗುತ್ತದೆ.

**3. ಎಂ.ವಿ. ಸೀತಾರಾಮಯ್ಯನವರು :** ಛಂದೋಲಯ ಅರ್ಥಯತಿ ಶಬ್ದಾರ್ಥಗುಣ ಇವುಗಳ ಸಮನ್ವಯ ಸಿದ್ಧಿಯಿಂದ ಕೂಡಿದ ಕಾವ್ಯದ ವಾಚಕ ನಿರೂಪಣೆಯೇ ಗಮಕ ಎಂದಿದ್ದಾರೆ. ಹಾಗಾಗಿ ಗಮಕದಲ್ಲಿ ಪದ್ಯ-ಗದ್ಯಗಳು ಸಮನ್ವಯವಾಗಿರಬೇಕು. ದಾಂಪತ್ಯದಂತಿರಬೇಕು ಪದ್ಯಗದ್ಯಗಳು ಸಮನ್ವಯತೆಯಿಂದಿದ್ದರೆ ಉತ್ತಮವಾದ ಗಮಕವಾಗಲು ಸಾಧ್ಯ.

ಇಂದಿನ ಯುವಪೀಳಿಗೆ ಆಧುನಿಕದ ಎಲ್ಲಾ ಪ್ರಭಾವಗಳಿಗೆ ಒಳಗಾಗಿ ಸಾಹಿತ್ಯ-ಸಂಸ್ಕೃತಿಯಿಂದ ಅದರಲ್ಲೂ ಪ್ರಾಚೀನ ಮಹಾಕಾವ್ಯಗಳಿಂದ ದೂರಪರುತ್ತಾರೆ. ಆಧುನಿಕದ ಪ್ರಭಾವದ ಪರಿಣಾಮ ಯುವಕರು ಹಣದ ಗೀಳಿಗೆ ಜೋತುಬಿದ್ದು ತಮ್ಮತನವನ್ನು ಹಾಗೂ ನಾಡಿನ ವಿಶೇಷತೆಯನ್ನು ಮರೆಯುತ್ತಿದ್ದಾರೆ. ಗಮಕ ಕಲೆ ಉಳಿಯಬೇಕಾದರೆ ಪ್ರತಿಯೊಂದು ಮನೆಯಲ್ಲಿ ಯಾವುದೇ ಕಾರ್ಯಕ್ರಮವಿರಲಿ ಹುಟ್ಟುಹಬ್ಬ, ಮದುವೆ, ಅನೇಕ ಶುಭಕಾರ್ಯಗಳಲ್ಲಿ ಅರ್ಧತಾಸು ಇಲ್ಲವೇ ಒಂದು ತಾಸು ಗಮಕಿಗಳಿಂದ ವಾಚನ-ವ್ಯಾಖ್ಯಾನ ಮಾಡಿಸಿದರೆ ಗಮಕ ಕಲೆ ಉಳಿದೀತು.

ಶಿವಮೊಗ್ಗದ ಪಕ್ಕದ ಹಳ್ಳಿ ಹೊಸಳ್ಳಿ. ಇಲ್ಲಿ ಹಿರಿಯ ಚೇತನ ಹೆಚ್.ಆರ್. ಕೇಶವಮೂರ್ತಿಯವರ ಮಾರ್ಗದರ್ಶನದಲ್ಲಿ ಪ್ರತಿ ಮನೆಯಲ್ಲಿ ಎಲ್ಲಾ ವಯಸ್ಸಿನವರು ಸುಶ್ರಾವ್ಯವಾಗಿ ಗಮಕ ಹಾಡುವುದರಿಂದ ಗಮಕ ಗ್ರಾಮವೆಂದೇ ಕರೆಸಿಕೊಂಡಿದೆ. ಹಾಗಾಗಿ ಎಲ್ಲಾ ಊರುಗಳಲ್ಲಿ ಪ್ರತಿಯೊಂದು ಮನೆಯಲ್ಲಿ ಹಳಗನ್ನಡ ಕಾವ್ಯಗಳನ್ನು ಅಧ್ಯಯನ ಮಾಡಿ ಹಾಡಿನ ಮೂಲಕ ಪ್ರಸ್ತುತಪಡಿಸಿದರೆ ಸಾಹಿತ್ಯದ ಒಲವು ಬೆಳೆದೀತು – ಗಮಕ ಕಲೆ ಉಳಿದೀತು.

## ಕವನಗಳು

ಜ್ಞಾನದ ಬುತ್ತಿ ಬಿಚ್ಚಿ
ಅಜ್ಞಾನದ ಬುತ್ತಿ ನಶಿಸಿ
ಸರ್ವರಲ್ಲೂ ಜ್ಞಾನದ
ಜ್ಯೋತಿ ಬೆಳಗಿಸೆಂದ

ತಾಯಿಗೆ ಮಗುವಾದೇ
ತಂದೆಗೆ ಮಗನಾದೇ
ಪ್ರಪಂಚವೇ ನಿನ್ನನ್ನು
ಗುರುತಿಸುವ ಮಾನವನಾಗು

**– ಎಂ. ಸರಸ್ವತಿ**
ಬಿ.ಎ. 3ನೇ ಸೆಮಿಸ್ಟರ್

## ಕವನಗಳು

ತಡವಾಗಿ ಸಿಗುವ ಯಶಸ್ಸು
ವ್ಯಕ್ತಿತ್ವ ರೂಪಿಸುತ್ತದೆ
ತಕ್ಷಣವೇ ಸಿಗುವ ಯಶಸ್ಸು ಅಹಂಕಾರ
ಸೃಷ್ಟಿಸುತ್ತದೆ

ಕೈಯಲ್ಲಿರುವ ರೇಖೆ ಹೇಳುವ ಭವಿಷ್ಯ ನಂಬಬೇಡಿ
ಏಕೆಂದರೆ ಕೈ ಇಲ್ಲದವರಿಗೂ ಭವಿಷ್ಯ ಇರುತ್ತದೆ

ಸಾಧನೆಯ ಹಾದಿಯಲಿ
ಸಮಸ್ಯೆಗಳು ನೂರೆಂಟು
ಎದುರಿಸಿ ಸಾಗುವವನಿಗೆ
ಮಾತ್ರ ಗೆಲುವುಂಟು

**– ಚಂದ್ರಿಕಾ ಕೆ.**
ಬಿ.ಎಸ್ಸಿ. 4ನೇ ಸೆಮಿಸ್ಟರ್

# ಸುವಾಸನೆ ಬೀರುವ ಕಸ್ತೂರಿ ಮೃಗ

– ಸೌಮ್ಯ ಟಿ.ಹೆಚ್.ಎಂ.
ಪ್ರಾಣಿಶಾಸ್ತ್ರ ವಿಭಾಗ

'ಕತ್ತೆಗೇನು ಗೊತ್ತು ಕಸ್ತೂರಿಯ ಗಂಧ' ಎಂಬುದು ಹಳೆಯ ಗಾದೆ ಮಾತು. ಕಸ್ತೂರಿಯ ಸುವಾಸನೆಯು ಬಹಳ ಪ್ರಸಿದ್ಧ. ನೈಜವಾದ ಕಸ್ತೂರಿ ಉತ್ಪಾದನೆಯಾಗುವುದು ಕಸ್ತೂರಿ ಮೃಗ ಎಂಬ ಜಿಂಕೆ ಜಾತಿಯ ಪ್ರಾಣಿಯ ಗ್ರಂಥಿಗಳಲ್ಲಿ. ಕಸ್ತೂರಿ ಪರಿಮಳ ಸೂಸುವಾಗ ಕಸ್ತೂರಿ ಮೃಗಕ್ಕೆ ಆ ಸುವಾಸನೆ ಎಲ್ಲಿಂದ ಬರುತ್ತದೆ ಎಂದು ತಿಳಿಯದೇ, ಇಡೀ ಕಾಡಿನಲ್ಲಿ ಓಡಾಡಿ ಸುಸ್ತು ಮಾಡಿಕೊಳ್ಳುತ್ತದೆಯಂತೆ. ಹೀಗೆ ಬಳಲಿದ ಪ್ರಾಣಿಯನ್ನು ಬೇಟೆಗಾರರು ಸುಲಭವಾಗಿ ಹಿಡಿದುಕೊಂಡು ಅದರ ಗ್ರಂಥಿಯಿಂದ ಕಸ್ತೂರಿಯನ್ನು ಹೊರತೆಗೆಯುತ್ತಾರಂತೆ. ಇದು ಎಷ್ಟು ಸತ್ಯ ಮಾತೋ ಗೊತ್ತಿಲ್ಲ. ಆದರೆ ಬಹು ಸಮಯದಿಂದ ಪ್ರಚಲಿತವಿರುವ ಸಂಗತಿ.

ಶಾಂತವಾಗಿರುವ ಇವುಗಳು ಹೆದರಿಕೆಯಾದಾಗ ಭುಸುಗುಟ್ಟುವುದಿದೆ. ಸುವಾಸನೆ ಹೊಂದಿರುವ ಕಸ್ತೂರಿ ಗ್ರಂಥಿ ಇರುವುದು ಗಂಡು ಮೃಗದ ಹೊಟ್ಟೆಯ ಭಾಗದಲ್ಲಿ ಮಾತ್ರ. ಈ ಪರಿಮಳ ಬೀರುವ ಗ್ರಂಥಿಗಳೇ ಈ ಮೃಗಗಳಿಗೆ ಶತ್ರುವಾಗಿ ಪರಿಣಮಿಸಿದೆ. ಇದರ ಸುವಾಸನಾ ಕಸ್ತೂರಿಗಾಗಿ ಇದರ ಹತ್ಯೆ ನಡೆಯುತ್ತದೆ. ಈ ಕಾರಣದಿಂದಲೇ ಕಸ್ತೂರಿ ಮೃಗಗಳ ಸಂಖ್ಯೆ ಬಹಳಷ್ಟು ಕಮ್ಮಿಯಾಗಿದೆ. ಗಂಡು ಕಸ್ತೂರಿ ಮೃಗಗಳ ಹೊಟ್ಟೆಯ ಭಾಗದಿಂದ ಇವುಗಳನ್ನು ಕೊಲ್ಲದೆಯೂ ಆ ಸುವಾಸನಾ ಚೀಲವನ್ನು ತೆಗೆಯಬಹುದಾದರೂ ಬಹುತೇಕರು ಕೊಂದು ತೆಗೆಯುವುದೇ ಸುಲಭ ಮಾರ್ಗವೆಂದು ತಿಳಿದುಕೊಂಡಿದ್ದಾರೆ. ಇಡೀ ಚೀಲದಲ್ಲಿ ಕೇವಲ 25 ರಿಂದ 30 ಗ್ರಾಂ ಕಸ್ತೂರಿ ಸಿಗಬಹುದು. ಆದರೆ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಗ್ರಾಂ ಕಸ್ತೂರಿಗೆ ಸಾವಿರಾರು ರೂಪಾಯಿ ಮೌಲ್ಯವಿರುವ ಕಾರಣ ಇದನ್ನು ಪಡೆಯಲು ಬೇಟೆಗಾರರು ಮೃಗವನ್ನು ಕೊಲ್ಲುತ್ತಾರೆ. ಕಸ್ತೂರಿ ಮೃಗವು ಈಗ ವಿನಾಶದ ಅಂಚಿನಲ್ಲಿರುವ ಜೀವಿ ಎಂದು ಘೋಷಣೆಯಾಗಿದೆ.

ಕಸ್ತೂರಿ ಎಂಬ ಪದವು ಪರಿಮಳಕ್ಕೆ ಅಥವಾ ಅದೇ ರೀತಿಯ ಪರ್ಯಾಯ ಪದವಾಗಿ ಬಳಕೆಯಾಗುವುದರಿಂದ ನಮ್ಮ ಹಲವು ವಸ್ತು, ವಿಷಯಗಳಿಗೆ ಕಸ್ತೂರಿ ಪದವನ್ನು ಬಳಸುವುದು ಸಾಮಾನ್ಯವಾಗಿದೆ. ಉದಾಹರಣೆಗೆ ಕಸ್ತೂರಿ ಅರಸಿನ, ಕಸ್ತೂರಿ ಮಾವು, ಕಸ್ತೂರಿ ಮಲ್ಲಿಗೆ, ಕನ್ನಡ ಕಸ್ತೂರಿ, ಕಾಮ ಕಸ್ತೂರಿ. ಕಸ್ತೂರಿ ಮೃಗವು ಅಳಿವಿನಂಚಿಗೆ ಬಂದು ನಿಂತಿದೆ. ಅದಕ್ಕೆ ಕಾರಣ ಮಾನವರ ಸ್ವಾರ್ಥ, ಅದನ್ನು ಮಾನವರು ಬಿಡಬೇಕು. ಇಂತಹ ಅಪರೂಪದ ಪ್ರಾಣಿಗಳನ್ನು ಸಂರಕ್ಷಿಸಬೇಕು.

ಕಸ್ತೂರಿಯನ್ನು ಒಣಗಿಸಿ ಪುಡಿ ಮಾಡಿ ಅದನ್ನು ಔಷಧಿಯಾಗಿ ಬಳಸುತ್ತಾರೆ.

* ಕೋಮಾ.
* ಹೃದಯ ಸಮಸ್ಯೆ.
* ನರಗಳ ವೈಫಲ್ಯತೆ.
* ಗಾಯವಾದಾಗ.
* ಕೆಟ್ಟ ವಾಸನೆಯನ್ನು ನಿವಾರಿಸುತ್ತದೆ (ದುರ್ಗಂಧನಾಶನ).
* ಶೀತವನ್ನು ನಿವಾರಿಸುತ್ತದೆ.
* ರಕ್ತ ಪರಿಚಲನೆಯನ್ನು ಸುಧಾರಿಸುತ್ತದೆ.
* ಜೀರ್ಣಶಕ್ತಿಯನ್ನು ಸುಧಾರಿಸುತ್ತದೆ.
* ಕ್ಯಾನ್ಸರ್

ಹೀಗೆ ಇನ್ನು ಹಲವಾರು ಕಾಯಿಲೆಗಳಿಗೆ ಕಸ್ತೂರಿಯನ್ನು ಚಿಕಿತ್ಸೆಯಾಗಿ ಬಳಸುತ್ತಾರೆ.

# ರಾಜ್ಯಶಾಸ್ತ್ರ : ಭವ್ಯ ಭಾರತದ ರಾಜಕೀಯ ವ್ಯವಸ್ಥೆ

– ತೆಲಗಿ ಷಫಿವುಲ್ಲಾ
ರಾಜ್ಯಶಾಸ್ತ್ರ ವಿಭಾಗ

**ರಾಜ್ಯಶಾಸ್ತ್ರ : ಭವ್ಯ ಭಾರತದ ರಾಜಕೀಯ ವ್ಯವಸ್ಥೆ :**

ರಾಜ್ಯಶಾಸ್ತ್ರವು ರಾಜ್ಯ ಸರ್ಕಾರ ಸಂವಿಧಾನ, ಕಾನೂನುಗಳು, ಹಕ್ಕು, ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆ, ಮೂಲಭೂತ ಹಕ್ಕುಗಳು, ರಾಜಕೀಯ ಪಕ್ಷಗಳು ಸರ್ಕಾರದ ವಿವಿಧ ಸಂಸ್ಥೆಗಳ ಬಗ್ಗೆ ಅಧ್ಯಯನ ಮಾಡುವುದರ ಜೊತೆಗೆ, ವಿಶ್ವದ ವಿವಿಧ ರಾಷ್ಟ್ರಗಳು ಮತ್ತು ವಿಶ್ವಸಂಸ್ಥೆಯ ಬಗ್ಗೆ ಅಧ್ಯಯನ ನಡೆಸುತ್ತದೆ.

ಭಾರತವು ಬಹುಧರ್ಮಗಳು, ಬಹುಸಂಸ್ಕೃತಿಗಳು, ವಿಭಿನ್ನ ಭಾಷೆಗಳನ್ನು ಹೊಂದಿದ್ದರೂ, ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ್ದು, ಭಾರತದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವುದರ ಮೂಲಕ, ನಾವೆಲ್ಲರೂ ಒಂದೇ, ನಾವೆಲ್ಲರೂ ಭಾರತೀಯರು ಎಂಬ ಮನೋಭಾವನೆಯನ್ನು ಮೂಡಿಸಿ, ಸ್ವಾತಂತ್ರ ಸಮಾನತೆ ಮತ್ತು ಸಹೋದರತೆ ಎಂಬುದು ನಮ್ಮ ದೇಶದ ಸಂವಿಧಾನದ ಮುಖ್ಯ ಉದ್ದೇಶವಾಗಿರುತ್ತದೆ. ಭಾರತದಲ್ಲಿ ಸಾರ್ವಜನಿಕ ಆಡಳಿತದ ಮೂಲಕ ಸರ್ಕಾರ ಜನರ ಸರ್ವರೀತಿಯ ಅಭಿವೃದ್ಧಿ ಸಾಧಿಸುತ್ತದೆ. ಭಾರತವು ವಿಶ್ವದ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು, ವಿಶ್ವದ 5ನೇ ದೊಡ್ಡ ಆರ್ಥಿಕತೆ ಮತ್ತು ವಿಶ್ವದ ಅಭಿವೃದ್ಧಿ ಹೊಂದುತ್ತಿರುವ 2ನೇ ರಾಷ್ಟ್ರವಾಗಿದ್ದು ವಿಶ್ವದ 10 ಬಲಿಷ್ಠ ರಾಷ್ಟ್ರಗಳಲ್ಲಿ ಒಂದಾಗಿದೆ. ಇಂತಹ ಭಾರತ ದೇಶವು ಮುಂದಿನ ದಿನಗಳಲ್ಲಿ ವಿಶ್ವದ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವುದರ ಮೂಲಕ, ವಿಶ್ವದ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ವೈಜ್ಞಾನಿಕ, ತಾಂತ್ರಿಕ, ಕೃಷಿ ಕೈಗಾರಿಕೆ, ಸಾರಿಗೆ ಸಂಪರ್ಕಗಳ ಅಭಿವೃದ್ಧಿಯನ್ನು ಸಾಧಿಸಿ ವಿಶ್ವದಲ್ಲಿಯೇ ಒಂದು ಶಕ್ತಿಶಾಲಿ ರಾಷ್ಟ್ರವಾಗಿ ಹೊರಹೊಮ್ಮುವುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳಬಹುದು.

# ಕೆರೆ ನೀರಿಗೆ ಕಡಿವಾಣವಿದ್ದರೂ

ಕೆರೆ ನೀರಿಗೆ ಕಡಿವಾಣವಿದ್ದರೂ ಕಂಚಿನ
ಕೊಡವಾನ ಹಿಡಿದು ನೀರು ತರಲು ಹೋದ ನೀನು
ಕಂಚಿನ ಕಂಠದಿ ಹಾಡುವುದ ಕೇಳಿ
ನನ್ನ ಮನ ಇಂಪಾಯಿತು.
ತಿಳಿದಿದೆ ನನಗೆ ಆಗಸಕೆ ರಂಗೆರೆಚಿದವಳು ನೀನೆ ಎಂದು
ನೀನು ನಕ್ಕು ನಗುವಾಗ, ಕಲ್ಲು ಶಿಲೆಯಾಯಿತು
ನೀನು ಹಾಡೋ ಹಾಡಿಗೆ ಕವಿಗಳಿಗೆ ಉಸಿರು ಬಂದಿತು.
ನಿನ್ನ ಈ ಮೊನಾಲಿಸಾ ನಗೆಯ ವರ್ಣಿಸಲು
ನನ್ನಲ್ಲಿ ಪದಗಳಿಲ್ಲದಂತಾಯಿತು.

– ಡಿ. ಹರೀಶ್
ಬಿ.ಎಸ್ಸಿ. 2ನೇ ಸೆಮಿಸ್ಟರ್

# ವ್ಯಕ್ತಿತ್ವ (ಮನೋವಿಜ್ಞಾನ)
# Personality

– ಡಾ. ಎ. ಸುವರ್ಣ ಆರುಂಡಿ ನಾಗರಾಜ್
ಉಪನ್ಯಾಸಕರು

**ಪೀಠಿಕೆ :** ಸರಿಯಾದ ಅರ್ಥದ ಅರಿವಿಲ್ಲದೇ ಅತಿಯಾದ ಬಳಕೆಯಲ್ಲಿರುವ ಮನೋವಿಜ್ಞಾನದ ಪದವೆಂದರೆ 'ವ್ಯಕ್ತಿತ್ವ' ಹೇಗೆಂದರೆ ಸದೃಢ ಅಂಗಾಂಗಗಳನ್ನು ಹೊಂದಿರುವ ವ್ಯಕ್ತಿಯನ್ನು ನೋಡಿದಾಗ 'ಅಬ್ಬಾ ಎಂತಹ ಪರ್ಸನಾಲಿಟಿ (ವ್ಯಕ್ತಿತ್ವ)!' ಎಂದುಕೊಳ್ಳುತ್ತೇವೆ. ಹಾಗೆಯೇ ಕೃಶನಾಗಿರುವ ವ್ಯಕ್ತಿಯನ್ನು ನೋಡಿದಾಗ ಇವನಿಗೆ ಹೇಳಿಕೊಳ್ಳುವಂತಹ ವ್ಯಕ್ತಿತ್ವವೇ ಇಲ್ಲ ಎಂದುಕೊಳ್ಳುತ್ತೇವೆ. ಹಾಗೆಯೇ ಎಲುಬಿನ ಹಂದರವಾಗಿದ್ದ ಮಹಾತ್ಮ ಗಾಂಧೀಜಿಯನ್ನು, ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಹೇಳುವಾಗ 'ಅದ್ಭುತ ವ್ಯಕ್ತಿತ್ವ ಹೊಂದಿದ್ದಾರೆ' ಎನ್ನುತ್ತೇವೆ. ಹೀಗೆ ಅನೇಕ ಸಂದರ್ಭಗಳಲ್ಲಿ ಬೇರೆ ಬೇರೆ ಹಿನ್ನೆಲೆಯಲ್ಲಿ 'ವ್ಯಕ್ತಿತ್ವ' ಎಂಬ ಪದವನ್ನು ಬಳಸುತ್ತೇವೆ.

ಮಗುವಿನ ಸರ್ವತೋಮುಖ ವ್ಯಕ್ತಿತ್ವ ವಿಕಾಸವೇ ಶಿಕ್ಷಣದ ಪ್ರಮುಖ ಗುರಿಯಾಗಿರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ವ್ಯಕ್ತಿತ್ವಕ್ಕೆ ಹೆಚ್ಚಿನ ಪ್ರಾಧಾನ್ಯತೆ ಇದೆ.


**ವ್ಯಕ್ತಿತ್ವ ಎಂಬ ಪದದ ಅರ್ಥ :**

ಹಿಂದೆ ಪ್ರಾಚೀನ ಗ್ರೀಕ್‌ನಲ್ಲಿ ರಂಗಮಂಟಪದ ಮೇಲೆ ಕಲಾಕಾರರು ನೇರವಾಗಿ ಕಾಣಿಸಿಕೊಳ್ಳದೆ ಪಾತ್ರಗಳಿಗೆ, ಸನ್ನಿವೇಶಗಳಿಗೆ ತಕ್ಕಂತೆ ವಿವಿಧ ಮುಖವಾಡಗಳನ್ನು ಧರಿಸುವ ಮೂಲಕ ಪಾತ್ರಧಾರಿಗಳು ಜನರ ಮೇಲೆ ಪ್ರಭಾವ ಬೀರುತ್ತಿದ್ದರು. ಆ ಮುಖವಾಡಗಳಿಗೆ ಗ್ರೀಕ್ ಭಾಷೆಯಲ್ಲಿ ಪರ್ಸೋನೆ / ಪರ್ಸೋನಾ ಎನ್ನುತ್ತಿದ್ದರು ಈ ಮುಖವಾಡಗಳ ಪ್ರಭಾವದ ಜೊತೆಗೆ ಬಾಹ್ಯವರ್ತನೆ ಅಥವಾ ಬಾಹ್ಯನೋಟಕ್ಕೆ ಸಂಬಂಧಿಸಿದಂತೆ ವ್ಯಕ್ತಿತ್ವ ಅಥವಾ ಪರ್ಸನಾಲಿಟಿ ಬಳಸಲಾಯಿತು. ಹೀಗಾಗಿ ಇಂದಿಗೂ ಒಬ್ಬ ವ್ಯಕ್ತಿಯ ಮೈಕಟ್ಟು, ನಿಲುವು, ಧ್ವನಿ, ಹಾವಭಾವಗಳನ್ನು ಆಧಾರವಾಗಿಟ್ಟುಕೊಂಡು 'ವ್ಯಕ್ತಿತ್ವ' ಎನ್ನುವ ಪದವನ್ನು ಬಳಕೆ ಮಾಡಲಾಗುತ್ತದೆ. ಆದರೆ ಮನೋವೈಜ್ಞಾನಿಕ ದೃಷ್ಟಿಯಿಂದ ವ್ಯಕ್ತಿತ್ವವು ಕೇವಲ ಬಾಹ್ಯ ಅಂಶಗಳಿಗೆ ಸೀಮಿತವಾಗದೆ ಇದು ವ್ಯಕ್ತಿಯ ಹಲವಾರು ವಿಶೇಷ ಗುಣಧರ್ಮಗಳ ಸಂಘಟಿತ ಮೊತ್ತವಾಗಿದೆ.

'ವ್ಯಕ್ತಿತ್ವ' ಎನ್ನುವ ಪದ ಆಂಗ್ಲಭಾಷೆಯ personality ಎನ್ನುವ ಪದಕ್ಕೆ ಸಮಾನವಾಗಿದೆ. ಈ personality ಎನ್ನುವ ಪದ ಲ್ಯಾಟಿನ್ ಭಾಷೆಯ persona ಎಂಬ ಪದದಿಂದ ಬಂದಿದೆ. Persona ಎಂದರೆ ಕನ್ನಡದಲ್ಲಿ ಮುಖವಾಡ, ಛದ್ಮವೇಷ, ಮಾರುವೇಷ ಎಂಬರ್ಥ. ಹೀಗಾಗಿ ಈ ಮುಖವಾಡಗಳ ಆಧಾರದ ಮೇಲೆ ವ್ಯಕ್ತಿತ್ವ ಎಂಬ ಪದ ಬಳಕೆಯಾಯಿತು.

**ಮನೋವಿಶ್ಲೇಷಣಾ ಪಂಥದ ಸಿಗ್ಮಂಡ್ ಫ್ರಾಯ್ಡ್ ಪ್ರಕಾರ ವ್ಯಕ್ತಿತ್ವ :**

ವ್ಯಕ್ತಿತ್ವ ಎಂಬ ಪದವನ್ನು ಮನೋವೈಜ್ಞಾನಿಕ ತಳಹದಿಯ ಮೇಲೆ ಅಧ್ಯಯನ ಮಾಡಿ ಅದಕ್ಕೊಂದು ಅರ್ಥ ಬರುವಂತೆ ಮಾಡಿದ ಕೀರ್ತಿ ಆಸ್ಟ್ರಿಯಾ ದೇಶದ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್‌ಗೆ ಸಲ್ಲುತ್ತದೆ. ಇವರ ಪ್ರಕಾರ ವ್ಯಕ್ತಿಯ ಮನಸ್ಸು ಮೂರು ಹಂತಗಳನ್ನು ಮತ್ತು ಮೂರು ಅಂಶಗಳನ್ನು ಒಳಗೊಂಡಿದೆ. ಈ ಹಂತಗಳಲ್ಲಿ ಬರುವ ಮನಸ್ಸಿನ ಅಂಶಗಳ ಆಧಾರದ ಮೇಲೆ ವ್ಯಕ್ತಿಯ ವ್ಯಕ್ತಿತ್ವ ರೂಪುಗೊಳ್ಳುತ್ತದೆ.



ಅಂದರೆ ಆ ಮೂರು ಅಂಶಗಳು ತಮ್ಮದೇ ಆದ ಗುಣಲಕ್ಷಣಗಳನ್ನು ಹೊಂದಿವೆ. ಹಾಗಾಗಿ ಈ ಅಂಶಗಳ ಪ್ರಕ್ರಿಯೆಯಿಂದ ವ್ಯಕ್ತಿಯ ವ್ಯಕ್ತಿತ್ವ ನಿರ್ಧಾರಿತವಾಗುತ್ತದೆ ಎಂಬುದು ಫ್ರಾಯ್ಡ್ ಅಭಿಪ್ರಾಯ.

**ಇದ್ :** 'ಇದ್' ಎಂಬ ಅಂಶವು ಅ–ಪ್ರಜ್ಞಾವಸ್ಥೆಯ ಹಂತದಲ್ಲಿ ಕಾರ್ಯಾಚರಣೆ ಮಾಡುತ್ತಿರುತ್ತದೆ. ಇದರ ಗುಣಲಕ್ಷಣಗಳೆಂದರೆ ಇದು ಸಂಪೂರ್ಣ ಸ್ವಾರ್ಥಿ, ಹಠದ ಭಾವನೆ ಹೊಂದಿರುತ್ತದೆ. ಎಲ್ಲವೂ ತನಗೇ ಬೇಕು. **'ಸುಖತತ್ವದ'** ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುತ್ತದೆ.

**ಅಹಂ :** ಇದು ಅರೆ–ಪ್ರಜ್ಞಾವಸ್ಥೆಯ ಹಂತದಲ್ಲಿದ್ದು, **'ನಿಜ–ತತ್ವದ'** ಆಧಾರದ ಮೇಲೆ ಕಾರ್ಯಾಚರಣೆ ಮಾಡುತ್ತಿರುತ್ತದೆ. ಅಂದರೆ ಸ್ವಲ್ಪ ಮಟ್ಟಿನ ಒಳಿತು–ಕೆಡಕುಗಳ ಬಗ್ಗೆ ವಿವೇಚಿಸುತ್ತದೆ. ಸ್ವಾರ್ಥ ಕಡಿಮೆ ಇರುತ್ತದೆ. ಹಠ ಸ್ವಭಾವದಲ್ಲಿ ಸುಧಾರಣೆ ಇರುತ್ತದೆ.


**ಅಧಿ–ಅಹಂ :** ಈ ಅಂಶವು ಪ್ರಜ್ಞಾವಸ್ಥೆಯಲ್ಲಿದ್ದು ಸಂಪೂರ್ಣ ಉನ್ನತ ಗುಣಗಳನ್ನು ಹೊಂದಿರುತ್ತದೆ. ಪ್ರತಿ ಕಾರ್ಯದಲ್ಲೂ ವಿವೇಚನೆ ಒಳಗೊಂಡಿರುತ್ತದೆ. ಸಂಪೂರ್ಣವಾಗಿ **'ನೈತಿಕ ತತ್ವದ'** ಆಧಾರದ ಮೇಲೆ ಕಾರ್ಯಾಚರಣೆ ಮಾಡುತ್ತದೆ.

ಹೀಗೆ ಈ ಅಂಶಗಳ ಕಾರ್ಯಾಚರಣೆ ಮತ್ತು ಅನುಪಾತದಲ್ಲಿ ವ್ಯಕ್ತಿತ್ವವು ರೂಪುಗೊಳ್ಳುತ್ತದೆ ಎಂಬುದು ಸಿಗ್ಮಂಡ್ ಫ್ರಾಯ್ಡ್ ಅಭಿಪ್ರಾಯ.

**ವ್ಯಕ್ತಿತ್ವ ನಿರ್ಧರಿಸುವ ಅಂಶಗಳು :**

ವ್ಯಕ್ತಿತ್ವವು ಆಂತರಿಕ ಮತ್ತು ಬಾಹ್ಯ ವರ್ತನೆಗಳ ಸಮಗ್ರ ಮೊತ್ತ ಜೊತೆಗೆ ಅನುವಂಶೀಯತೆ ಹಾಗೂ ಪರಿಸರದ ಫಲವಾಗಿದೆ. ಹೀಗಾಗಿ ವ್ಯಕ್ತಿಯ ವ್ಯಕ್ತಿತ್ವವನ್ನು ಅನೇಕ ಅಂಶಗಳು ನಿರ್ಧರಿಸುತ್ತವೆ. ಅವುಗಳೆಂದರೆ –

**ವ್ಯಕ್ತಿತ್ವ ನಿರ್ಧರಿಸುವ ಅಂಶಗಳು**




ಈ ಎಲ್ಲಾ ಅಂಶಗಳು ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿ ವ್ಯಕ್ತಿತ್ವವು ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಹೇಗೆ ಎಂಬುದನ್ನು ಮುಂದಿನ ಸಂಚಿಕೆಯಲ್ಲಿ ಗಮನಿಸೋಣ.

## Try to think of solutions

The moment you are in tension
You will lose your attention
This will put you in total confusion
Which might spoil personal relation
Ultimately you will not get co-operation
Which will cause complication
You will then check your BP with calculation
You may have to take meditation
Instead.... understand the situation
Try to think of a solution
Many problems will be solved with discussion
Which will work our better in profession
This is not my free suggestion
It is only for prevention
If you understand my intension
You will never come again in tension....

### "Our dead line"

Ask not what yours country can do for u
Ask what you can do for your country

## "Life" teacher us to

Make good use of 'Time'
While time teaches us
The value of 'Life'

A good life is when you assume
Noting, do more smile often
Dream big, laugh a lot and realize

How blessed you are for what you have!
"Kill tension before tension kills you"
"Reach your goal before goal kicks you"

Spend your time with them who
Loved you unconditionally
Not with those people who loved you
Only is your good times
Life is very complicated
Don't try to find Answers
Because when you
find answers Life changes the questions

**Chandrika K.**
B.Sc. 4th Sem

## Faith

When all doors are locked
in your house or life,
Search for windows atleast
one window is always
open that is ``faith"

**- D. Harish**
B.Sc. 2nd Sem.

# FITNESS

**Nawaz Basha C**
Physical Education Director

Physical fitness is the capacity of our body's systems to cooperate effectively, enabling us to maintain good health and carry out regular activities. Being effective implies carrying out daily tasks with the least amount of effort. A fit individual has the capacity to complete his/her work at school and at home while still having the stamina to participate in sports and other leisure activities. A physically healthy person can do everyday tasks like raking leaves at home, stocking shelves at a part-time job, and marching in the school band with ease. A fit individual can react to emergencies by sprinting for assistance or helping a buddy who is in need, for example.

Physical fitness entails the performance of the heart and lungs, as well as the body's muscles. And, because what we do with our bodies affects what we can do with our minds, fitness influences attributes like mental attentiveness and emotional stability to some extent.

The health of the heart, lungs, and muscles is a component of physical fitness. Fitness also some what affects traits like mental clarity and emotional stability because what we do with our bodies also affects what we can do with our thoughts.

One of the best things we can do for our health is to start a workout programme. After all, exercise can lower our chance of developing chronic diseases, enhance balance and coordination, aid in weight loss, and even increase our self-esteem. Furthermore, we can profit from them regardless of age, gender, or athletic capabilities.

**MEANING OF FITNESS :** Physical fitness is defined as "one's capacity to carry out daily activities with the utmost effectiveness, power, and stamina while minimizing sedentary behavior and managing disease, fatigue, and stress."

**Exercise Benefits :**

- **Exercise Can Help Control Stress :** Chemicals called neurotransmitters, produced in the brain, are stimulated during exercise. Since it's believed that neurotransmitters mediate our moods and emotions, they can make us feel better and less stressed.
- **Exercise Can Keep Immune System Strong :** Research has shown that during moderate exercise, several positive changes occur in the immune system. Various immune cells circulate through the body more quickly, and are better able to kill bacteria and viruses.

**KNOWING THE BASICS :**

Physical fitness is most easily understood by examining its components, or "parts."

- **Aerobic Fitness or Cardio respiratory Endurance :** The ability to deliver oxygen and nutrients to tissues and to remove wastes, over sustained periods of time. Guidelines: 20-30 minutes of exercise to raise our heart rate most days.
- **Muscular Fitness :** Muscular fitness refers to the strength and endurance of our muscles. Strength training can help improve our

muscular fitness. It also enables us to increase body's lean muscle mass, which helps with weight loss. Guidelines: two or three 30 minute sessions a week that challenge the major muscle groups to fatigue (you can use calisthenics and/or weight training.

- **Flexibility :** The ability to move joints and use muscles through their full range of motion. Flexibility can help with performing daily tasks, improve circulation and posture, aid in stress relief and enhance coordination. Many experts believe that stretching can help reduce the risk of injury due to physical activity. Guidelines: Stretch when you work out or at least 3 times a week to maintain flexibility.

- **Stability and Balance :** Stability and balance are associated with our body's core muscle strength — the muscles in our lower back, pelvis, hips and abdomen. Strengthening these muscles can help to combat poor posture and low back pain. It also helps prevent falls, especially in older adults.

As we undertake a fitness program, it's important to remember that fitness is an individual quality that varies from person to person. It is influenced by age, sex, heredity, personal habits, exercise and eating practices. We can't do anything about the first three factors.

Regular exercise can help you control weight, reduce your risk of heart disease and certain cancers, and strengthen your bones and muscles. But if you haven't exercised for some time and you have health concerns, you may want to talk to your doctor before starting a new fitness routine.

## Hope

Never lose hope in your life
when series of problems
attack on you,
one good move can convert
pawn into queen try to
search that...

**D. Harish**
Bsc 2nd year

# 2023 – The International Year of Millets

**- Govardhan G Y**
Assistant Professor, Department of Botany,
ADB College, Harapanahalli

**Introduction**

In a world grappling with the complex challenges of climate change, food insecurity, and malnutrition, the United Nations has taken a momentous step by designating 2023 as the 'International Year of Millets.' This landmark decision aims to spotlight the immense potential of millets in addressing pressing global issues while promoting sustainable agricultural practices. The humble millet, often overlooked in the modern food landscape, is set to take centre stage as a powerful superfood with a myriad of benefits for both human health and the environment (PIB 2023).

**What are millets?**

Millets are a group of small-seeded grains that belong to the Poaceae family. Various species, such as *Echinochloa crus-galli* (barnyard millet), *Eleusine coracana* (finger millet), *panicum miliaceum* (proso millet), *Panicum sumatrense* (little millet), *Paspalum scrobiculatum* (kodo millet), *Pennisetum glaucum* (pearl millet), *Setaria italica* (foxtail milet) and *Sorghum bicolor* (sorghum) are considered as millets. Prevalent in many regions of Africa and Asia, these grains have earned a reputation as 'survival crops' owing to their adaptability and resilience in harsh environments. Their ability to thrive in arid and semi-arid regions, where other staple crops struggle to grow, makes them a beacon of hope for farmers facing uncertain climatic conditions.

**Importance of millets**

The International Year of Millets 2023 represents an unprecedented opportunity to shed light on the exceptional nutritional content of millets. These tiny grains are a treasure trove of essential nutrients, boasting high protein, fibre, vitamin, and mineral content. The nutritional content of the various millets are given in Table 1. Notably, finger millet (Ragi) is renowned for its exceptional calcium content, making it an invaluable ally in the fight against osteoporosis and related bone disorders. Pearl millet (Sajje), on the other hand, stands out for its rich iron content, a critical nutrient for combating anemia, particularly prevalent in developing countries.

Beyond their nutritional prowess, millets serve as vital agents of climate change adaptation and environmental conservation. In an era defined by erratic weather patterns, water scarcity, and soil degradation, millets emerge as a sustainable solution to these challenges. Thriving in low-fertility soils and requiring significantly less water than conventional crops like rice and wheat, millets exhibit an unparalleled capacity to withstand drought and extreme temperatures. By cultivating millets, communities can decrease their reliance on water-intensive crops, mitigate the adverse effects of climate variability, and foster ecological balance.

**Table 1**. Some major nutrients of millets*

| Scientific name | Common name | Nutritional benefits | | | |
|---|---|---|---|---|---|
| | | Protein (%) | Ash (%) | Fiber (%) | Total phenolics (mg/ g) |
| *Echinochloa crus-galli* | Barnyard millet (Kan - Oodalu) | 10.0 | 4.3 | 28.1 | 2.45 |
| *Elensine coracana* | Finger millet (Kan - Ragi) | 6.20 | 8.0 | 24.1 | 5.01 |
| *Panicum miliaceum* | Proso millet (Kan - Baragu) | 10.90 | 3.6 | 18.5 | 1.50 |
| *Panicum sumatrense* | Little millet (Kan - Saame) | 7.90 | 4.2 | 25.3 | 1.29 |
| *Paspalum scrobiculatum* | Kodo millet (Kan - Araka) | 6.20 | 3.6 | 33.9 | 10.09 |
| *Pennisetum glaucum* | Pearl millet (Kan - Sajje) | 14.10 | 2.1 | 14.1 | 2.18 |
| *Setaria italica* | Foxtail millet (Kan - Navane) | 10.50 | 3.5 | 25.7 | 2.90 |
| *Sorghum bicolor* | Sorghum (Kan - Jola) | 9.97 | 1.39 | 10.22 | 0.24-47.86 |

*Values taken from Longvah et al. 2017, Xu et al. 2021, Yousuf et al. 2021.

**Production of millets in India**


India is the largest producer of millets in the world where it produce all the nine major species. Millets are cultivated in 138 Lakh Hectares across India with a total production of 173 Lakh Tonnes, a major part of global production which stands at 718 Lakh Hectares of cultivation land of and a production of 863 Lack Tonnes. This stands at 80% of Asia's and 20% of global production. Also, India is the fifth largest exporter of the world. Karnataka, Tamil Nadu, Andhra Pradesh, Telangana, Rajasthan, Uttar Pradesh, Haryana, Gujarat, Madhya Pradesh and Maharashtra are the major states of millet cultivation. Pearl millet (60%), Sorghum (27%) and Ragi (11%) are the major millet crops that are being cultivated (PIB 2023).

**Importance of designating 2023 as the International Year of Millets**

The International Year of Millets 2023 holds immense promise for bolstering global food security. The promotion of these climate-resilient grains encourages diversification in agriculture, moving away from monoculture practices that exacerbate vulnerability to crop failures and pests. Emphasizing the cultivation of millets empowers farmers to adopt sustainable agricultural practices and strengthen their resilience against climate-induced adversities.

Furthermore, the initiative reinforces the importance of preserving biodiversity and indigenous knowledge. Traditional millet varieties have been cultivated for generations, deeply ingrained in the cultural fabric of

various communities. As the world witnesses the erosion of biodiversity at an alarming rate, conserving these time-honored crops safeguards precious genetic resources, strengthens local food systems, and promotes cultural heritage.




Collaborative efforts are expected to take center stage during the International Year of Millets 2023, with governments, international organizations, NGOs, and the private sector coming together to drive change. Through research, development, and innovation, stakeholders can harness the potential of millets to contribute to several Sustainable Development Goals (SDGs), such as zero hunger, climate action, and poverty alleviation. Capacity building, market linkages, and knowledge exchange will play a pivotal role in accelerating the adoption and commercializ ation of millets worldwide.

**Conclusion**

The International Year of Millets 2023 represents a significant step towards raising awareness about the nutritional, environ mental, and socio-economic benefits of millets. By promoting the cultivation, consumption, and utilization of these supergrains, the world can move towards more sustainable and resilient food systems. Embracing millets as a global superfood is not only an acknowledg ment of their historical significance but also a commitment to a healthier and more sustainable future for all. Let us celebrate the International Year of Millets 2023 by embracing these tiny yet mighty grains and making them an essential part of our daily lives.

**References**

PBI (2023) India's gift to the world. The new India Samachar 3(15):6-21.

Yousuf et al. (2021) Millet: A review of its nutritional and functional changes during processing. Food Research International 142:110197.

Xu et al. (2021) Phenolic compounds in whole grain sorghum and their health benefits. Foods 10:1921.

Longvah et al. (2017) Indian food composition table. National Institute of Nutrition, Hyderabad, India.

# ರಾಷ್ಟ್ರೀಯ ಸೇವಾ ಯೋಜನೆ (NSS)
## ರಾ.ಸೇ.ಯೋ ಧ್ಯೇಯವಾಕ್ಯ: ನಾನಲ್ಲ ನೀನೇ 22–23
## NSS Motto : Not me But you

1. **ಆನಂದ. ಎಸ್,** ರಸಾಯನಶಾಸ್ತ್ರ ಅಧ್ಯಾಪಕರು ಮತ್ತು ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಘಟಕ-1
2. **ಡಾ. ಎ.ಎಂ. ರಾಜಶೇಖರಯ್ಯ,** ಕನ್ನಡ ಅಧ್ಯಾಪಕರು ಮತ್ತು ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಘಟಕ-2

ರಾಷ್ಟ್ರೀಯ ಸೇವಾ ಯೋಜನೆಯು ಭಾರತ ಸರಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯವು ನಡೆಸುವ ಭಾರತೀಯ ಸರಕಾರದ ಪ್ರಾಯೋಜಿತ ಸಾರ್ವಜನಿಕ ಸೇವಾ ಕಾರ್ಯಕ್ರಮವಾಗಿದೆ. NSS ಎಂದು ಜನಪ್ರಿಯವಾಗಿ ಕರೆಯಲ್ಪಡುವ ಈ ಯೋಜನೆಯನ್ನು ಗಾಂಧೀಜಿಯವರ ಜನ್ಮ ಶತಮಾನೋತ್ಸವ ವರ್ಷದಲ್ಲಿ 1969ರಲ್ಲಿ ಪ್ರಾರಂಭಿಸಲಾಯಿತು. ಇದು ಸಮುದಾಯ ಸೇವೆಯ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ. ಅದರ ಧ್ಯೇಯವಾಕ್ಯ "ನಾನಲ್ಲ ನೀನೇ".

**ರಾಷ್ಟ್ರೀಯ ಸೇವಾ ಯೋಜನೆಯ ಮುಖ್ಯ ಉದ್ದೇಶಗಳು:**

1. ಅವರು ಕೆಲಸ ಮಾಡುವ ಸಮುದಾಯವನ್ನು ಅರ್ಥಮಾಡಿಕೊಳ್ಳುವುದು.
2. ತಮ್ಮ ಸಮುದಾಯಕ್ಕೆ ಸಂಬಂಧಿಸಿದಂತೆ ತಮ್ಮನ್ನು ಅರ್ಥಮಾಡಿಕೊಳ್ಳುತ್ತಾರೆ.
3. ಸಮುದಾಯದ ಅಗತ್ಯತೆಗಳು ಮತ್ತು ಸಮಸ್ಯೆಗಳನ್ನು ಗುರುತಿಸಿ ಮತ್ತು ಸಮಸ್ಯೆಗಳನ್ನು ಪರಿಹರಿಸುವಲ್ಲಿ ಅವರನ್ನು ತೊಡಗಿಸಿಕೊಳ್ಳುವುದು.
4. ಸಾಮಾಜಿಕ ಮತ್ತು ನಾಗರಿಕ ಜವಾಬ್ದಾರಿಯ ಪ್ರಜ್ಞೆಯನ್ನು ತಮ್ಮಲ್ಲಿ ಬೆಳಸಿಕೊಳ್ಳುವುದು.
5. ವೈಯಕ್ತಿಕ ಮತ್ತು ಸಮುದಾಯದ ಸಮಸ್ಯೆಗಳಿಗೆ ಪ್ರಾಯೋಗಿಕ ಪರಿಹಾರಗಳನ್ನು ಹುಡುಕುವಲ್ಲಿ ಅವರ ಜ್ಞಾನವನ್ನು ಬಳಸಿಕೊಳ್ಳುವುದು.
6. ಗುಂಪು ಜೀವನ ಮತ್ತು ಜವಾಬ್ದಾರಿಗಳ ಹಂಚಿಕೆಗೆ ಅಗತ್ಯವಾದ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.
7. ಸಮುದಾಯದ ಸಹಭಾಗಿತ್ವವನ್ನು ಸಜ್ಜುಗೊಳಿಸುವಲ್ಲಿ ಕೌಶಲ್ಯಗಳನ್ನು ಪಡೆದುಕೊಳ್ಳುವುದು.
8. ನಾಯಕತ್ವದ ಗುಣಗಳನ್ನು ಮತ್ತು ಪ್ರಜಾಸತ್ತಾತ್ಮಕ ಮನೋಭಾವವನ್ನು ಪಡೆದುಕೊಳ್ಳುವುದು.
9. ತುರ್ತು ಪರಿಸ್ಥಿತಿಗಳು ಮತ್ತು ನೈಸರ್ಗಿಕ ವಿಕೋಪಗಳನ್ನು ಎದುರಿಸುವ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸುವುದು.
10. ರಾಷ್ಟ್ರೀಯ ಏಕೀಕರಣ ಮತ್ತು ಸಾಮಾಜಿಕ ಸಾಮರಸ್ಯವನ್ನು ಅಭ್ಯಾಸ ಮಾಡಿಕೊಳ್ಳುವುದು.

NSS ಒಂದು ಘಟಕವು ಆರಂಭದಿಂದ ನಮ್ಮ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ ನಮ್ಮ ಮಹಾವಿದ್ಯಾಲಯದಲ್ಲಿ ಎರಡು ಎನ್.ಎಸ್.ಎಸ್. ಘಟಕಗಳಿವೆ. ಪ್ರತಿ ಘಟಕದಲ್ಲಿ 100 ವಿದ್ಯಾರ್ಥಿ ಸದಸ್ಯರನ್ನು ಹೊಂದಿದೆ. ಒಟ್ಟು 200 ವಿದ್ಯಾರ್ಥಿ ಸದಸ್ಯರು ಎನ್.ಎಸ್.ಎಸ್. ಸ್ವಯಂಸೇವಕರಾಗಿ ದಾಖಲಾಗಿದ್ದಾರೆ. ಎನ್.ಎಸ್.ಎಸ್. ಪ್ರತಿವಾರ ನಿಯಮಿತ ಚಟುವಟಿಕೆಗಳನ್ನು ನಡೆಸುತ್ತದೆ. ಆಯ್ದ ಗ್ರಾಮದಲ್ಲಿ 7 ದಿನಗಳ ಕಾಲ ವಿಶೇಷ ಶಿಬಿರವನ್ನು ಪ್ರತಿ ಶೈಕ್ಷಣಿಕ ವರ್ಷದಲ್ಲಿ ನಡೆಸಲಾಗುತ್ತದೆ. ಇದಲ್ಲದೆ, ಆಯ್ದ ಎನ್.ಎಸ್.ಎಸ್. ಸ್ವಯಂ ಸೇವಕರು ಗಣರಾಜ್ಯೋತ್ಸವ ಪರೇಡ್(ರಾಜ್ಯ ಮತ್ತು ರಾಷ್ಟ್ರೀಯ), ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಶಿಬಿರಗಳು, ಸಾಹಸ ಯುವಜನೋತ್ಸವ, ಸಾಂಸ್ಕೃತಿಕ ಉತ್ಸವಗಳು ಇತ್ಯಾದಿಗಳಲ್ಲಿ ಭಾಗವಹಿಸುತ್ತಾರೆ. ಈ ಶಿಬಿರಗಳು ಸ್ವಯಂಸೇವಕರಿಗೆ ಹೊಸ ಕಲಿಕೆಯ ವಿಧಾನವನ್ನು ಒದಗಿಸುತ್ತದೆ. ಕನಿಷ್ಠ ಒಂದು ವಿಶೇಷ ಶಿಬಿರದ ಜೊತೆಗೆ 2 ವರ್ಷಗಳ ಕಾಲ ಎನ್.ಎಸ್.ಎಸ್.ಗೆ ಸೇವೆ ಸಲ್ಲಿಸಿದ ಎಲ್ಲಾ ಎನ್.ಎಸ್.ಎಸ್ ಸ್ವಯಂ ಸೇವಕರು ಉಪಕುಲಪತಿ ಮತ್ತು ಕಾರ್ಯಕ್ರಮ ಸಂಯೋಜಕರ ಸಹಿಯ ಅಡಿಯಲ್ಲಿ ವಿಶ್ವವಿದ್ಯಾಲಯದಿಂದ ಪ್ರಮಾಣ ಪತ್ರಕ್ಕೆ ಅರ್ಹರಾಗಿರುತ್ತಾರೆ. ಈ ಪ್ರಮಾಣ ಪತ್ರವು ಅವರಿಗೆ ಉನ್ನತ ಶಿಕ್ಷಣದಲ್ಲಿ ಕೋಟಾವನ್ನು ಹೊಂದಲು ಅನುವು ಮಾಡಿಕೊಡುತ್ತದೆ.

ಎನ್.ಎಸ್.ಎಸ್. ಘಟಕವು ಈ ಕೆಳಗೆ ಸೂಚಿಸಿದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತದೆ.

- ❖ ರಕ್ತದಾನ ಶಿಬಿರಗಳು
- ❖ ಆರೋಗ್ಯ ಶಿಬಿರಗಳು

- ಅರಣ್ಯೀಕರಣ
- ಶುಚಿಗೊಳಿಸುವ ಚಟುವಟಿಕೆಗಳು
- ಜಾಗೃತಿ ರ್‍ಯಾಲಿಗಳು
- ವಾರ್ಷಿಕ ವಿಶೇಷ ಶಿಬಿರ

**ಎನ್.ಎಸ್.ಎಸ್.ಗೆ ಸಂಬಂಧಿಸಿದ ಎಲ್ಲಾ ಕಾಯಕ್ರಮಗಳು**

ನಮ್ಮ ಮಹಾವಿದ್ಯಾಲಯ ರಾ.ಸೇ.ಯೋ. ಘಟಕದಿಂದ ಮೇಲಿನ ಎಲ್ಲಾ ಕಾರ್ಯಕ್ರಮದ ಜೊತೆಯಾಗಿ ವಿಶ್ವವಿದ್ಯಾಲಯ ಮಟ್ಟದ, ರಾಜ್ಯ ಘಟಕದ ವತಿಯಿಂದ ಹಾಗೂ ಅಂತರ ರಾಜ್ಯ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರಗಳಲ್ಲಿ ನಮ್ಮ ವಿದ್ಯಾರ್ಥಿಗಳು ಭಾಗವಹಿಸಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ. ಇತ್ತೀಚಿಗೆ 2019-20ನೇ ಸಾಲಿನಲ್ಲಿ ನಮ್ಮ ಮಹಾವಿದ್ಯಾಲಯದ ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿನಿಯಾದ ಕು. ಎಂ. ಸಂಗೀತಾ, 2020-21 ಸಾಲಿನಲ್ಲಿ ಕು. ಅಂಜಲಿ ಇವರು ರಾಜ್ಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದ್ದು ನಮ್ಮ ಕಾಲೇಜಿನ ಹೆಮ್ಮೆಯ ಸಂಗತಿ.





ಕರ್ನಾಟಕ ರಾಜ್ಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿರುವುದು 26-01-2021



ದಿನಾಂಕ 30-10-2021 ರಾಜ್ಯ ಮಟ್ಟದ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ, ಬೆಳಗಾವಿ ಆಯ್ಕೆ ಶಿಬಿರದಲ್ಲಿ ಭಾಗಿಯಾಗಿರುವುದು. (ಚೆ.ನಂ. 1814 ಬಿ. ಅಂಜಲಿ)





ಎನ್.ಎಸ್.ಎಸ್. ಸ್ವಯಂ ಸೇವಕರು ಸ್ವಚ್ಛತಾ ಕಾರ್ಯಕ್ರಮದಲ್ಲಿ ತೊಡಗಿರುವುದು



ಯುವ ರೆಡ್ ಕ್ರಾಸ್ ಘಟಕ ಹಾಗೂ ರಾ.ಸೇ.ಯೋ. ಘಟಕದಡಿಯಲ್ಲಿ ರಕ್ತದಾನ ಶಿಬಿರದಲ್ಲಿ ಸ್ವಯಂಸೇವಕರು ರಕ್ತದಾನ ಮಾಡುತ್ತಿರುವುದು

# ಯುವಪಡೆ ಯಾವ ಕಡೆ?

– ಎಚ್.ವಿ. ಪ್ರಭುದೇವ
ಮುಖ್ಯಸ್ಥರು, ಇತಿಹಾಸ ವಿಭಾಗ

ಪ್ರಥಮವಾಗಿ ದೇಶ ಕಾಯುವ ಕಾಯಕದಲ್ಲಿ ತಮ್ಮ ಕಾಯವನ್ನು ಅರ್ಪಿಸಿ ಸಾವಿನಲ್ಲೂ ಸಾರ್ಥಕತೆಯನ್ನು ಕಂಡ ಅಸಂಖ್ಯ ವೀರ ಹುತಾತ್ಮರಿಗೆ ನನ್ನದೊಂದು ಸಲಾಂ. ಅದೇ ರೀತಿ ದೇಶವಾಸಿಗಳ ನೆಮ್ಮದಿಗಾಗಿ ಹಗಲಿರುಳೂ ಎನ್ನದೇ ಗಡಿ ಕಾಯುತ್ತಿರುವ ವೀರ ಸೇನಾನಿಗಳಿಗೆ ನನ್ನ ಹೃದಯಪೂರ್ವಕ ನಮನಗಳು.

ಏಕೆಂದರೆ ನಮ್ಮ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಯುವ ಪಡೆ ಹೆಚ್ಚಾಗಿರುವುದು ಒಂದೆಡೆಯಾದರೆ, ಇಂದಿನ ಕೆಲ ಯುವಕರ ನಡೆ ಯಾವ ಕಡೆ ಎಂಬ ವಿಷಯದ ಮೇಲೆ ಚರ್ಚಿಸಲು ವಿಷಾದಪಡುತ್ತೇನೆ.

ಏಕೆಂದರೆ ಹೇಗೆ ದೇಶ ಕಾಯುವ ಧೀರರಿಗೆ ಒಂದು ಸಲಾಂ ಅದೇ ರೀತಿ ಇಂದಿನ ಯುವಕರಿಗೂ ಹಾಕಬೇಕಾಗಿದೆ ಒಂದು ಲಗಾಮು. ಅದು ಅತ್ಯಂತ ಅವಶ್ಯಕ ಎಂಬುದು ನನ್ನ ಭಾವನೆ.

ಏಕೆಂದರೆ ನಾನು ವೃತ್ತಿಯಲ್ಲಿ ಇತಿಹಾಸದ ಮೇಷ್ಟ್ರು ಆಗಿರುವುದರಿಂದ ಕಳೆದ ಹತ್ತು ವರ್ಷಗಳಿಂದ ಯುವ ಪಡೆಯೊಡನೆ ಒಡನಾಡಿಯಾಗಿದ್ದು, ನನ್ನ ಪ್ರಾಧ್ಯಾಪಕ ವೃತ್ತಿಯಲ್ಲಿ ವರ್ಷದಿಂದ ವರ್ಷಕ್ಕೆ ಯುವ ವಿದ್ಯಾರ್ಥಿಗಳ ನಡೆ ಬದಲಾವಣೆಯಾಗುತ್ತಿದೆ.

ವಿದ್ಯಾರ್ಥಿಗಳಲ್ಲಿ ಇರಬೇಕಾದ ಶಿಕ್ಷಣ ಪ್ರೇಮ, ಶಿಕ್ಷಕ ಪ್ರೇಮ, ದೇಶ ಪ್ರೇಮ, ಸೇವಾ ಮನೋಭಾವ, ಪ್ರಾಮಾಣಿಕ ಪ್ರಯತ್ನ, ಸ್ಫೂರ್ತಿ, ಶ್ರದ್ಧೆ, ವಿದ್ಯೆ, ಭಕ್ತಿ ಮತ್ತು ನಿಷ್ಠೆ ಇಲ್ಲದಾಗಿ ಅವರ ಅಂತರಾಳದಲ್ಲಿ ಅರ್ಥವಿಲ್ಲದ ಆಲೋಚನೆಗಳು, ಹವ್ಯಾಸಗಳು ಜೊತೆಗೆ ಇಂದಿನ ವಾಟ್ಸಪ್, ಇನ್‌ಸ್ಟಾಗ್ರಾಂ, ಫೇಸ್‌ಬುಕ್‌ಗಳಲ್ಲಿ ಮುಳುಗಿ ಯುವ ಜನ ಅವಿವೇಕಿಗಳಾಗಿ ದೇಶದ ಭವ್ಯ ಪರಂಪರೆಗೆ ಧಕ್ಕೆ ತರುವ ರೀತಿ ವರ್ತಿಸುತ್ತಿರುವುದು ವಿಷಾದಕರ.

ದೇಶ ಕಟ್ಟಿದ ಮಹಾನ್ ವ್ಯಕ್ತಿಗಳಾದ ಬುದ್ಧ, ಬಸವ, ವಿವೇಕಾನಂದ, ಗಾಂಧೀಜಿ, ಅಂಬೇಡ್ಕರ್ ಹಾಗೂ ಸಮಾಜ ಸೇವೆಯಲ್ಲಿ ನಿರತರಾದ ಆರ್ಯ, ಬ್ರಹ್ಮ, ಥಿಯೋಸಾಫಿಕಲ್, ರಾಮಕೃಷ್ಣ ಸಂಸ್ಥೆಗಳು ಹಾಗೂ ಸೇವೆಯಲ್ಲಿ ಸಾರ್ಥಕತೆ ಕಂಡ ಮದರ್‌ತೆರೇಸಾ, ಅಬ್ದುಲ್ ಕಲಾಂ, ಅಟಲ್ ಬಿಹಾರಿ ವಾಜಪೇಯಿ, ಪ್ರಧಾನಿ ನರೇಂದ್ರಮೋದಿ ಮೊದಲಾದವರ ಸೇವೆಗಳು ಕೇವಲ ಶಿಕ್ಷಣಕ್ಕೆ ಸೀಮಿತಗೊಳಿಸಿಕೊಂಡಿವೆ.

ಇನ್ನು ಕೆಲವರು ವಯಸ್ಸಲ್ಲದ ವಯಸ್ಸಲ್ಲಿ ಪ್ರೀತಿ ಪಯಣದಲ್ಲಿ ಜೀವನದ ಮಹತ್ವ ಮರೆತು ಬಿಟ್ಟಿದ್ದಾರೆ. ಹೀಗಾಗಿ ರಾಷ್ಟ್ರ ರಕ್ಷಣೆ ಎಂದರೆ ಕೇವಲ ಸೈನಿಕರಿಗೆ ಹಾಗೂ ರಾಷ್ಟ್ರ ನಿರ್ಮಾಣ ಎಂದರೆ, ಗಾಂಧಿವಾದಿಗಳಿಗೆ ಅಷ್ಟೇ ಎಂದು ಸೀಮಿತಗೊಳಿಸಿಕೊಂಡಿದ್ದಾರೆ. ಅಂದರೆ ಸೈನಿಕರಾಗಿ ದೇಶಕ್ಕಾಗಿ ಪ್ರಾಣ ನೀಡಿ ಅಥವಾ ಗಾಂಧಿವಾದಿಗಳಾಗಿ ನಿಮ್ಮ ಆಸೆಗಳನ್ನು ಬಲಿ ಕೊಡಿ ಎಂದರ್ಥವಲ್ಲ. ಪ್ರಕೃತಿ ನಿಯಮದ ಪ್ರಕಾರ ಪ್ರತಿಯೊಬ್ಬರೂ ಜೀವನದ ಪ್ರತಿ ಮಜಲುಗಳನ್ನು ಆನಂದಿಸಬೇಕು. ಆದರೆ, ಯುವಕರಿದ್ದಾಗ ದೇಹ ಪ್ರೀತಿಗಿಂತ ದೇಶ ಹಾಗೂ ಸಮಾಜದ ಪ್ರೀತಿಗೆ ಬೆಲೆ ಕೊಟ್ಟು ನವ ನಾಗರೀಕ ಸಮಾಜ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು.

ಹುಟ್ಟಿನಿಂದ ಯಾರೂ ಸರ್ವಜ್ಞರಲ್ಲ, ಬುದ್ಧ ಬಸವರಲ್ಲ. ಅವರವರ ಜೀವನದಲ್ಲಾಗುವ ಬದಲಾವಣೆಗನುಸಾರವಾಗಿ, ಮಹಾನ್ ವ್ಯಕ್ತಿಗಳಾಗಬೇಕು.

ಅದಕ್ಕಾಗಿ ಪ್ರತಿಭೆಗಳು ಗುಡಿಸಲಿನಲ್ಲಿ ಹುಟ್ಟಿ ಅರಮನೆಯಲ್ಲಿ ಬೆಳೆಯುತ್ತಾರೆ ಎಂಬುದು ನನ್ನ ಅಭಿಪ್ರಾಯ.

ಮುಂಬರುವ ದಿನಗಳು ಯುವಕರ ಬಾಳಲ್ಲಿ ಸಾರ್ಥಕತೆಯ ಜೀವನದ ಆಶಾಕಿರಣ ಉದಯವಾಗಲಿ ಎಂಬ ಆಶಯದೊಂದಿಗೆ ಅಕ್ಷರ ಸೂರ್ಯನಿಗೆ ನಮಿಸಿ ನನ್ನ ಅನಿಸಿಕೆಗಳಿಗೆ ವಿರಾಮ ನೀಡುತ್ತೇನೆ.


## Why Hindus use only Banana and Coconut for God

* Coconut and Banana are the only two fruits which are considered to be the ``Sacred fruits ". All other fruits are tainted fruits (Partially eaten fruits). The reason is that these fruits does not grow after throwing the left over part. Also, it does not get germinated by bird drop.

* If someone eat coconut and throw its outer shell, nothing will grow out of it. If you want to grow a coconut tree, you have to sow the entire coconut with the husk.

* Similarly with Banana, if you eat a banana and then throw its peel, nothing will grow out of it. The banana tree can be grown by planting a banana rhizome (Vegetative propagation). So we offered pure fruits to God.

**K.M. Shravani**
B.Sc. 3rd year




## Interesting facts of Biology

- There are more than 1 trillion cells in the human body.
- The human brain has about 100 billion neurons.
- The average person sheds about 6,00,00 particles of skin every hour.
- The human hearts pumps about 2000 gallons of blood every day.
- The average person takes between 8000 to 10000 breaths per day.
- The average person has about 25000 taste buds.
- The human eye can see about 10 million colors.

**K.M. Shravani**
B.Sc. 3rd year

# English Language Teaching in Rural India - Challenges and scopes

- G.B. Naganagoudar
Associate Professor

In the globalized context English language is gaining more importance in our daily life. It is not only a Lingua franca in India but also a bread winning language. Because of rapid developments in science and technology, especially information technology, English has become mandatory to transform our living standard. The ability of English Communication can help our youth to get good jobs in Multinational companies.

So every school and college started to teach English with new vigour. Language laboratories established in Schools and colleges and new convent schools started functioning even in rural areas. But it all helped the management of private schools to get huge donation and fees from parents of the students.

In no way they helped to improve the quality of student education. In fact the present system widened the gap between-

1. Rural and urban students.
2. Science, commerce students and arts students.
3. Economically poor and rich students.
4. Socially backward class and forward class students.

As every college has mixed group of students. It is a great challenge for teachers to bridge the gap between these sections. After every semester we the English teachers find that passing percentages of science and commerce students is 98% to 100 % where as in Arts it is just 40% to 50% why such a huge gap between science and arts students? Is it possible to bridge the gap and bring them to the main stream?

English language comprehension, reading-writing and speaking skills build up students intellectual personality and increase the opportunity of his/her employability.

But in rural India because of poor quality of English language teaching lack of infrastructure and the absence of modern communicative medias, students feel English difficult and mentally develop a version towards the subject.

In P.U. and degree level they choose their Mother tongue as the medium of instruction and instead of English they choose Sanskrit as one of their languages.

So at higher level of education they find it very difficult to adjust themselves with English language and getting through campus interviews is hard net to crack.

Thus after the completion of their degrees getting jobs becomes a rare dream for them. According to the Survey 50% of Indian graduates are not fit for employability.

The modern globalized world needs soft skills to get good jobs. Fluency in English language, computer knowledge and analytical ability helps their employability. But lack of these soft skills make them unemployable graduates.

So there is an urgency of bridging these gaps by providing quality education to one and all.

# ವಿದ್ಯಾಸಿರಿಯಿಂದ ಸೌಂದರ್ಯ ಸಿರಿಯೆಡೆಗೆ

**ಶ್ರೀ ಪ್ರಭುದೇವ್ ಹೆಚ್.ವಿ.**
**ಡಾ. ಹಾದಿಮನಿ ರಮೇಶ**
ಉಪನ್ಯಾಸಕರು, ಇತಿಹಾಸ ಅಧ್ಯಯನ ವಿಭಾಗ

ವಿಜಯನಗರ ಜಿಲ್ಲೆಯ ಹರಪನಹಳ್ಳಿ ಪಟ್ಟಣದ ಅಂಬ್ಲಿ ದೊಡ್ಡ ಭರಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯದ ಬಿ.ಎ. ಅಂತಿಮ ವರ್ಷದ ಆರನೇ ಸೆಮಿಸ್ಟರ್ ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷ 2022–23ರ ಆಗಸ್ಟ್ 9 ಮತ್ತು 10ನೇ ತಾರೀಖು ಎರಡು ದಿನಗಳ ಶೈಕ್ಷಣಿಕ ಹಾಗೂ ಸಂಶೋಧನಾ ಕಾರ್ಯವನ್ನು ಮಹಾವಿದ್ಯಾಲಯದ ಇತಿಹಾಸ ವಿಭಾಗದಿಂದ ಪ್ರವಾಸ ಕಾರ್ಯ ಕೈಗೊಂಡು ಐದು ತಂಡಗಳಾಗಿ (ಬಳ್ಳಿಗಾವೆ, ಬನವಾಸಿ, ಕೆಳದಿ, ಇಕ್ಕೇರಿ ಮತ್ತು ಸೋಂದಾ) ಈ ಇತಿಹಾಸ ಸ್ಥಳಗಳಿಗೆ ಭೇಟಿ ನೀಡಿ ಅಲ್ಲಿನ ವಾಸ್ತುಶಿಲ್ಪ, ಮೂರ್ತಿ ಶಿಲ್ಪದ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಯಿತು. ಈ ಮೂಲಕ ನೋಡಿ ಕಲಿಯುವ ಅನುಭವದ ಕಲಿಕೆಗೆ ಪೂರಕವಾಗುವ ಈ ಸಂಶೋಧನಾ ಪ್ರವಾಸದಲ್ಲಿ ಉತ್ತರ ಕನ್ನಡ ಜಿಲ್ಲೆ ಹಾಗೂ ಶಿವಮೊಗ್ಗ ಜಿಲ್ಲೆಯ ಐತಿಹಾಸಿಕ ಕೇಂದ್ರಗಳಾದ ಬನವಾಸಿ, ಬಳ್ಳಿಗಾವಿ, ಇಕ್ಕೇರಿ, ಕೆಳದಿ, ಮತ್ತು ಸೋಂದಾ–ಶಿರಸಿ ಪರಿಸರದ ಇತಿಹಾಸ, ವಾಸ್ತು ಶಿಲ್ಪಕಲೆ, ಪ್ರಾಚೀನ ಧರ್ಮ, ಸಂಸ್ಕೃತಿ, ನೃತ್ಯ, ನಿಸರ್ಗ, ಪ್ರಾಣಿ–ಪಕ್ಷಿ, ಅರಣ್ಯ ಸಂಪತ್ತು ಮತ್ತು ಪರಿಸರದ ಸಾಂಸ್ಕೃತಿಕತೆ ಕುರಿತು ಸಾಕಷ್ಟು ವಿಷಯಗಳನ್ನ ತಿಳಿದುಕೊಳ್ಳಲಾಯಿತು.

ಈ ಹಿನ್ನೆಲೆಯಲ್ಲಿ ವಿದ್ಯಾಸಿರಿ ನಾಡೆಂದೆ ಹೆಸರಾದ ಹರಪನಹಳ್ಳಿಯಿಂದ ನಿಸರ್ಗ ರಮಣೀಯ ಸೌಂದರ್ಯದ ಸೊಬಗನ್ನು ಹೊಂದಿದಂತಹ ನಮ್ಮ ಮಲೆನಾಡಸಿರಿಯ ಸೌಂದರ್ಯ ಸಿರಿಯೆಡೆಗೆ ಎಂಬಂತೆ ಹೆಸರನ್ನ ಇಲ್ಲಿ ನೀಡಲಾಗಿದೆ. ನಾವು ಅಲ್ಲಿ ನೋಡಿದ ಅನೇಕ ವಸ್ತು ವಿಷಯಗಳನ್ನು ಓದುಗರ ಗಮನಕ್ಕೆ ಸೌಂದರ್ಯಸಿರಿ ಭಾಗದ ಕೆಲವು ಅಂಶಗಳನ್ನು ತಿಳಿಸಲು ಇಚ್ಛಿಸುತ್ತೇವೆ.

ನಾವು ನೋಡಿದ ಪ್ರದೇಶಗಳು ಕ್ರಿ.ಪೂ. ಕಾಲದ ಅನೇಕ ಪ್ರಾಚ್ಯಾವಶೇಷಗಳನ್ನು ಹೊಂದಿರುವ ಪ್ರಾಚೀನ ಸಾಂಸ್ಕೃತಿಕ ಪ್ರತೀಕಗಳಾಗಿದ್ದವು. ಅದಕ್ಕೆ ಸಂಬಂಧಿಸಿದ ಭೌತಿಕ ವಸ್ತುಗಳಾದ ಪ್ರಾಚೀನ ಕೈಗೆ ಕೊಡಲಿಗಳು, ಮಡಿಕೆ ಚೂರುಗಳು ಕೆಳದಿ ವಸ್ತುಸಂಗ್ರಹಾಲಯದಲ್ಲಿ ಇದ್ದಿದ್ದನ್ನ ಗಮನಿಸಲಾಯಿತು. ಕ್ರಿಸ್ತಪೂರ್ವ ನಾಲ್ಕು ಸಾವಿರದಲ್ಲೇ ಪ್ರಾಚೀನ ಅವಶೇಷಗಳನ್ನು ಹೊಂದಿದ ಬನವಾಸಿಗೆ ಬನ ಮತ್ತು ವಾಸಿ ಪದಗಳಿಂದ ಬನವಾಸಿ ಎಂಬ ಹೆಸರು ಬಂದಿದ್ದು, ಕ್ರಮವಾಗಿ ಕಾಡು ಮತ್ತು ವಸಂತ ಎಂಬ ಅರ್ಥ ಕೊಡುತ್ತವೆ. ಮಹಾಭಾರತದಲ್ಲಿ ವನವಾಸಿಕ ಎಂಬ ಉಲ್ಲೇಖವಿದ್ದು, ಐತಿಹಾಸಿಕವಾಗಿ ಕ್ರಿ.ಶ. ಒಂದನೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಗ್ರೀಕ್ ಪ್ರವಾಸಿಗ ಭೂಗೋಳಶಾಸ್ತ್ರಜ್ಞ ಟಾಲೆಮಿ ಈ ಪಟ್ಟಣವನ್ನು ಬನೌಸಿ ಎಂದು ಕರೆದಿದ್ದಾರೆ. ಈ ಪ್ರದೇಶವನ್ನು ಕ್ರಿ.ಶ. ನಾಲ್ಕನೇ ಶತಮಾನದಲ್ಲಿ ಜಯಂತಿಪುರ ಅಥವಾ ವೈಜಯಂತಿ ಎಂದು ಕರೆಯಲಾಗುತ್ತಿತ್ತು. ಕರ್ನಾಟಕದ ಪ್ರಥಮ ರಾಜ ಮನೆತನವಾದ ಕದಂಬ ರಾಜ್ಯದ ರಾಜಧಾನಿಯು ಸಹ ಇದಾಗಿತ್ತು. ಅಶೋಕ ಚಕ್ರವರ್ತಿ ಬೌದ್ಧಧರ್ಮ ಪ್ರಚಾರಕ್ಕಾಗಿ ಕಳುಹಿಸಿದ್ದ ಬೌದ್ಧ ಬಿಕ್ಷು ರಕ್ಷಿತನು ಬನವಾಸಿ ಪ್ರಾಂತ್ಯಕ್ಕೆ ಬಂದಿದ್ದ ಎಂಬ ಮಾಹಿತಿ ಮಹಾವಂಶ ಎಂಬ ಬೌದ್ಧ ಗ್ರಂಥದಿಂದ ತಿಳಿಯುತ್ತದೆ. ಆರಂಕುಶವಿಟ್ಟೊಡಂ ನೆನವುದೆನ್ನ ಮನಂ ಬನವಾಸಿ ದೇಶಮಂ ಎಂಬ ಕಾವ್ಯೋಕ್ತಿ ಕನ್ನಡದ ಆದಿಕವಿ ಪಂಪನು ತನ್ನ ಕಾವ್ಯದಲ್ಲಿ ವರ್ಣಿಸಿದ್ದಾನೆ ಇಲ್ಲಿನ ಮಧುಕೇಶ್ವರ ದೇವಾಲಯ ವಾಸ್ತುಶಿಲ್ಪದ ಕೈಗನ್ನಡಿಯಾಗಿದೆ. ಹೀಗೆ ಬನವಾಸಿ ಸಾಹಿತ್ಯಿಕ ಮತ್ತು ಐತಿಹಾಸಿಕ ಮಹತ್ವ ಪಡೆದ ಸಾಂಸ್ಕೃತಿಕ ನಗರವಾಗಿದೆ.

ಹೊಯ್ಸಳರ ವಿಷ್ಣುವರ್ಧನನ ರಾಣಿ ಶಾಂತಲಾ ದೇವಿ, ವಚನಕಾರ ಅಲ್ಲಮಪ್ರಭುಗಳ ಜನ್ಮಸ್ಥಳ ಹಾಗೂ ದಕ್ಷಿಣದ ಕೇದಾರನಾಥ ಎಂದು ಕರೆಯುವ ಕೇದಾರೇಶ್ವರ ದೇವಾಲಯವಿರುವ ಪ್ರಾಚೀನ ಸಾಂಸ್ಕೃತಿಕ ನಗರ ಬಳ್ಳಿಗಾವಿ. ಕ್ರಿ.ಶ. ಏಳನೇ ಶತಮಾನದಲ್ಲಿ ಇದನ್ನು ವಳ್ಳಿಗ್ರಾಮ, ಬಲಿಪುರ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ನೃತ್ಯ ಮಾಡುತ್ತಿದ್ದ ಶಾಂತಲೆಯ ಸೌಂದರ್ಯಕ್ಕೆ ಬಿಟ್ಟಿದೇವ ಮನಸೋತಿದ್ದು ಇಲ್ಲಿಯ ತ್ರಿಪುರಾಂತಕೇಶ್ವರ ದೇವಾಲಯದಲ್ಲಿ ಎಂಬುದು ಐತಿಹಾಸಿಕವಾಗಿದೆ.

ಕರ್ನಾಟಕದ ಅನೇಕ ಪವಿತ್ರ ಕ್ಷೇತ್ರಗಳಲ್ಲಿ ಒಂದಾದ ಸೋಂದಾ ಕ್ಷೇತ್ರವು ಸೋಂದಾ, ಸೋದೆ, ಸ್ವಾದಿ ಹೆಸರಿನಿಂದ ಕರೆಯಲ್ಪಡುತ್ತದೆ. ಇಲ್ಲಿ ಮಾಧ್ವಯತಿಗಳ ಲ್ಲೊಬ್ಬರಾದ ಮತ್ತು ದಾಸ ಸಾಹಿತ್ಯಕ್ಕೆ ತನ್ನದೇ ಆದ ಕೊಡುಗೆ ನೀಡಿದ್ದ ವಾದಿರಾಜರ ಬೃಂದಾವನ, ಜೈನಮಠ ಮತ್ತು ಸ್ವರ್ಣವಲ್ಲಿ ಮಠ ಇದ್ದು ಪ್ರಕೃತಿ ಸೌಂದರ್ಯ ವೀಕ್ಷಣೆಗೆ ಸೂಕ್ತ ಸ್ಥಳವಾಗಿದೆ. ಇಲ್ಲಿನ ಶಾಲ್ಮಲಾ ನದಿ ಸಹಸ್ರಲಿಂಗಗಳಿಗೆ ಭೌಗೋಳಿಕ ಸ್ಥಾನ ನೀಡಿದೆ. ಸೋಂದಾದಲ್ಲಿ ಸೋದೆ ಅರಸರ ರಾಜ ಮನೆತನ ವಿಜಯನಗರದ ಸಾಮಂತರಾಗಿ ಆಳ್ವಿಕೆ ಮಾಡಿದ್ದು ಈ ಭಾಗದಲ್ಲಿ ತಮ್ಮದೇ ಆದ ಸಾಂಸ್ಕೃತಿಕ ಕೊಡುಗೆಯನ್ನು ನೀಡಿದ್ದಾರೆ.

ಕೆಳದಿ ಮತ್ತು ಇಕ್ಕೇರಿಗಳು ಕೂಡ ಕೆಳದಿ ಸಂಸ್ಥಾನದ ಮುಖ್ಯ ನಗರಗಳಾಗಿದ್ದವು. ರಾಮೇಶ್ವರ, ಅಘೋರೇಶ್ವರ, ಪಾರ್ವತಿ ದೇವಾಲಯಗಳು ಇಲ್ಲಿನ ವಾಸ್ತುಶಿಲ್ಪದ ಕೊಡುಗೆಗಳಾದರೆ, ಇಕ್ಕೇರಿ ಎಂಬ ಹೆಸರು ಎರಡು ಕೆರೆ ಗಳಿಂದ ಕೂಡಿದ ಗ್ರಾಮ ಅಥವಾ ಎರಡು ಕೇರಿಗಳಿಂದ (ಬೀದಿಗಳಿಂದ) ಕೂಡಿದ ಗ್ರಾಮ ಎಂಬುದಾಗಿದೆ. ಕೆಳದಿಯಲ್ಲಿರುವ ವಸ್ತು ಸಂಗ್ರಹಾಲಯ 1978ರಲ್ಲಿ ಕೆಳದಿ ಗುಂಡ ಜೋಯಿಸರಿಂದ ಸ್ಥಾಪಿತವಾಗಿದ್ದು, ಈ ವಸ್ತು ಸಂಗ್ರಹಾಲಯವು ಹಸ್ತಪ್ರತಿಗಳು, ವರ್ಣಚಿತ್ರಗಳು, ಐತಿಹಾಸಿಕ ದಾಖಲೆಗಳನ್ನು ಒಳಗೊಂಡಿದೆ. ಈ ವಸ್ತು ಸಂಗ್ರಹಾಲಯವು ಸಂಶೋಧಕರಿಗೆ, ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ ಅಧ್ಯಯನದ ಅನುಕೂಲಕ್ಕೆ ಆಗರವಾಗಿದೆ. ಇಲ್ಲಿ ಸಂಗ್ರಹವಾದ ದಾಖಲೆಗಳು ನಾಡಿನ ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿ, ಜ್ಯೋತಿಷ್ಯ ಶಾಸ್ತ್ರ, ಖಗೋಳಶಾಸ್ತ್ರ, ವೈದ್ಯಶಾಸ್ತ್ರ ಇನ್ನೂ ಅನೇಕ ವಿಷಯಗಳನ್ನು ಒಳಗೊಂಡಿದೆ. ಇಲ್ಲಿನ ಸ್ಮಾರಕ ಶಿಲ್ಪಗಳಾದ ಸತಿ ಶಿಲ್ಪಗಳು, ಜೈನ ತೀರ್ಥಂಕರ ಶಿಲ್ಪಗಳು, ನಿಷಧಿ ಕಲ್ಲುಗಳು, ವೀರಗಲ್ಲುಗಳು ಮುಂತಾದ ಧಾರ್ಮಿಕ ಮೂರ್ತಿಶಿಲ್ಪಗಳು ಪ್ರಮುಖವಾದ ಶಿಲ್ಪಗಳಾಗಿದ್ದು ಈ ಪರಿಸರದ ಕಲಾ ವೈಭವವನ್ನ ತಿಳಿಸುತ್ತದೆ.

ಹೀಗೆ ಕರ್ನಾಟಕದ ಕಲಾಕೃತಿಗಳನ್ನ ಅಧ್ಯಯನ ಮಾಡಿ ಮಲೆನಾಡಿನ ಸೌಂದರ್ಯ ಸಿರಿಯಾದ ಶಿರಸಿಯ ಸೋಂದನಾಯಕರ ತಾಣಗಳಾದ ವಾದಿರಾಜ ಮಠ, ಜೈನ ಮಠ ಹಾಗೂ ಸ್ವರ್ಣವಲ್ಲಿ ಮಠಗಳಿಗೆ ಭೇಟಿ ನೀಡಿ, ಕರ್ನಾಟಕವನ್ನಾಳಿದ ದೊರೆಗಳ ಸಾಂಸ್ಕೃತಿಕ ಕೊಡುಗೆಗಳು ಮತ್ತು ಕಲಾ ಮತ್ತು ವಾಸ್ತುಶಿಲ್ಪಕ್ಕೆ ಪ್ರೋತ್ಸಾಹ ನೀಡಿದವರ ಬಗ್ಗೆ ಅಧ್ಯಯನ ಮಾಡಿ ಕರ್ನಾಟಕದ ರಾಜಕೀಯ ಪರಂಪರೆಯು ಭಾರತದ ಐತಿಹಾಸಿಕತೆಗೆ ಕೊಡುಗೆ ನೀಡಿರುವುದರ ಮಹತ್ವವನ್ನು ತಿಳಿದುಕೊಂಡೆವು ಇಂತಹ ಅವಕಾಶ ನೀಡಿದಂತಹ ಕಾಲೇಜಿನ ಪ್ರಾಂಶುಪಾಲರಿಗೆ ಹೃದಯಪೂರ್ವಕ ಧನ್ಯವಾದಗಳು.









# ಮಾತೆಂಬುದು ಜ್ಯೋತಿರ್ಲಿಂಗ

**ಡಾ. ಹಾದಿಮನಿ ರಮೇಶ**
ಉಪನ್ಯಾಸಕರು, ಇತಿಹಾಸ ವಿಭಾಗ

ಮಾತು ಶುದ್ಧವಾಗಿರದಿದ್ದರೆ ಪ್ರಯೋಜನವೇನು? ಕಲ್ಲ ಮೇಲೆ ಬೇಕಾದಷ್ಟು ನೀರು ಹಾಕಿದರೂ ಅದು ಮೃದುವಾಗುವುದಿಲ್ಲ ಎನ್ನುವ ಅರ್ಥ ಇದೆ. ಭಗವಂತನ ಬಗ್ಗೆ ಶ್ರದ್ಧೆ, ಭಕ್ತಿ ಇಲ್ಲದೆ ಸುಮ್ಮನೆ ತೋರಿಕೆಗೆ ಅಭಿಷೇಕ ಮಾಡಿದಂತಾಗುತ್ತದೆ. ನಡೆ–ನುಡಿ ಎರಡು ಒಂದಾಗ ಬೇಕು, ನುಡಿಯಲ್ಲಿ ಎಚ್ಚೆತ್ತು ನಡೆಯಲಿ ತಪ್ಪಿದಂತ ಆದರೆ ಆದಕ್ಕೆ ಗೌರವ ಬರುವುದಿಲ್ಲ. ಶರಣರು ಇನ್ನೊಂದು ಮಾತು ಹೇಳಿದ್ದಾರೆ 'ನುಡಿಯೊಳಗಾಗಿ ನಡೆಯದಿದ್ದರೆ ಕೂಡಲಸಂಗಮದೇವಯ್ಯನಂತೋಲಿವನಯ್ಯ......' ಅಂದರೆ ಏನು ಮಾತನಾಡುತ್ತೇವೆಯೋ ಅದರಂತೆ ನಡೆಯದಿದ್ದರೆ ಭಗವಂತ ಹಾಗೂ ಸಮಾಜ ನಂಬುವುದಿಲ್ಲ. ಜ್ಞಾನಿಯಾದವನು ಆಸೆ, ರೋಷ, ದ್ವೇಷ ಇವೆಲ್ಲವನ್ನೂ ತ್ಯಜಿಸಬೇಕು. 'ನುಡಿದಂತೆ ನಡೆ.... ಇದೇ ಜನ್ಮ ಕಡೆ ಎಂಬಂತೆ.

**ಅಲ್ಲಮಪ್ರಭುಗಳ ವಚನಗಳಲ್ಲಿ ಒಂದಾದ...**
**ಮಾತೆಂಬುದು ಜ್ಯೋತಿರ್ಲಿಂಗ**
**ಸ್ವರವೆಂಬುದು ಪರತತ್ವ**
**ತಾಳೋಷ್ಠ ಸಂಪುಟವೆಂಬುದು ನಾದಬಿಂದು ಕಳಾತೀತ**
**ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ....**

ಪೌರಾಣಿಕ ಸಂತ ಮತ್ತು ತತ್ವಜ್ಞಾನಿಯಾದ ಅಲ್ಲಮಪ್ರಭು ಅವರು ಶಿವನಿಗೆ ಅವರ ಆಳವಾದ ಭಕ್ತಿ ಮತ್ತು ಏಕತಾವಾದದ ತಾತ್ವಿಕತೆಯನ್ನು ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಅಲ್ಲಮಪ್ರಭು ಹೆಸರೇ ಅತೀಂದ್ರಿಯತೆ ಮತ್ತು ವಿಸ್ಮಯವನ್ನುಂಟು ಮಾಡುತ್ತದೆ. ಮಾತು ಮತ್ತು ಶಿವನ ಬಗ್ಗೆ ವಚನ ರೂಪದಲ್ಲಿ ಅಲ್ಲಮಪ್ರಭು ಹೇಳಿದ್ದಾರೆ ಎಂದರೆ ಮಾತಿಗೆ ಎಷ್ಟು ಪ್ರಾಮುಖ್ಯತೆ ಇತ್ತು ಎಂಬುದನ್ನು ಇಲ್ಲಿ ಗಮನಿಸಬೇಕು. ಈ ಹಿನ್ನಲೆಯಲ್ಲಿ ಮಾತಿನ ವೈಚಾರಿಕತೆಯನ್ನು, ವಾಸ್ತವತೆಯನ್ನು ಅಲ್ಲಮಪ್ರಭುವಿನ ವಚನದಿಂದ ಇಲ್ಲಿ ಚರ್ಚಿಸೋಣ.

ಕತ್ತಲೆಯಲ್ಲಿ ಹೋಗಬೇಕಾದರೆ ಬೆಳಕಿನ ಅವಶ್ಯಕತೆ ಇದೆಯೋ, ದೀಪದ ಅವಶ್ಯಕತೆ ಇದೆಯೋ, ಹಾಗೆ ಇಡೀ ಮಾನವ ಜನಾಂಗಕ್ಕೆ ದೀಪದ ರೂಪದಲ್ಲಿ ಬೆಳಕನ್ನು ಕೊಡುತ್ತಿರುವಂತಹದ್ದು ಅಲ್ಲಮಪ್ರಭುಗಳ ವಚನ ಸಾಹಿತ್ಯ. ಇದು ಎಷ್ಟು ಅದ್ಭುತವೆಂದರೆ ಇಲ್ಲಿ ಯಾವುದೇ ಜಾತಿ, ಮತ, ಪಂಥವಿಲ್ಲ ಯಾವುದೇ ವ್ಯಕ್ತಿಯನ್ನು ಗುರಿಯಾಗಿಟ್ಟುಕೊಂಡು ಉಪದೇಶ ಮಾಡುವಂಥದ್ದು ಅಲ್ಲ, ಇಡೀ ಮಾನವ ಜನಾಂಗಕ್ಕೆ ಮಾರ್ಗವನ್ನು ಕೊಡುತ್ತಾರೆ ಅಲ್ಲಮಪ್ರಭುಗಳು. ಎಂಥ ಅದ್ಭುತವಾದ ಸಾಲುಗಳೆಂದರೆ 'ಮಾತೆಂಬುದು ಜ್ಯೋತಿರ್ಲಿಂಗ' ಬಹುಶಃ ಮಾತಿಗೆ ಇಷ್ಟೊಂದು ಉನ್ನತ ಮಟ್ಟದ ಪದವಿ ಜಗತ್ತಿನ ಯಾವ ಸಂತನು ಕೂಡ ಕೊಟ್ಟಿಲ್ಲ ಅಂತಹದೊಂದು ಮಹತ್ವದ ಸ್ಥಾನವನ್ನು ನಮ್ಮ ಪ್ರಭುಗಳು ನೀಡಿದ್ದಾರೆ. ಮಾತು ಅದು 'ಜ್ಯೋತಿರ್ಲಿಂಗ' ಜ್ಯೋತಿ ಎಂದರೆ ಬೆಳಕು, ಲಿಂಗ ಎಂದರೆ ಅರಿವು, ನಾವು ಮಾತನಾಡುವ ಮಾತು ಇತರರಿಗೆ ಬೆಳಕನ್ನು ಕೊಡಬೇಕು, ಅರ್ಥಪೂರ್ಣವಾಗಿರಬೇಕು, ಅರಿವಿನಿಂದ ಕೂಡಿರಬೇಕು ಆಗ ಮಾತ್ರ ಆ ಮಾತು ಜ್ಯೋತಿರ್ಲಿಂಗವಾಗುತ್ತದೆ.

ಮಾತು ಎಂಬುದು ಮಾನವ ಜನಾಂಗಕ್ಕೆ ಭಗವಂತ ನೀಡಿರುವ ಅಮೂಲ್ಯವಾದ ವರ. ಈ ಭೂಮಿ ಮೇಲೆ 84 ಲಕ್ಷ ಜೀವಿಗಳು ಬದುಕುತ್ತಿವೆ. ಅಷ್ಟೊಂದು ಜೀವರಾಶಿಗಳಲ್ಲಿ ಮಾತಿನ ಕಲೆ ಇರುವುದು ಮನುಷ್ಯನಿಗೆ ಮಾತ್ರ ಯಾವ ಪಶು, ಪಕ್ಷಿಗಳಿಗೆ ಮನುಷ್ಯನಂತೆ ಮಾತನಾಡಲು ಬರುವುದೇ ಇಲ್ಲ. ಈ ಮಾತಿನ ಬಲದಿಂದಲೇ ಮನುಷ್ಯ ಎಲ್ಲಾ ಪ್ರಾಣಿ, ಪಕ್ಷಿಗಳ ಮೇಲೆ ಅಧಿಪತ್ಯ, ಸಾರ್ವಭೌಮತ್ವವನ್ನು ಸ್ಥಾಪಿಸಿದ್ದಾನೆ. ಮಾತು ಎನ್ನುವುದು ಅಷ್ಟೊಂದು ಮಹತ್ವದಿಂದ ಕೂಡಿರುವಂತಹದ್ದು ಮೌನ ಭಾವನೆಯಾಗಿ, ಭಾವನೆ ಮಾತಾಗಿ, ಮಾತು ಭಾಷೆಯಾಗಿ, ಭಾಷೆ ಸಾಹಿತ್ಯವಾಗಿ ಈ ಪ್ರಪಂಚದಾದ್ಯಂತ ಬೆಳಕನ್ನ ಚೆಲ್ಲುತ್ತಿದೆ. ಯಾವ ಮಾತು ಪ್ರಪಂಚಕ್ಕೆ ಬೆಳಕನ್ನ ಚೆಲ್ಲುತ್ತಿದೆಯೋ ಅದೇ ಮಾತು 'ಜ್ಯೋತಿರ್ಲಿಂಗ'. ಎಲ್ಲವೂ ಕೂಡ ಮಾತಿನಿಂದ, ಎಲ್ಲರೂ ಕೂಡ ಮಾತಿನಿಂದ, 'ಮಾತಿನಿಂ

ನಗೆ ನುಡಿಯು. ಮಾತಿನಿಂ ಹಗೆ ಕೊಲೆಯು, ಮಾತಿನಿಂ ಸರ್ವಸಂಪದವು, ಲೋಕಕ್ಕೆ ಮಾತೇ ಮಾಣಿಕ್ಯ ಸರ್ವಜ್ಞ' ಅನೇಕರು ಒಂದೇ ಕಡೆ ಸೇರಿಕೊಳ್ಳುತ್ತೇವೆ ಎಂದರೆ ಮಾತು ಕಾರಣ, ನಗಲಿಕ್ಕೆ ಮಾತು ಕಾರಣ, ಹಾಗೆಯೇ ಅಳಲಿಕ್ಕು ಮಾತೆ ಕಾರಣ, ಕೊಲೆ ಸುಲಿಗೆ ಆಗಲಿಕ್ಕೂ ಮಾತೆ ಕಾರಣ. ಮಾತು ಮುತ್ತು ಆಗುತ್ತದೆ, ಮಾತು ಮೃತ್ಯು ಕೂಡ ಆಗುತ್ತದೆ. ಆ ಕಾರಣಕ್ಕಾಗಿಯೇ ಶರಣರು ಹೇಳಿರುವುದು ಮಾತೆಂಬುದು ಜ್ಯೋತಿರ್ಲಿಂಗ.

ಮಾತು ಹೇಗೆ ಮಾತನಾಡಬೇಕು ಎಂದರೆ ಹೀಗಿರಬೇಕು ಗೆಳೆಯಾ, ನೀನಾಡುವ ಮಾತು ಮೃದು ಮಾತು ಮೂರು ಲೋಕ ಗೆಲ್ಲುವುದು ತಿಳಿಯಾ ಒಂದಲ್ಲ, ಎರಡಲ್ಲ, ಮೂರು ಲೋಕವನ್ನ ಗೆಲ್ಲುವಂತ ಶಕ್ತಿ ನಿನ್ನ ಮಾತಿನೊಳಗಿದೆ. ಅದಕ್ಕೆ ಮಾತು ಬಹಳ ಕಿಮ್ಮತ್ತಿನಿಂದ ಇರಬೇಕು ಮಾತಾಡಿದರೆ ಮನಸ್ಸು ತಂಪಾಗಿರಬೇಕು, ಮಾತಿನಿಂದ ಹೃದಯರಳಬೇಕು. ಮಾತಿನಿಂದ ಹೃದಯ ಕೆರಳಬಾರದು ಎಂದಿದ್ದಾರೆ ಶರಣರು ಹಾಗಾಗಿನೆ –

**'ನುಡಿದರೆ ಮುತ್ತಿನ ಹಾರದಂತಿರಬೇಕು**
**ನೋಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು**
**ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು**
**ನುಡಿದರೆ ಲಿಂಗ ಮೆಚ್ಚಿ ಅಹುದು ಅಹುದೆನ್ನಬೇಕು**
**ನುಡಿಯೊಳಗಾಗಿ ನಡೆಯದಿದ್ದರೆ**
**ಕೂಡಲಸಂಗಮದೇವನೆಂತೊಲಿವನಯ್ಯಾ....**

ಬಸವಣ್ಣನವರ ವಚನದಲ್ಲಿ ಈ ನುಡಿಗಳು ಜ್ಯೋತಿರ್ಲಿಂಗವನ್ನು ತೋರಿಸುವಂತಹ ಮಾತುಗಳಾಗಿ ಎಷ್ಟೊಂದು ಅದ್ಭುತ, ಕಾವ್ಯಮಯ, ಅರ್ಥಮಯ, ಭಾವ ಪ್ರಧಾನವಾಗಿ ಬಂದಿವೆ.

ಮಾತಿನೊಳಗೆ ಎಲ್ಲ ವೀರ ಸಾಧುಗಳು ನನಗಿಂತ ನೀವು ಚೆನ್ನಾಗಿ ಮಾತನಾಡಬಹುದು. ನಿನಗಿಂತ ಅವರು ಚೆನ್ನಾಗಿ ಮಾತನಾಡಬಹುದು, ಅವರಿಗಿಂತ ಮತ್ತೊಬ್ಬರು ಚೆನ್ನಾಗಿ ಮಾತನಾಡಬಹುದು. ಪ್ರಪಂಚದೊಳಗೆ ಮಾತನಾಡುವುದು ದೊಡ್ಡ ಮಾತಲ್ಲ ಆದರೆ ನಾವು ಯಾವ ಪ್ರಕಾರದೊಳಗೆ ಮಾತಾಡುತ್ತೇವೆ ಆ ಪ್ರಕಾರ ನಡೆದುಕೊಳ್ಳುವುದು ಮುಖ್ಯ ಅಂತ ಬಸವಣ್ಣನವರು ಹೇಳುತ್ತಾರೆ. ನುಡಿದಂತೆ ನಡೆ.... ಇದೇ ಜನ್ನ ಕಡೆ. ಆ ಕಾರಣಕ್ಕಾಗಿ ಮಾತೂ ಕೂಡ ಅಷ್ಟೊಂದು ಮೌಲ್ಯ ಅದಕ್ಕಿಂತ ಹೆಚ್ಚಿನ ಮೌಲ್ಯ ನಿನ್ನ ನಡೆ.

'ಮಾತು ಆಡಿದರೆ ಹೋಯಿತು ಮುತ್ತು ಹೊಡೆದರೆ ಹೋಯಿತು' ಎಂಬ ಗಾದೆ ಮಾತಿದೆ ಇದಕ್ಕೆ ಪೂರಕವಾಗಿ ಮಹಾಭಾರತದ ಪ್ರಸಂಗ ಒಂದನ್ನು ಇಲ್ಲಿ ನೆನೆಯಬಹುದು. ಪಾಂಡವರು ಇಂದ್ರಪ್ರಸ್ಥ ಅರಮನೆ ಒಂದನ್ನ ಕಟ್ಟಿದಾಗ ಕೌರವರಿಗೆ ಆಮಂತ್ರಣ ನೀಡುತ್ತಾರೆ. ಗೃಹಪ್ರವೇಶಕ್ಕೆ ಬನ್ನಿ ಅಂತ, ಆಗ ದುರ್ಯೋಧನ ರೇಷ್ಮೆಯ ಪೀತಾಂಬರ ತೊಟ್ಟು ರಾಜ ವೈಭೋಗದಲ್ಲಿ ಇಂದ್ರಪ್ರಸ್ಥಕ್ಕೆ ಬರುತ್ತಾನೆ. ಇಂದ್ರಪ್ರಸ್ಥದ ಅರಮನೆ ಎಷ್ಟು ಚಂದವಾಗಿತ್ತು ಎಂದರೆ. ನೆಲಕ್ಕೆ ಹಾಸಿದ ಕಲ್ಲುಗಳು ಕಲ್ಲಿನ ಹಾಗೆ ಇರದೆ ನೀರು ತಿಳಿಯಾಗಿ ನಿಂತಿದೆ, ಏನೊ ಎಂಬಂತೆ ಅಮೃತಶಿಲೆಯಲ್ಲಿ ಕಲ್ಲನ್ನ ಹಾಕಿರುತ್ತಾರೆ. ಇದು ನೀರೇ ಎಂದು ತಿಳಿದ ದುರ್ಯೋಧನ ತನ್ನ ದೋತ್ರವನ್ನ ಸ್ವಲ್ಪ ಮೇಲಕ್ಕೆ ಎತ್ತಿ ಒಳಗೆ ಹೆಜ್ಜೆಯನ್ನು ಹಾಕಿದ ಏಕೆಂದರೆ ನೀರು ಇದಾವೆ ಧೋತ್ರ ನೆನೆಯುತ್ತದೆ, ಎಂದುಕೊಂಡು. ಆದರೆ ಅಲ್ಲಿ ನೀರು ಇರಲಿಲ್ಲ, ಓ ಕಲ್ಲುಗಳೇ ಹೀಗಿವೆ. ಎಂದು ಧೋತ್ರ ಕೆಳಗೆ ಬಿಟ್ಟು ಸಲೀಸಾಗಿ ನಾಲ್ಕು ಹೆಜ್ಜೆ ಮುಂದೆ ಬಂದ ಅದು ನೆಲಕಂಡ ಹಾಗೆ ಕಾಣಿಸಿತು. ಆದರೆ ಅಲ್ಲಿ ನೀರು ಇತ್ತು, ಹಾಗಾಗಿ ನೀರಲ್ಲಿ ಬಿದ್ದ ಬಿಟ್ಟ ದುರ್ಯೋಧನ. ನೀರಲ್ಲಿ ಬಿದ್ದ ದುರ್ಯೋಧನನನ್ನ ಮಹಡಿ ಮೇಲೆ ನಿಂತು ನೋಡುತ್ತಿದ್ದ ದ್ರೌಪದಿ ಒಂದು ಮಾತು ಹೇಳುತ್ತಾಳೆ. ಏನೆಂದರೆ,

ಅಂದಸ್ಯ ಪುತ್ರಹಃ ಅಂದಹಃ

ಕುರುಡನ ಮಗನು ಕೂಡ ಕುರುಡ, ಕುರುಡ ಯಾರೆಂದರೆ ಧೃತರಾಷ್ಟ್ರ, ಆತನ ಮಗನು ದುರ್ಯೋಧನನು ಕೂಡ ಕುರುಡನೆ ಎಂದರ್ಥ. ಇಂತಹ ಕುಹುಕದ ಮಾತು ಕೌರವ ವೀರನಿಗೆ ಮನಸ್ಸಿನೊಳಗೆ ನಾಟುತ್ತ ಗಂಡೆದೆ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಮನೆಗೆ ಕರೆಸಿ ಅಪಮಾನ ಮಾಡಿದ್ದಾಳೆ, ಈ ದ್ರೌಪದಿ. ಅಂದರೆ ತುಂಬಿದ ಸಭೆಯೊಳಗೆ ಇವಳ ಮರ್ಯಾದೆ ತೆಗೆಯಬೇಕೆಂದು ತೀರ್ಮಾನಿಸಿದ ದುರ್ಯೋಧನ. ಜೂಜಾಟವನ್ನು ಆಡಿ ಪಾಂಡವರೆಲ್ಲರನ್ನು ಸೋಲಿಸಿ, ದ್ರೌಪದಿಯನ್ನು ಗೆಲ್ಲುತ್ತಾನೆ. ಮುಂದೆ ಎಂತಹ ಪರಿಣಾಮ ಆಯಿತು, ಎಂದು ಮಹಾಭಾರತ ತಿಳಿದವರಿಗೆಲ್ಲ ಗೊತ್ತಿದೆ. ಯುದ್ಧ ಆಯ್ತು. ಇದನ್ನು ಹೇಳುವ ಉದ್ದೇಶ ಇಷ್ಟೇ. ಮಾತು ಒಂದು

ಸಂಸಾರವನ್ನು ಕೆಡಿಸುತ್ತೆ, ತಂದೆ ಮಕ್ಕಳ ಸಂಬಂಧ ಕೆಡಿಸುತ್ತೆ, ಗಂಡ ಹೆಂಡತಿ ಸಂಬಂಧ ಕೆಡಿಸುತ್ತೆ, ಗುರು ಶಿಷ್ಯರ ಸಂಬಂಧ ಕೆಡಿಸುತ್ತದೆ. ಅದಕ್ಕೆ ನಾವು ಆಡುವ ಮಾತು ಅತ್ಯಂತ ಜಾಗರೂಕತೆಯಿಂದ ಇರಬೇಕು. ಅತ್ಯಂತ ಜವಾಬ್ದಾರಿಯಿಂದ ಇರಬೇಕು ಅತ್ಯಂತ ಪವಿತ್ರವಾಗಿಯೂ ಇರಬೇಕು.

ಆ ಕಾರಣಕ್ಕಾಗಿಯೇ 'ಮಾತು ಮುತ್ತಿನ ಹಾರ ದಂತಿರಬೇಕು. ಮಾಣಿಕ್ಯದ ದೀಪ್ತಿಯಂತಿರಬೇಕು. ಸ್ಫಟಿಕದ ಸಲಾಕೆಯಂತಿರಬೇಕು' ಮತ್ತು ಆ ಶಿವನೇ ಮೆಚ್ಚಿ ಅಹುದು ಅಹುದೆನ್ನಬೇಕು. ಕಣ್ಣು, ಮನ, ನಾಲಿಗೆ ತನ್ನದೆಂದೆನಬೇಡ, ಅನ್ಯರು ಕೊಂದರೆನಬೇಡ ಈ ಮೂರು ನಿನ್ನನ್ನೇ ಕೊಲ್ಲುವವು ಸರ್ವಜ್ಞ, ಆ ಕಾರಣಕ್ಕಾಗಿ ನಾಲಿಗೆ ಬಹಳ ಹಿಡಿತದಲ್ಲಿರಬೇಕು. ಯಾವ ವ್ಯಕ್ತಿ ನಾಲಿಗೆ ಮೇಲೆ ತನ್ನ ಹಿಡಿತವನ್ನು ಸಾಧಿಸಿರುತ್ತಾನೋ ಅಂತಹವರು ಸಮಾಜದೊಳಗೆ ಮೇಲುಗೈ ಸಾಧಿಸುತ್ತಾರೆ, ಎಂದು ವಚನಕಾರರು ತಿಳಿದಿದ್ದರು.

ಇಂತಹದೊಂದು ಯುಕ್ತಿಯನ್ನು ಕನ್ನಡ ವಿಶ್ವ ವಿದ್ಯಾಲಯವು ಧ್ಯೇಯ ವಾಕ್ಯವನ್ನಾಗಿ ಇಟ್ಟುಕೊಂಡಿದೆ. 'ಮಾತೆಂಬುದು ಜ್ಯೋತಿರ್ಲಿಂಗ' ಧ್ಯೇಯ ಶಕ್ತಿ ಉದ್ಧೃತವಾಗಿದೆ. ನಮ್ಮ ಭಾರತೀಯ ಸಾಂಸ್ಕೃತಿಕ ಪರಂಪರೆಯಲ್ಲಿ ಲಿಂಗದ ಕಲ್ಪನೆ ಅದ್ಭುತವಾಗಿದ್ದು, 5000 ವರುಷಗಳಷ್ಟು ಪ್ರಾಚೀನವಾದದ್ದು, ಹರಪ್ಪ ಸಂಸ್ಕೃತಿಯಲ್ಲಿಯೇ ಕಾಣಬರುವ ಕಲ್ಪನೆ. ಅದು ಸೃಷ್ಟಿಯ, ಬ್ರಹ್ಮಾಂಡ ಸೃಷ್ಟಿಯ ಪ್ರತೀಕ. ಜ್ಯೋತಿರ್ಲಿಂಗ ಆಧ್ಯಾತ್ಮಿಕ ಸಂಕೇತವಾಗಿರುವಂತೆ, ಜ್ಞಾನದ ಪ್ರಜ್ಞೆಯ ಸೃಜನಶೀಲ ಪ್ರತಿಭೆಯ ಸಂಕೇತವೂ ಹೌದು. ಮಾತು ಅದರ ರೂಪ ಸಕಲ ಜೀವರಾಶಿಯಿಂದ ಮನುಷ್ಯನನ್ನು ವಿಶಿಷ್ಟವಾಗಿಸುವುದು ಮಾತು. ಮಾತು ಅರಿವಿನ ವ್ಯಕ್ತ ರೂಪ ಹಾಗಾಗಿಯೇ ಅಲ್ಲಮಪ್ರಭುವಿನ 'ಮಾತೆಂಬುದು ಜ್ಯೋತಿರ್ಲಿಂಗ, ಸ್ವರವೆಂಬುದು ಪರತತ್ವ' ವಚನದ ಸಾಲುಗಳನ್ನು ಕನ್ನಡ ವಿಶ್ವವಿದ್ಯಾಲಯ ಧ್ಯೇಯ ವಾಕ್ಯ ವನ್ನಾಗಿ ಮಾಡಿಕೊಂಡಿದೆ ಮತೀಯ ಸಂಕುಚಿತತೆ ಯನ್ನು ಮೀರಿದ ವಿಶ್ವವಿದ್ಯಾಲಯ ವಿಶ್ವ ಜ್ಞಾನ ವ್ಯಾಪ್ತಿಯ ಹುಟ್ಟಿಗೆ ಈ ಸಾಲುಗಳು ಇಂತಹದೊಂದು ವಾಕ್ಯ, ಕಾವ್ಯವಾಗಿದೆ.

ಕಂಡ ಭಕ್ತರಿಗೆ ಕೈ ಮುಗಿವಾತನೇ ಭಕ್ತ
ಮೃದುವಚನವೇ ಸಕಲ ಜಪಂಗಳಯ್ಯಾ
ಮೃದುವಚನವೇ ಸಕಲ ತಪಂಗಳಯ್ಯಾ
ಸದುವಿನಯವೇ ಸದಾಶಿವನೊಲುಮೆಯಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ

**– ಬಸವಣ್ಣನವರು**

## ಕಾಯಕವೇ ಕೈಲಾಸ

**ಭಾವಾರ್ಥ** : ಒಳ್ಳೆಯ ಜೀವನ ಸಾಗಿಸಲು ಹಣದ ಅವಶ್ಯಕತೆ ಇರುತ್ತದೆ. ಹಣ ಸಂಪಾದಿಸಬೇಕಾದರೆ ಕಾಲಹರಣ ಮಾಡದೇ ಸದಾ ಒಳ್ಳೆಯ ಕೆಲಸ ಮಾಡುತ್ತಿರಬೇಕು. ಅವನ ಕೆಲಸವನ್ನು ಎಲ್ಲರೂ ಮೆಚ್ಚಿಕೊಳ್ಳಬೇಕು. ನಿರಂತರ ದುಡಿಯುವವನಿಗೆ ಕೈಲಾಸವೇ ದೊರಕುವುದೆಂದು ಈ ಗಾದೆ ಸೂಚಿಸುತ್ತದೆ.

(ಸಂಗ್ರಹ : ಜನಪದ ಗಾದೆಗಳು)

## ಮಹಾದಾನಿಗಳು





# ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ
## ಪದಾಧಿಕಾರಿಗಳು



**ಶ್ರೀ ಆರ್. ರಾಮನಗೌಡ್ರು**
ಅಧ್ಯಕ್ಷರು



**ಶ್ರೀ ಅಲ್ಲಂ ಚೆನ್ನಪ್ಪ**
ಉಪಾಧ್ಯಕ್ಷರು



**ಶ್ರೀ ಗುರುಸಿದ್ದಸ್ವಾಮಿ**
ಕಾರ್ಯದರ್ಶಿಗಳು



**ಶ್ರೀ ದರೂರು ಶಾಂತನಗೌಡ**
ಸಹಕಾರ್ಯದರ್ಶಿಗಳು



**ಶ್ರೀ ಗೋನಾಳು ರಾಜಶೇಖರಗೌಡ**
ಕೋಶಾಧಿಕಾರಿಗಳು

# ಕಾಲೇಜು ಆಡಳಿತ ಮಂಡಳಿ




ಶ್ರೀ ಕೋರಿ ವಿರುಪಾಕ್ಷಪ್ಪ
ಅಧ್ಯಕ್ಷರು



ಶ್ರೀಮತಿ ಶೈಲಾ ಎಂ. ಅಂಜ್ಲಿ
ಸದಸ್ಯರು



ಶ್ರೀಮತಿ ಅಮೃತ ಮಂಜುನಾಥ
ಸದಸ್ಯರು



ಶ್ರೀ ಕೆ.ಎಂ. ಬಸವರಾಜಯ್ಯ
ಸದಸ್ಯರು



ಶ್ರೀ ಪಿ.ಜಿ. ದೊಡ್ಡಬಸಪ್ಪ
ಸದಸ್ಯರು

# ಸಂಪಾದಕ ಮಂಡಳಿ




ಡಾ. ಎಸ್.ಎಮ್. ಸಿದ್ಧಲಿಂಗಮೂರ್ತಿ
ಪ್ರಾಚಾರ್ಯರು ಹಾಗೂ ಪ್ರಧಾನ ಸಂಪಾದಕರು



ಶ್ರೀ ಜಿ.ಬಿ. ನಾಗನಗೌಡ
ಸಂಪಾದಕರು



ಡಾ. ಎ.ಎಂ. ರಾಜಶೇಖರಯ್ಯ
ಸಂಪಾದಕರು

## ಸಂಪಾದಕ ಮಂಡಳಿ



**ಶ್ರೀ ಬಿ.ಬಿ. ನಾಗನಗೌಡ**
ಸಂಪಾದಕರು



**ಡಾ. ಎ.ಎಂ. ರಾಜಶೇಖರಯ್ಯ**
ಸಂಪಾದಕರು



**ಶ್ರೀಮತಿ ಹೆಚ್. ಆಶಾ**
ಸದಸ್ಯರು



**ಡಾ. ಡಿ. ತಿಪ್ಪೇಸ್ವಾಮಿ**
ಸದಸ್ಯರು



**ಶ್ರೀ ಎಸ್. ಆನಂದ**
ಸದಸ್ಯರು



**ಶ್ರೀ ಬಸಲಿಂಗಪ್ಪ**
ಸದಸ್ಯರು



**ಶ್ರೀ ಸಿ. ನವಾಜ್ ಬಾಷಾ**
ಸದಸ್ಯರು



**ಶ್ರೀ ಜಿ. ಗೋವರ್ಧನ**
ಸದಸ್ಯರು



**ಡಾ. ಆರ್. ಅಣ್ಣೇಶಿ**
ಸದಸ್ಯರು



**ಡಾ. ಡಿ.ಜೆ. ಮಧುಕುಮಾರ್**
ಸದಸ್ಯರು



**ಬೋಧಕ ಸಿಬ್ಬಂದಿ**



**ಅತಿಥಿ ಉಪನ್ಯಾಸಕ ಸಿಬ್ಬಂದಿ**



ಬೋಧಕೇತರ ಸಿಬ್ಬಂದಿ



ಆಡಳಿತ ಮಂಡಳಿ ಸದಸ್ಯರೊಂದಿಗೆ ಮಹಿಳಾ ಸಿಬ್ಬಂದಿ



2022–23ನೇ ಸಾಲಿನಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ
ಕ್ರೀಡಾ ಸಾಧನೆಗೈದವರು



ಕ್ರೀಡಾ ಪ್ರಶಸ್ತಿ ವಿಜೇತ ವಿದ್ಯಾರ್ಥಿಗಳು



ಪ್ರಾಣಿಶಾಸ್ತ್ರ ಪ್ರಯೋಗಾಲಯದ
ವಿದ್ಯಾರ್ಥಿಗಳೊಂದಿಗೆ ಅಧ್ಯಾಪಕರು



ವಿಶ್ವ ಮಹಿಳಾ ದಿನಾಚರಣೆಯಲ್ಲಿ
ಪಾಲ್ಗೊಂಡ ವಿದ್ಯಾರ್ಥಿಗಳು



ಕೊಟ್ಟೂರಿನಲ್ಲಿ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ
ಜಾನಪದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದ ನಮ್ಮ ವಿದ್ಯಾರ್ಥಿಗಳು



ಮತದಾನ ನಮ್ಮ ಹಕ್ಕು ಪ್ರತಿಜ್ಞಾವಿಧಿ ಬೋಧನೆ




ಕ.ಸಾ.ಪ. ವತಿಯಿಂದ ದತ್ತಿ ಕಾರ್ಯಕ್ರಮ



ಭೌತಶಾಸ್ತ್ರ ಪ್ರಯೋಗಾಲಯದಲ್ಲಿ
ವಿದ್ಯಾರ್ಥಿಗಳಿಗೆ ಮಾರ್ಗದರ್ಶನ



ಸಸ್ಯಶಾಸ್ತ್ರ ಪ್ರಯೋಗಾಲಯ



ರಸಾಯನಶಾಸ್ತ್ರ ಪ್ರಯೋಗಾಲಯ



ಕನ್ನಡ ಹಾಗೂ ಶಿಕ್ಷಣ ವಿಭಾಗದ ವಿದ್ಯಾರ್ಥಿಗಳು ನಿಯೋಜಿತ
ಕಾರ್ಯದ ಕಿರು ಪ್ರಬಂಧಗಳನ್ನು ಪ್ರಾಚಾರ್ಯರಿಗೆ ಸಲ್ಲಿಸಿದ್ದು



ಗ್ರಂಥಾಲಯದಲ್ಲಿ ವಿದ್ಯಾರ್ಥಿಗಳ ಗುರುತಿನ ಪತ್ರ
ವಿತರಿಸುತ್ತಿರುವುದು



ಗ್ರಂಥಾಲಯದಲ್ಲಿ ಅಭ್ಯಾಸನಿರತ ವಿದ್ಯಾರ್ಥಿಗಳು



ಮಹಾವಿದ್ಯಾಲಯದ ಕಛೇರಿ



ತರಗತಿಯ ಪ್ರತಿನಿಧಿಗಳು



ರಕ್ತದಾನ ಶಿಬಿರದಲ್ಲಿ ಆಡಳಿತ ಮಂಡಳಿ ಅಧ್ಯಕ್ಷರು ಹಾಗೂ ವಿದ್ಯಾರ್ಥಿಗಳು ರಕ್ತದಾನ ಮಾಡುತ್ತಿರುವುದು



ನುರಿತ ವೈದ್ಯರಿಂದ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ



ಆಂಗ್ಲ ಭಾಷಾ ಪ್ರಯೋಗಾಲಯ





ಮಹಾವಿದ್ಯಾಲಯದ ಪ್ರವೇಶದ್ವಾರ

ಮಹಾವಿದ್ಯಾಲಯದ ಒಳ ಆವರಣ





ಎನ್.ಸಿ.ಸಿ. ವಿದ್ಯಾರ್ಥಿಗಳು

ಗಣರಾಜ್ಯೋತ್ಸವ ಪರೇಡ್‌ನಲ್ಲಿ ವಿದ್ಯಾರ್ಥಿಗಳು





ಎನ್.ಎಸ್.ಎಸ್. ಶಿಬಿರದಲ್ಲಿ ಶ್ರಮದಾನ-ವಿದ್ಯಾರ್ಥಿಗಳಿಂದ

ಬಿ.ಎಸ್ಸಿ. ಅಂತಿಮ ವರ್ಷದ ವಿದ್ಯಾರ್ಥಿಗಳ ಪಠ್ಯಕ್ಕೆ ಪೂರಕವಾಗಿ ಕೈಗಾರಿಕಾ ಅಧ್ಯಯನ ಭೇಟಿ



ಸಾಂಸ್ಕೃತಿಕ ಕಾರ್ಯಕ್ರಮ



Digital Fluency Class



ಕುಲಪತಿಗಳು ವಿಎಸ್‌ಕೆ ವಿಶ್ವವಿದ್ಯಾಲಯ ಬಳ್ಳಾರಿ
ಇವರಿಗೆ ಸನ್ಮಾನ



ವಿದ್ಯಾರ್ಥಿಗಳ ನಿಯೋಜಿತ ಕಾರ್ಯದ
ಶೈಕ್ಷಣಿಕ ಹೊರಸಂಚಾರ



ವಿದ್ಯಾರ್ಥಿನಿಯರ ಥ್ರೋಬಾಲ್ ಪಂದ್ಯಾವಳಿ



ಎನ್.ಎಸ್.ಎಸ್. ವಿದ್ಯಾರ್ಥಿಗಳಿಂದ ಯೋಗ ದಿನಾಚರಣೆ